ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 30 ಗುರುವಾರ 2023

ಸಂಪುಟ: 43 | ಸಂಚಿಕೆ: 39 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕರ್ನಾಟಕ ವಿಧಾನಸಭಾ ಚುನಾವಣೆ ಘೋಷಣೆ





ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್

ಮತದಾನ ಮೇ10

ಫಲಿತಾಂಶ ಮೇ13

ತಕ್ಷಣದಿಂದಲೇ ನೀತಿ ಸಂಹಿತೆ ಜಾರಿ ಒಂದೇ ಹಂತದಲ್ಲಿ ಮತದಾನ

● ರಾಜ್ಯ ವಿಧಾನಸಭೆಯ ಒಟ್ಟು 224 ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಗೆ 36, ಪರಿಶಿಷ್ಟ ಪಂಗಡಕ್ಕೆ 15, ಸಾಮಾನ್ಯ ಕ್ಷೇತ್ರಗಳು 173 ● ಒಟ್ಟು ಮತದಾರರು 5,24,11,557; ಇವರಲ್ಲಿ ಪುರುಷರು 2,62,42,561, ಮಹಿಳೆಯರು 2,59,26,319 ● 80 ವರ್ಷ ಮೇಲ್ಪಟ್ಟ ಮತದಾರರು ಮನೆಯಲ್ಲೇ ಮತದಾನಕ್ಕೆ ಅವಕಾಶ

ನವದೆಹಲಿ, ಮಾ. 29– ಬಹು ನಿರೀಕ್ಷಿತ ಕರ್ನಾಟಕ ವಿಧಾನಸಭೆ ಚುನಾವಣೆಗೆ ಮುಹೂರ್ತ ನಿಗದಿಯಾಗಿದ್ದು, ಮೇ 10 ರಂದು ಮತದಾನ ನಡೆಯಲಿದ್ದು, 13 ರಂದು ಫಲಿತಾಂಶ ಪ್ರಕಟವಾಗಲಿದೆ.

ಪ್ರಸಕ್ತ ವಿಧಾನಸಭೆಯ ಅವಧಿ ಮೇ 23ಕ್ಕೆ ಅಂತ್ಯಗೊಳ್ಳಲಿದ್ದು, ಅದಕ್ಕೂ ಮುನ್ನವೇ ಹೊಸ ಸರ್ಕಾರ ಅಸ್ತಿತ್ವಕ್ಕೆ ತರಲು ಕೇಂದ್ರ ಚುನಾವಣಾ ಆಯೋಗ ದೆಹಲಿಯಲ್ಲಿಂದು ಚುನಾವಣಾ ವೇಳಾಪಟ್ಟಿ ಘೋಷಣೆ ಮಾಡಿದೆ. ಏಪ್ರಿಲ್ 13 ರಂದು ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೂ ಏಕಕಾಲದಲ್ಲಿ ಅಧಿಸೂಚನೆ ಹೊರಡಿಸಲಿದ್ದು, ಇಂದಿನಿಂದಲೇ ನೀತಿ ಸಂಹಿತೆ ಜಾರಿಗೊಂಡಿದೆ. ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಲ್ಲದೆ, 36 ವಿಧಾನಸಭಾ ಕ್ಷೇತ್ರಗಳು ಪರಿಶಿಷ್ಟ ಜಾತಿಗೂ, 15 ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ್ದು, ಉಳಿದ 173 ಸಾಮಾನ್ಯ ಕ್ಷೇತ್ರಗಳಾಗಿವೆ ಎಂದರು. ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 20 ಕೊನೆ ದಿನ. ಏಪ್ರಿಲ್ 21 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಏಪ್ರಿಲ್ 24 ಕಡೇ ದಿನವಾಗಿರುತ್ತದೆ. ▶ 6ನೇ ಪುಟಕ್ಕೆ

ಚುನಾವಣಾ ವೇಳಾಪಟ್ಟಿ

- ಅಧಿಸೂಚನೆ ಏ.13 (ಗುರುವಾರ)
- ನಾಮಪತ್ರ ಸಲ್ಲಿಕೆಗೆ ಕಡೇ ದಿನ ಏ.20 (ಗುರುವಾರ)
- ನಾಮಪತ್ರ ಪರಿಶೀಲನೆ ಏ.21 (ಶುಕ್ರವಾರ)
- ನಾಮಪತ್ರ ಹಿಂಪಡೆಯಲು ಕಡೇ ದಿನಾಂಕ ಏ.24 (ಸೋಮವಾರ)
- ಮತದಾನ ದಿನ ಮೇ 10 (ಬುಧವಾರ)
- ಮತ ಎಣಿಕೆ ಮೇ 13 (ಶನಿವಾರ)

ಕಂಗ್ರಾಟ್ಸ್ 'ಮೈಸೂರು ಮಿತ್ರ'



ಕೇಂದ್ರ ಚುನಾವಣಾ ಆಯೋಗ ಬುಧವಾರ(ಮಾ.29) ಕರ್ನಾಟಕ ವಿಧಾನಸಭೆ ಚುನಾವಣೆಯ ದಿನಾಂಕ ಘೋಷಿಸಿದೆ. 'ಮೈಸೂರು ಮಿತ್ರ'ನ ಬುಧವಾರದ ಸಂಚಿಕೆಯಲ್ಲೇ ಈ ಸಂಬಂಧ 'ರಾಜ್ಯ ವಿಧಾನಸಭಾ ಚುನಾವಣೆಗೆ ಇಂದು ಮುಹೂರ್ತ ಫಿಕ್ಸ್' ಮುಖ್ಯ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ನಾವು ನೋಡಿದ ಯಾವುದೇ ರಾಜ್ಯ, ಪ್ರಾದೇಶಿಕ ಪತ್ರಿಕೆಯಲ್ಲಿ ಈ ಬಗ್ಗೆ ವರದಿಯಾಗಿಲ್ಲ. ಆದರೆ, ನಮ್ಮ 'ಮೈಸೂರು ಮಿತ್ರ'ನಲ್ಲಿ ನಿಖರ ವರದಿ ಪ್ರಕಟವಾಗಿದೆ. ಥ್ಯಾಂಕ್ಸ್ ಮಿತ್ರ...

–ಮಿತ್ರನ ಓದುಗರು

ನಾವ್ ರೆಡಿ...

ಸಿಎಂ ಬಸವರಾಜ ಬೊಮ್ಮಾಯಿ ಉತ್ಸಾಹ–ವಿಶ್ವಾಸ



ಬೆಂಗಳೂರು, ಮಾ. 29(ಕೆಎಂಶಿ)– ಮೇ 10ರಂದು ನಡೆಯಲಿರುವ ಚುನಾವಣೆ ಎದುರಿಸಲು ಬಿಜೆಪಿ ಸನ್ನದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಬಲಿಷ್ಠ ಕೇಡರ್ ಇರುವ, ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಪಕ್ಷ. ಈಗಾಗಲೇ ಹಲವಾರು ಅಭಿಯಾನ ಮಾಡಿದೆ. ನಿರಂತರವಾಗಿ ಪಕ್ಷದ ಸಂಘಟನೆ ಮಾಡಿಕೊಂಡು ಬಂದಿದ್ದು, ಬೂತ್ ಮಟ್ಟದ ಅಭಿಯಾನ, ಮೋರ್ಚಾಗಳ ಸಮ್ಮೇಳನ, ಸಂಕಲ್ಪ ಯಾತ್ರೆ, ವಿಜಯಸಂಕಲ್ಪ ಯಾತ್ರೆ ಕೈಗೊಳ್ಳಲಾಗಿದೆ. ಚುನಾವಣೆ ಎದುರಿಸಲು ಎಲ್ಲಾ ತಯಾರಿ ಮಾಡಿಕೊಂಡಿದೆ ಎಂದರು. ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಿರುವ ಯೋಜನೆಗಳು, ಮೂಲಸೌಕರ್ಯಕ್ಕೆ ನೀಡಿರುವ ಅನುದಾನ, ರಾಜ್ಯ ಸರ್ಕಾರ ಕೈಗೊಂಡಿರುವ ಹಲವಾರು ಜನೋಪಯೋಗಿ ಕಾರ್ಯಕ್ರಮಗಳು, ರೈತಾಪಿ ವರ್ಗ, ಮಹಿಳೆಯರು, ಯುವಕರು, ಎಸ್ಸಿ ಎಸ್ಟಿ, ಒಬಿಸಿ ವರ್ಗಕ್ಕೆ, ಸಾಮಾಜಿಕವಾಗಿ, ಆರ್ಥಿಕವಾಗಿ ತೆಗೆದುಕೊಂಡ ತೀರ್ಮಾನಗಳು, ಬಡವರಿಗೆ ನೀಡಿರುವ ಪ್ರೋತ್ಸಾಹ, ಗ್ರಾಮೀಣ ಪ್ರದೇಶಗಳಲ್ಲಿ ನೀಡಿರುವ ಕುಡಿಯುವ ನೀರಿನ ಯೋಜನೆ, ಕೋವಿಡ್ ವೇಳೆ 10 ಕೆಜಿ ಅಕ್ಕಿ, ಸ್ತ್ರೀ ಸಾಮರ್ಥ್ಯ, ಸ್ವಾಮಿ ವಿವೇಕಾನಂದ ಯೋಜನೆ, ರೈತ ವಿದ್ಯಾನಿಧಿ, ಯೋಜನೆಗಳನ್ನು ನೀಡಿದೆ.

ರಾಜ್ಯದಲ್ಲಿ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿ

ಸರ್ಕಾರಿ ಕಾರು ತೊರೆದ ವಿಪಕ್ಷ ನಾಯಕ ಸಿದ್ದರಾಮಯ್ಯ, ನಿಗಮ-ಮಂಡಳಿ ಅಧ್ಯಕ್ಷರು

ವಿಪಕ್ಷ ನಾಯಕ ಸಿದ್ದರಾಮಯ್ಯ ಮೈಸೂರಲ್ಲಿ ಸರ್ಕಾರಿ ಕಾರು ವಾಪಸ್ ನೀಡಿದರೆ, ಮೇಯರ್ ಶಿವಕುಮಾರ್ ಬೆಂಗಳೂರಲ್ಲೇ ಅಧಿಕೃತ ಕಾರು ತೊರೆದು ಖಾಸಗಿ ವಾಹನದಲ್ಲಿ ಮೈಸೂರಿಗೆ ವಾಪಸ್ಸಾದರು

ಮೈಸೂರು,ಮಾ.29(ಆರ್‌ಕೆ)-ಕರ್ನಾಟಕ ವಿಧಾನಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ವಿಪಕ್ಷ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೇಯರ್ ಶಿವಕುಮಾರ್ ಸೇರಿದಂತೆ ವಿವಿಧ ನಿಗಮ-ಮಂಡಳಿ ಅಧ್ಯಕ್ಷರು ಇಂದು ಸರ್ಕಾರಿ ಕಾರುಗಳನ್ನು ಹಿಂದಿರುಗಿಸಿದ್ದಾರೆ.



ಮೈಸೂರಿನ ರಾಮಕೃಷ್ಣನಗರದ ರಮಾ ಗೋವಿಂದ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ಘೋಷಣೆ ಬಳಿಕ ಖಾಸಗಿ ವಾಹನದಲ್ಲಿ ತೆರಳಿದರು.



ಬೆಂಗಳೂರಿನಲ್ಲಿದ್ದ ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಅವರು ಚುನಾವಣೆ ಘೋಷಣೆ ಬೆನ್ನಲ್ಲೇ ಸರ್ಕಾರಿ ಕಾರನ್ನು ಸೂಚನೆಗೂ ಮುನ್ನವೇ ಹಿಂದಿರುಗಿಸಿದ್ದಾರೆ.

ಇಂದು ಬೆಳಗ್ಗೆ ದೆಹಲಿಯಲ್ಲಿ ಭಾರತ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್, ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ವಿಧಾನಸಭೆ ಚುನಾವಣಾ ವೇಳಾಪಟ್ಟಿ ಪ್ರಕಟಿಸುತ್ತಿದ್ದಂತೆಯೇ ಆ ಕ್ಷಣದಿಂದಲೇ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರು, ತಾವು ಬಳಸುತ್ತಿದ್ದ ಸರ್ಕಾರಿ ಕಾರುಗಳನ್ನು, ತಕ್ಷಣ ತಾವಿದ್ದ ಸ್ಥಳದಲ್ಲೇ ತೊರೆದು ಖಾಸಗಿ ವಾಹನಗಳ ಮೊರೆ ಹೋದರು.

ಮೈಸೂರಿನ ರಾಮಕೃಷ್ಣನಗರದ ರಮಾ ಗೋವಿಂದ ಕಲಾಮಂದಿರದಲ್ಲಿ ಸಮಾಜವಾದಿ ಚಿಂತಕ ದಿವಂಗತ ಪ.ಮಲ್ಲೇಶ್ ಅವರ ಸ್ಮರಣಾರ್ಥ ಏರ್ಪಡಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಚುನಾವಣೆ ಘೋಷಣೆಯಾಗಿ, ತಕ್ಷಣದಿಂದಲೇ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಪ್ರತಿಪಕ್ಷದ ನಾಯಕರಾಗಿ ಸರ್ಕಾರಿ ಹೊಂದಿದ್ದ ಕಾರನ್ನು ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ದೂರವಾಣಿ ಕರೆ ಮಾಡಿ, ಮಾತನಾಡಿ, ಡ್ರೈವರ್ ಮೂಲಕ ಬೆಂಗಳೂರಿಗೆ ಕಳುಹಿಸಿಕೊಟ್ಟರು. ಆ ಸರ್ಕಾರಿ ಕಾರಿನಲ್ಲಿದ್ದ ಸೂಟ್‌ಕೇಸ್, ಬಟ್ಟೆ, ಪುಸ್ತಕ, ನ್ಯೂಸ್‌ಪೇಪರ್ ಎಲ್ಲಾ ಪದಾರ್ಥಗಳನ್ನು ಖಾಸಗಿ ಕಾರಿಗೆ ವರ್ಗಾಯಿಸಿಕೊಂಡ ಸಿದ್ದರಾಮಯ್ಯ, ಒಂದೇ ಹಂತದಲ್ಲಿ ಚುನಾವಣೆ ನಡೆಸುತ್ತಿರುವುದು ಸ್ವಾಗತಾರ್ಹ ಎಂದರು.



ಬುಧವಾರದಿಂದ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಸರ್ಕಾರಿ ಕಾರನ್ನು ಹಿಂದಿರುಗಿಸಿರುವುದು.

ಮೇಯರ್ ಶಿವಕುಮಾರ್: ವಿಧಾನ ಸೌಧದ ಪೌರಾಡಳಿತ ಆಯುಕ್ತರ ಕಚೇರಿಗೆ ತೆರಳಿದ್ದ ಮೇಯರ್ ಶಿವಕುಮಾರ್ ಅವರು ಚುನಾವಣಾ ನೀತಿ ಸಂಹಿತೆ ಜಾರಿಯಾದ ವಿಚಾರ ತಿಳಿಯುತ್ತಿದ್ದಂತೆಯೇ ಬೆಂಗಳೂರಿನಿಂದಲೇ ಚಾಲಕನಿಗೆ ಸರ್ಕಾರಿ ಕಾರನ್ನು ಮೈಸೂರಿಗೆ ಕೊಂಡೊಯ್ಯುವಂತೆ ಹೇಳಿ, ಪಾಲಿಕೆ ಆಯುಕ್ತರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿದರು.

ನಂತರ ಶಿವಕುಮಾರ್ ವಿಧಾನಸೌಧದಲ್ಲಿ ತಮ್ಮ ಅಧಿಕೃತ ಸರ್ಕಾರಿ ಕೆಲಸ ಮುಗಿಸಿಕೊಂಡು ಮಧ್ಯಾಹ್ನದ ನಂತರ ಬೇರೆ ವಾಹನದಲ್ಲಿ ಮೈಸೂರಿಗೆ ಹಿಂದಿರುಗಿದರು. ಅದೇ ರೀತಿ ಉಪ ಮೇಯರ್ ಡಾ.ಆರ್.ರೂಪಾ ಕೂಡ ತಮಗೆ ನೀಡಿದ್ದ ಸರ್ಕಾರಿ ಕಾರನ್ನು ಹಿಂದಿರುಗಿಸಿ ಖಾಸಗಿ ಕಾರು ಅವಲಂಬಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸಗೌಡ (ಮಿರ್ಲೆ) ಸೇರಿದಂತೆ ಮೈಸೂರು ಭಾಗದ ಎಲ್ಲಾ ನಿಗಮ ಮಂಡಳಿ ಮುಖ್ಯಸ್ಥರು ಇಂದು ತಮಗೆ ನೀಡಲಾಗಿದ್ದ ಸರ್ಕಾರಿ ಕಾರುಗಳನ್ನು ತೊರೆದಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ತಮ್ಮ ಅಧೀನಾಧಿಕಾರಿಗಳ ಮೂಲಕ ನಿಗಮ-ಮಂಡಳಿಗಳ ಅಧ್ಯಕ್ಷರ ಸರ್ಕಾರಿ ವಾಹನಗಳನ್ನು ವಾಪಸ್ ಪಡೆದು ಅವುಗಳನ್ನು ಹುಣಸೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸದ ಆವರಣದಲ್ಲಿ ಪಾರ್ಕ್ ಮಾಡಲಾಗಿದೆ. ನೀತಿ ಸಂಹಿತೆ ಜಾರಿಯಾಗುತ್ತಿದ್ದಂತೆಯೇ ಎಲ್ಲಾ ಕಾಮಗಾರಿಗಳ ಟೆಂಡರ್, ಗುದ್ದಲಿ ಪೂಜೆ, ಅಭಿವೃದ್ಧಿ ಯೋಜನೆಗಳ ಉದ್ಘಾಟನೆ, ಸರ್ಕಾರಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲಾಗಿದ್ದು, ಮೈಸೂರು ನಗರದಾದ್ಯಂತ ಎಲ್ಲಾ ರಾಜಕೀಯ ಪಕ್ಷಗಳ ಪೋಸ್ಟರ್, ಬ್ಯಾನರ್, ಫ್ಲೆಕ್ಸ್‌ಗಳನ್ನು ನಗರ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಲಾರಂಭಿಸಿದ್ದಾರೆ. ಈಗಾಗಲೇ ಸ್ಥಾಪನೆಯಾಗಿರುವ ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ತಪಾಸಣಾ ಕಾರ್ಯವನ್ನು ತೀವ್ರಗೊಳಿಸಿರುವ ಪೊಲೀಸರು, ಹಣ, ಮದ್ಯ, ಉಡುಗೊರೆ, ಚಿನ್ನಾಭರಣ, ಮಾರಕಾಸ್ತ್ರಗಳ ಸಾಗಣೆ ಮೇಲೆ ನಿಗಾ ಇರಿಸಿದ್ದಾರೆ.

ಇಡೀ ಚುನಾವಣಾ ವ್ಯವಸ್ಥೆ ಭ್ರಷ್ಟಗೊಳಿಸಿದ್ದು ಬಿಜೆಪಿ

ಮೈಸೂರಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಆರೋಪ

ಮೈಸೂರು, ಮಾ.29(ಆರ್‌ಕೆ)- ಈ ದೇಶದಲ್ಲಿ ಇಡೀ ಚುನಾವಣಾ ವ್ಯವಸ್ಥೆಯನ್ನು ಭ್ರಷ್ಟ ಮಾಡಿದ್ದು ಬಿಜೆಪಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದಿಲ್ಲಿ ಆರೋಪಿಸಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಭಾರತೀಯ ಜನತಾ ಪಾರ್ಟಿಯು ಅಧಿಕಾರ ಹಿಡಿಯುವುದಕ್ಕಾಗಿ ಚುನಾವಣಾ ವ್ಯವಸ್ಥೆಯನ್ನು ಹಾಳು ಮಾಡಿದೆ. ಆ ಮೂಲಕ ಪ್ರಜಾಪ್ರಭುತ್ವದ ಆಶಯಗಳನ್ನು ನಾಶ ಮಾಡಿದೆ. ಜನತಂತ್ರ ವ್ಯವಸ್ಥೆಯಲ್ಲಿ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಡೆಯಲು ಬಿಜೆಪಿ ಅವಕಾಶ ನೀಡಿಲ್ಲ ಎಂದರು.

ಭಾರತ ಚುನಾವಣಾ ಆಯೋಗವು ಒಂದೇ ಹಂತದಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆ ನಡೆಸುತ್ತಿರುವುದು ಸ್ವಾಗತಾರ್ಹ. ಕಾಂಗ್ರೆಸ್ ಚುನಾವಣೆಗೆ ಸಂಪೂರ್ಣ ಸಿದ್ಧವಾಗಿದೆ ಎಂದ ಅವರು, ಆದರೆ ಮುಕ್ತ, ನ್ಯಾಯ ಸಮ್ಮತ, ನಿಷ್ಪಕ್ಷ ಹಾಗೂ ಪಾರದರ್ಶಕವಾಗಿ ಚುನಾವಣೆ ನಡೆಸುವುದು ಆಯೋಗದ ಜವಾಬ್ದಾರಿಯಾಗಿದೆ ಎಂದರು.

ದೇಶದಲ್ಲಿ ಆಪರೇಷನ್ ಕಮಲದ ಮೂಲಕ ಹಿಂಬಾಗಿಲಿನಿಂದ ಅಧಿಕಾರ ಹಿಡಿದ ಬಿಜೆಪಿಗೆ ಕರ್ನಾಟಕದಲ್ಲಿ ಜನ ಪೂರ್ಣ ಪ್ರಮಾಣದಲ್ಲಿ ಬೆಂಬಲ ನೀಡಿಲ್ಲ. ಹಣ, ಅಧಿಕಾರದ ಆಮಿಷ ತೋರಿ ಬೇರೆ ಪಕ್ಷಗಳ ಶಾಸಕರನ್ನು ಸೆಳೆದು ಸರ್ಕಾರ ಮಾಡಿದ್ದನ್ನು ರಾಜ್ಯದ ಜನ ಮರೆತಿಲ್ಲ. ಈಗಲೂ ಪೊಲೀಸರು, ಅಧಿಕಾರಿಗಳನ್ನು ಬಳಸಿಕೊಂಡು ಚುನಾವಣಾ ಅಕ್ರಮ ನಡೆಸುವ ಸಾಧ್ಯತೆ ಇದೆ ಎಂದು ತಿಳಿಸಿದರು.

300 ಆದಾಯ ತೆರಿಗೆ (IT) ಅಧಿಕಾರಿಗಳನ್ನು ಬಳಸಿಕೊಂಡು, ದಾಳಿ ನಡೆಸಿ ಕಾಂಗ್ರೆಸ್ ಕಟ್ಟಿ ಹಾಕಲು ಬಿಜೆಪಿ ಪ್ಲಾನ್ ಮಾಡಿದೆ. ಆ ಮೂಲಕ ಚುನಾವಣೆಯಲ್ಲಿ ಹೇಗಾದರೂ ಮಾಡಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿಯಲು ಹುನ್ನಾರ ನಡೆಸುತ್ತಿದೆ ಎಂದು ಅವರು ಆರೋಪಿಸಿದರು.

ಚುನಾವಣೆ ನಂತರ ರಾಜಕೀಯ ನಿವೃತ್ತಿ: ಈ ಚುನಾವಣೆ ನಂತರ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಪುನರುಚ್ಚರಿಸಿದ ಸಿದ್ದರಾಮಯ್ಯ, ಹುಟ್ಟೂರನ್ನೊಳಗೊಂಡ ಮೈಸೂರಿನ ವರುಣಾ ಕ್ಷೇತ್ರದಿಂದಲೇ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ನಿವೃತ್ತಿಯಾಗಬೇಕೆಂಬುದು ನನ್ನ ಬಯಕೆಯಾಗಿದೆ ಎಂದರು.

ಕಳೆದ ಬಾರಿ ಚಾಮುಂಡೇಶ್ವರಿ ಕ್ಷೇತ್ರದ ಬಗ್ಗೆ ನನಗೆ ಸ್ವಲ್ಪ ಅನುಮಾನವಿದ್ದುದರಿಂದ ಬಾದಾಮಿ ಕ್ಷೇತ್ರದಲ್ಲೂ ಸ್ಪರ್ಧೆ ಮಾಡಿದ್ದೆ. ಈ ಸಲ ನನಗೆ ಯಾವ ಅನುಮಾನವೂ ಇಲ್ಲ. ಆದರೆ, ಕೋಲಾರದ ಜನರು ಒತ್ತಾಯಿಸುತ್ತಿರುವುದರಿಂದ ಅಲ್ಲೂ ನಿಲ್ಲಲು ಟಿಕೆಟ್ ಕೊಡಿ ಎಂದು ಕೇಳಿದ್ದೇನೆ. ಅಂತಿಮ ತೀರ್ಮಾನ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಅವರು ತಿಳಿಸಿದ್ದಾರೆ.

ನನಗೆ ಕ್ಷೇತ್ರ ಇಲ್ಲ ಎನ್ನುವುದೆಲ್ಲಾ ಅರ್ಥವಿಲ್ಲದ ಮಾತು. ನಾನು ಯಾವುದೇ ಕ್ಷೇತ್ರದಿಂದ ನಿಂತರೂ ಗೆಲ್ಲುತ್ತೇನೆ. ಸೋಲುತ್ತೇನೆ ಎಂದಿದ್ದರೆ ಜನ ಆಹ್ವಾನ ಮಾಡ್ತಾರಾ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷಕ್ಕೆ ಸಂವಿಧಾನದ ಆಶಯಗಳ ಮೇಲೆ ವಿಶ್ವಾಸವಿದೆ. ಆಡಳಿತ ಪಕ್ಷ ಹೆಚ್ಚಾಗಿ ಚುನಾವಣಾ ಅಕ್ರಮಗಳನ್ನು ಮಾಡುತ್ತದೆ. ಹಾಗಾಗಿ ಚುನಾವಣಾ ಆಯೋಗವು ಅವರ ಮೇಲೆ ಹೆಚ್ಚಿನ ನಿಗಾ ವಹಿಸಬೇಕು ಎಂದು ಒತ್ತಾಯಿಸಿದರು.



ಬಿಜೆಪಿ-ಜೆಡಿಎಸ್ ಮ್ಯಾಚ್ ಫಿಕ್ಸಿಂಗ್: ಸಿದ್ದರಾಮಯ್ಯ

ಮೈಸೂರು, ಮಾ.29(ಆರ್‌ಕೆ)-ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳುವ ಸೂಚನೆ ಇದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ-ಜೆಡಿಎಸ್‌ನವರು ಈ ಸಲವೂ ಆಂತರಿಕವಾಗಿ ಒಳ ಒಪ್ಪಂದ ಮಾಡಿಕೊಳ್ಳುವುದನ್ನು ತಳ್ಳಿ ಹಾಕಲಾಗದು. ಹಳೇ ಮೈಸೂರು, ಹೊಸ ಮೈಸೂರು ಎಂದೇನಿಲ್ಲ. ಅವರು ಎಲ್ಲಾ ಕಡೆಯೂ ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳುತ್ತಾರೆ ಎಂದರು.

ವರುಣಾದಿಂದ ವಿಜಯೇಂದ್ರ ಕಣಕ್ಕಿಳಿಯುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಾರೇ ನಿಂತರೂ ವರುಣಾದಲ್ಲಿ ನಾನು ಗೆದ್ದೇ ಗೆಲ್ಲುತ್ತೇನೆ. ಕಳೆದ ಚುನಾವಣೆಯಲ್ಲಿ ಸೋತ ಮೇಲೆ ನಾನು ರಾಹು-ಕೇತುಗಳು ಒಂದಾದವು ಎಂದು ಹೇಳಿದ್ದೆ. ಆದರೆ ಈಗ ನಾನು ಆ ಪದ ಬಳಸುವುದಿಲ್ಲ. ಬಳಸಿದರೆ ಅವರು ಸಿಟ್ಟಾಗುತ್ತಾರೆ. ನಾನು ಈ ಬಾರಿ ಗೆದ್ದೇ ಗೆಲ್ಲುತ್ತೇನೆ. ಆದ್ದರಿಂದ ಅದನ್ನು ಉಲ್ಲೇಖಿಸುವ ಅಗತ್ಯವಿಲ್ಲ ಎಂದರು.

ಪ್ರತಿಭಟನೆ: ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸಲು ಎ.ಆರ್.ಕೃಷ್ಣಮೂರ್ತಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕೆಂದು ಬೆಂಬಲಿಗರು ಇಂದು ಬೆಳಗ್ಗೆ ಮೈಸೂರಿನ ರಾಮಕೃಷ್ಣನಗರದ ಸಿದ್ದರಾಮಯ್ಯ ಮನೆ ಮುಂದೆ ಪ್ರತಿಭಟನೆ ನಡೆಸಿದರು.

ಕೃಷ್ಣಮೂರ್ತಿ ಅವರಿಗೆ ಇಂದೇ ಟಿಕೆಟ್ ಘೋಷಣೆ ಮಾಡಬೇಕೆಂದು ಒತ್ತಾಯಿಸಿದ 50ಕ್ಕೂ ಹೆಚ್ಚು ಮಂದಿ ಬೆಂಬಲಿಗರು, ಧರಣಿ ನಡೆಸಿದರಾದರೂ, ಮನೆಯಿಂದ ಹೊರ ಬಂದ ಸಿದ್ದರಾಮಯ್ಯ, ಏನೂ ಪ್ರತಿಕ್ರಿಯೆ ನೀಡದೇ ಕಾರು ಹತ್ತಿ ಹೊರಟು ಹೋದರು. ಅದರಿಂದ ಅಸಮಾಧಾನಗೊಂಡ ಪ್ರತಿಭಟನಾಕಾರರು ಮತ್ತೆ ಘೋಷಣೆ ಕೂಗುತ್ತಿದ್ದಾಗ ಪೊಲೀಸರು ಅವರನ್ನು ಸ್ಥಳದಿಂದ ಸಾಗಹಾಕಿದರು.

ಮನೆ ಮನೆಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್



ಮೈಸೂರು, ಮಾ. 29- ರಾಜ್ಯದಲ್ಲಿರುವ ಭ್ರಷ್ಟ ಬಿಜೆಪಿ ಪಕ್ಷವನ್ನು ಕಿತ್ತೊಗೆದು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರೊಂದಿಗೆ ಸಮೃದ್ಧ ಜೀವನವನ್ನು ನಡೆಸಿರಿ ಎಂದು ಜಿಲ್ಲಾಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ಜನತೆಗೆ ಕರೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಆನಂದೂರು ಪಂಚಾಯಿತಿ ಗುಂಗ್ರಾಲ್ ಛತ್ರ, ಇಲವಾಲ, ನಾಗವಾಲ, ಡಿ.ಎಂ.ಜಿ. ಹಳ್ಳಿ, ಮರಟಿಕ್ಯಾತನಹಳ್ಳಿ, ಬೀರಿಹುಂಡಿ, ಗೋಪಾಲಪುರ, ಧನಗಳ್ಳಿ ಪಂಚಾಯಿತಿಗಳಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಿಜೆಪಿ ಅಧಿಕಾರಕ್ಕೆ ಬಂದ ನಂತರದಲ್ಲಿ 400 ರೂ ಇದ್ದ ಗ್ಯಾಸ್ ಬೆಲೆ 1250 ರೂ. ಆಗಿದೆ. ಪೆಟ್ರೋಲ್, ಡಿಸೆಲ್ ಹಾಗೂ ದಿನಬಳಕೆಯ ವಸ್ತುಗಳ ಬೆಲೆಯು ಹೆಚ್ಚಾಗಿದ್ದು, ಬಡವರು, ಮಧ್ಯಮ ವರ್ಗದವರ ಬದುಕು ದುಸ್ತರವಾಗಿದೆ. ಮೊಸರು, ಮಜ್ಜಿಗೆಯ ಮೇಲೂ ತೆರಿಗೆ ಹಾಕಿ, ರಾಜ್ಯವನ್ನು ಲೂಟಿ ಮಾಡುತ್ತಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ಕಾಲ ಬಂದಿದ್ದು, ಪ್ರತಿಯೊಬ್ಬರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ನಮ್ಮ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಮಾವಿನಹಳ್ಳಿ ಸಿದ್ದೇಗೌಡ ಮಾತನಾಡಿ, ಜಿ.ಟಿ.ದೇವೇಗೌಡರ ಮಾತಿಗೆ ಮರುಳಾಗದೆ ಈ ಬಾರಿ ಬದಲಾವಣೆ ಮಾಡುವುದರೊಂದಿಗೆ ನನಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದರು. ಸಮಾರಂಭದಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಅರುಣ್ ಕುಮಾರ್, ಬೀರಿಹುಂಡಿ ಬಸವಣ್ಣ, ಮಾದೇಗೌಡ, ಸ್ಲಂಬೋರ್ಡ್ ಮಾಜಿ ನಿರ್ದೇಶಕ, ಜಯರಾಮೇಗೌಡ, ಕೃಷ್ಣಕುಮಾರ್‌ಸಾಗರ್, ಕೆಂಪನಾಯ್ಕ, ಆನಂದೂರು ರಾಮೇಗೌಡ, ಯದುಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸ್ವಾಮಿ, ಸ್ವಾಮಿ, ಕಾಮನಕೊಪ್ಪಲು ಕರೀಗೌಡ, ಶಿವೇಗೌಡ, ಮಟನ್ ಬಸವೇಗೌಡ, ನಾಗವಾಲ ನರೇಂದ್ರ, ಮಹೇಶ್ ಕರಕನಹಳ್ಳಿ ಮಂಜು, ಜಿ.ಕೆ.ಬಸವಣ್ಣ, ಧನಗಳ್ಳಿ ಬಸವರಾಜು, ಬಸವೇಗೌಡ ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಮಾ29-ಅಂಗನವಾಡಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇದ್ದ 7 ಅಂಗನವಾಡಿ ಕಾರ್ಯಕರ್ತೆ ಮತ್ತು 1 ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ 16 ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಿದ್ದು, ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಏ.17 (ಸಂಜೆ 5:30) ಕಡೆಯ ದಿನಾಂಕವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಪ್ರೊ. ಕೆ.ವಿ.ಜೋಸೆಫ್

ಮೈಸೂರು, ಮಾ.29-ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥರು ಹಾಗೂ ಎನ್.ಆರ್. ಮೊಹಲ್ಲಾ ನಿವಾಸಿಗಳಾದ ಪ್ರೊ. ಕೆ.ವಿ. ಜೋಸೆಫ್ (94) ಬುಧವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನಾಳೆ (ಮಾ.30) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜಮ್ಮ



ಮೈಸೂರಿನ ಎನ್.ಆರ್.ಮೊಹಲ್ಲಾದ ಭಾಸ್ಕರ್ ಪ್ರಿಂಟರ್ಸ್ ಮಾಲೀಕರಾದ ದಿವಂಗತ ಎಸ್.ಚಂದ್ರಶೇಖರ್ ಅವರ ಪತ್ನಿ ರಾಜಮ್ಮ (86) ಚಾಮರಾಜಪುರಂನಲ್ಲಿರುವ ತಮ್ಮ ಪುತ್ರನ ನಿವಾಸದಲ್ಲಿ ಮಂಗಳವಾರ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸೇವಾ ಜ್ಯೇಷ್ಠತೆ ಆಧಾರದ ಮೇಲೆ ಉಪನ್ಯಾಸಕರ ನಿಯೋಜನೆಗೆ ಆಗ್ರಹ

ಮೈಸೂರು,ಮಾ.29-ದ್ವಿತೀಯ ಪಿಯುಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಏ.5ರಿಂದ ಪ್ರಾರಂಭವಾಗಲಿದೆ. ಈ ಹಿಂದೆ ಮೌಲ್ಯಮಾಪನ ಕಾರ್ಯಕ್ಕೆ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳ ಉಪನ್ಯಾಸಕರನ್ನು ಜ್ಯೇಷ್ಠತೆಯ ಆಧಾರದ ಮೇಲೆ ಮುಖ್ಯ ಪರೀಕ್ಷಕರು, ಉಪ ಮುಖ್ಯ ಮೌಲ್ಯಮಾಪಕರು ಹಾಗೂ ಸಹಾಯಕ ಮೌಲ್ಯಮಾಪಕರಾಗಿ ನಿಯೋಜಿಸಲಾಗುತ್ತಿತ್ತು. ಆದರೆ ಪ್ರಸಕ್ತ ಸಾಲಿನಲ್ಲಿ ಅನುದಾನಿತ ಕಾಲೇಜುಗಳ ಹಿರಿಯ ಉಪನ್ಯಾಸಕರನ್ನು ಕೇವಲ ಸಹಾಯಕ ಮೌಲ್ಯಮಾಪಕರಾಗಿ ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸುತ್ತಿರುವುದು ಸಮಂಜಸವಲ್ಲ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ವಿರೋಧ ವ್ಯಕ್ತಪಡಿಸಿದ್ದಾರೆ.



ಈಗಾಗಲೇ 5-6 ವರ್ಷಗಳ ಕಾಲದಿಂದ ಖಾಸಗಿ ಕಾಲೇಜುಗಳ ಉಪನ್ಯಾಸಕರು ಜ್ಯೇಷ್ಠತೆ ಆಧಾರದ ಮೇಲೆ ಇಲಾಖಾ ನಿರ್ದೇಶನದಂತೆ ಉಪ ಮುಖ್ಯ ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸಿರುವವರು ಮತ್ತು ನಿವೃತ್ತಿ ಅಂಚಿನಲ್ಲಿರುವವರನ್ನು ಈ ಸಾಲಿನಲ್ಲಿ ಸಹಾಯಕ ಮೌಲ್ಯಮಾಪಕರಾಗಿ ನಿಯೋಜಿಸುತ್ತಿರುವುದು ಇಲಾಖೆಯೇ ಮಾಡಿಕೊಂಡ ನಿಯಮಗಳಿಗೆ ವ್ಯತಿರಿಕ್ತವಾಗಿದೆ. ಮೌಲ್ಯಮಾಪಕರಲ್ಲಿ ತಾರತಮ್ಯ ಭಾವನೆ ಉಂಟು ಮಾಡಲಾಗುತ್ತಿದೆ. ಸೇವಾ ಜ್ಯೇಷ್ಠತೆಯಲ್ಲಿ ಹಿರಿಯರಾದವರು ತಮಗಿಂತ ಕಿರಿಯರ ಅಡಿಯಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವುದು ಮಾನಸಿಕವಾಗಿ ನೋವುಂಟು ಮಾಡುತ್ತದೆ. ಇದರಿಂದಾಗಿ ಮೌಲ್ಯಮಾಪಕರಲ್ಲಿ ಅಸಹಕಾರ ಉಂಟಾಗಿ, ವಿದ್ಯಾರ್ಥಿಗಳ ಭವಿಷ್ಯತ್ತಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸುಗಮ ಮೌಲ್ಯಮಾಪನದ ಹಿತದೃಷ್ಟಿಯಿಂದ ಕಳೆದ 3 ವರ್ಷಗಳಲ್ಲಿ ಮೌಲ್ಯಮಾಪನಕ್ಕೆ ಇಲಾಖೆ ನಿಯಮದ ಅಡಿಯಲ್ಲಿ ರೂಪಿತವಾದ ಮಾರ್ಗಸೂಚಿಯಂತೆ ಸರ್ಕಾರಿ/ಅನುದಾನಿತ/ಅನುದಾನ ರಹಿತ ಕಾಲೇಜುಗಳ ಉಪನ್ಯಾಸಕರ ನಡುವೆ ತಾರತಮ್ಯ ಉಂಟಾಗದಂತೆ ಜ್ಯೇಷ್ಠತೆ ಆಧಾರದ ಮೇಲೆ ಎಂದಿನಂತೆ ನೇಮಕ ಮಾಡುವ ಮೂಲಕ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಸುಸೂತ್ರವಾಗಿ ನಡೆಸಲು ಕ್ರಮ ವಹಿಸಬೇಕೆಂದು ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯನ್ನು ಮರಿತಿಬ್ಬೇಗೌಡ ಆಗ್ರಹಪಡಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.3.2023 ಗುರುವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023 ರಿಂದ 30.03.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 7 ಗಂಟೆಗೆ ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಬೆಳಗ್ಗೆ 10ಕ್ಕೆ ಸಗ್ರಹ ಮಖ ನವಚಂಡಿಯಾಗ, ಮಧ್ಯಾಹ್ನ 1ಕ್ಕೆ ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು-ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ

■ **ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ನಾಲ್ಕನೇ ರಾಮೋತ್ಸವ, ಬೆಳಗ್ಗೆ 9ಕ್ಕೆ ರಾಮತಾರಕ ಹೋಮ, ಬೆಳಗ್ಗೆ 11ಕ್ಕೆ ಪಟ್ಟಾಭಿಷೇಕ ಪೂಜೆ, ಪಾರಾಯಣದ ನಂತರ ನೃತ್ಯ ಸೇವೆ: ವಿದುಷಿ ಕಾತ್ಯಾಯಿನಿ, ಸಂಗೀತ ಸೇವೆ: ಕು.ಅರುಣ ತ್ಯಾಗರಾಜು, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ, ಸಂಜೆ 6 ರಿಂದ ಶ್ರೀಕರ ಅವರಿಂದ ದೇವರನಾಮ, ಸಂಜೆ 6.30 ರಿಂದ ವಿದುಷಿ ಶುಭಾ ರಾಘವೇಂದ್ರ ಮತ್ತು ಅವರ ಪುತ್ರಿ ಕು. ತನುಶ್ರೀ ಅವರಿಂದ ದೇವರನಾಮ ಮತ್ತು ಜಾನಪದ ಗೀತೆಗಳು, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, 'ಐ' ಬ್ಲಾಕ್, ರಾಮಕೃಷ್ಣನಗರ.



■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟೆಬಲ್ ವಿಶ್ವಸ್ಥ ಮಂಡಳಿ:** ಶ್ರೀ ರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ಡಿಂಪಲ್ ಅವರಿಂದ 'ಕೃಷ್ಣೆ ನಾಟ್ಯಶಾಲೆ' ನೃತ್ಯ ಪ್ರದರ್ಶನ, ಸ್ಥಳ: ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ವಿಶ್ವಸ್ಥ ಮಂಡಳಿ ಆವರಣ, ಯಾದವಗಿರಿ, ಸಂಜೆ 6 ಗಂಟೆಗೆ.

■ **ಶ್ರೀರಾಮ ಸೇನಾ ಮಂಡಳಿ ಚಾರಿಟೆಬಲ್ ಟ್ರಸ್ಟ್, ಮೈಸೂರು ಉತ್ತರ :** 29ನೇ ಶ್ರೀ ರಾಮನವಮಿ ಸಂಗೀತೋತ್ಸವ-2023, ಸಂಜೆ 5.15 ರಿಂದ ಎಸ್.ಜಿ.ಪಿ. ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಾದ ಪಂಚಮಿ ಬಿದನೂರು, ರೋಹಿತ್ ಕಶ್ಯಪ್, ರೋಹಿತ್ ಕಲಿಲಾ, ರೋಹನ್ ನಾರಗನ್, ರಂಜಿತ್ ಪ್ರಣವ್ ಮತ್ತು ಮಾನಸ ಸಾಮಗ ಅವರಿಂದ ತಬಲ ಮೇಳ, ಸಂಜೆ 6.15ರಿಂದ. ಶ್ರೀಮತಿ ಸುಜಾತ ಗುರವ ಅವರಿಂದ ಹಿಂದೂಸ್ಥಾನಿ ಗಾಯನ, ಪಂಡಿತ್ ಭೀಮಾ ಶಂಕರ್-ತಬಲ, ಪಂಡಿತ್ ವೀರಭದ್ರಯ್ಯ ಹಿರೇಮಠ-ಹಾರ್ಮೋನಿಯಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ,

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ :** ಶ್ರೀರಾಮನವಮಿ ಪ್ರಯುಕ್ತ ಬೆಳಗ್ಗೆ 8ಕ್ಕೆ ಅಭಿಷೇಕ, 11ಕ್ಕೆ ಜಿಎಸ್‌ಬಿ ಮಹಿಳಾ ಭಜನಾ ಮಂಡಳಿಯಿಂದ ಭಜನೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ ನಂತರ ಪ್ರಸಾದ ವಿನಿಯೋಗ, ಸಂಜೆ 6.15 ರಿಂದ ರಾತ್ರಿ 8ರವರೆಗೆ ಶ್ರೀಮತಿ ಮಮತಾ ಕಾಮತ್ ಮತ್ತು ಮಂಜುನಾಥ ಕಾಮತ್ ಅವರಿಂದ ಭಜನೆ ಕಾರ್ಯಕ್ರಮ, ಸ್ಥಳ: ಶ್ರೀ ಕಾಶೀಮಠದ ಶ್ರೀರಾಮಮಂದಿರ, ಶ್ರೀರಾಮಪೇಟೆ.

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** ಶ್ರೀರಾಮನವಮಿ ಪ್ರಯುಕ್ತ ಬೆಳಗ್ಗೆ 7.30ರಿಂದ 9 ರವರೆಗೆ ಸಂಕಲ್ಪ, ಬೆಳಗ್ಗೆ 9.30ರಿಂದ 12ರವರೆಗೆ ತಾರಕ ಹೋಮ, ನವಗ್ರಹ ಪೂರ್ವಕ ಶನಿಶಾಂತಿ, ಪೂರ್ಣಾಹುತಿ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಇರ್ವಿನ್ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ- ಬಾನುಲಿ ಸರಣೀ, ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ - ಜಯಂತಿ ವಿ.ಭಟ್, ಟಿ.ಎಸ್.ಸ್ನೇಹಾ, ಕೆ.ಶ್ರೇಯಾ, ವ್ಯಾಖ್ಯಾನ-ಡಾ. ಬಿ.ವಿ.ವಸಂತಕುಮಾರ್, 7.15 ಭಾವಗೀತೆ- ಪುತ್ತೂರು ನರಸಿಂಹ ನಾಯಕ್, 8.30 ಗೆಲುವಿನ ಗುಟ್ಟು-ಪ್ರಹಸನ, ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ-ಡಾ.ಮೈಸೂರು ಉಮೇಶ್, 10.00 ಡಾ.ಆರ್.ಎನ್.ಶ್ರೀಲತಾ- ಹಾಡುಗಾರಿಕೆ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು-ಕವಿತಾ ಸಾದರ್, 4.00 ಜನಪದ ಸಂಗೀತ-ನಾಗಣ್ಣ ಮತ್ತು ತಂಡ-ತತ್ವಪದಗಳು, 6.50 ಕೃಷಿರಂಗ-ಕಿಸಾನ್‌ವಾಣಿ-ಬದನೆ ಹಾಗೂ ಕುಂಬಳ ಜಾತಿಯ ತರಕಾರಿ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣೆ ಕುರಿತು ಡಾ.ಜಿ.ಕೆ.ರಾಮೇಗೌಡ ಅವರೊಂದಿಗೆ ಸಂದರ್ಶನ, 8.15 ಯುವವಾಣಿ, 9.30 ಕನ್ನಡ ಭಾರತಿ, 10.00 ನಾಟಕ

■ **ಶ್ರೀ ರಾಮ ಸೇವಾ ಮಂಡಲಿ :** 70ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ರಾಮ ಕಳಶ ಸ್ಥಾಪನೆಯೊಂದಿಗೆ ವೈದಿಕ ಕಲಾಪಗಳು, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ :** ಸಂಗೀತೋತ್ಸವ, ಸಂಜೆ 5.30ಕ್ಕೆ ಉದ್ಘಾಟನೆ: ವಿದುಷಿ ಜಯಂತಿ ಕುಮರೇಶ್, ಮುಖ್ಯ ಅತಿಥಿಗಳು: ಕೈಗಾರಿಕೋದ್ಯಮಿ ಡಾ.ಎಂ.ಜಗನ್ನಾಥ ಶೆಣೈ, ಅಧ್ಯಕ್ಷತೆ: ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಡಾ.ಎನ್.ಶ್ರೀರಾಮ್, ಸಂಜೆ 6.30ರಿಂದ ವಿದುಷಿ ಜಯಂತಿ ಕುಮರೇಶ್ ಅವರಿಂದ ವೀಣಾ ವಾದನ, ವಿದ್ವಾನ್ ಅನಂತ ಆರ್.ಕೃಷ್ಣ (ಮೃದಂಗ), ವಿದ್ವಾನ್ ಗುರು ಪ್ರಸನ್ನ (ಕಂಜೀರ), ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ.

■ **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ ಉದ್ಘಾಟನೆ : ಸಂಸ್ಥೆಯ ಅಧ್ಯಕ್ಷ ಆರ್. ಗುರು, ವಿದ್ವಾನ್ ಹರೀಶ್ ಪಾಂಡವ್ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಸುನೀಲ್ ಸುಬ್ರಹ್ಮಣ್ಯ- ಮೃದಂಗ, ವಿದ್ವಾನ್ ಶರತ್ ಕೌಶಿಕ್-ಘಟ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.

■ **ಶ್ರೀರಾಮ ಮಂದಿರ :** ಶ್ರೀರಾಮ ನವಮಿ ಪ್ರಯುಕ್ತ ಶ್ರೀರಾಮನಿಗೆ ವಿಶೇಷ ಅಲಂಕಾರ, ಅಭಿಷೇಕ, ಪೂಜೆ, ಮಂಗಳಾರತಿ, ಬೆಳಗ್ಗೆ 8 ರಿಂದ 11 ರವರೆಗೆ ಶ್ರೀ ರಾಮ ಮಂದಿರ ಭಜನಾ ಮಂಡಳಿ ಸದಸ್ಯರಿಂದ ಭಜನೆ, ಸಂಜೆ 6.30 ರಿಂದ ನಾದಯೋಗಿ ಮೈಸೂರು ವಿ. ಅಂಬಾಪ್ರಸಾದ್ ಮತ್ತು ಅವರ ಮಕ್ಕಳಿಂದ ಪಿಟೀಲು ವಾದನ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಶ್ರೀರಾಮ ಭಕ್ತವೃಂದ ಸೇವಾ ಟ್ರಸ್ಟ್ :** ಶ್ರೀರಾಮನವಮಿ, ಬೆಳಗ್ಗೆ 8ಕ್ಕೆ ಶ್ರೀ ರಾಮದೇವರಿಗೆ, ದೇವತಾ ಮೂರ್ತಿಗಳಿಗೆ ವಿಶೇಷ ಅಭಿಷೇಕ, ಬೆಳಗ್ಗೆ 10ಕ್ಕೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಬೆಳಗ್ಗೆ 11ಕ್ಕೆ ಅಲಂಕಾರ, ದೇವತಾರ್ಚನೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಟ್ರಸ್ಟ್ ಆವರಣ, ಜೆ.ಪಿ.ನಗರ.

■ **ಶ್ರೀ ಉತ್ತರಾದಿ ಮಠ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಬೆಳಗ್ಗೆ 8ಕ್ಕೆ ಪಂಡಿತ್ ಶ್ರೀ ಆದ್ಯ ಗೋವಿಂದಾಚಾರ್ಯ ಅವರಿಂದ ಮುಖ್ಯ ಪ್ರಾಣದೇವರಿಗೆ ಹಾಲಿನ ಅಭಿಷೇಕ, ರಾಮತಾರಕ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಉಪಸ್ಥಿತರು : ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಸಮಾಜ ಸೇವಕ ವಿಕ್ರಂ ಅಯ್ಯಂಗಾರ್, ಸ್ಥಳ: ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಯಾದವಗಿರಿ.

■ **ಶ್ರೀರಾಮ ದೇವಸ್ಥಾನ :** ಶ್ರೀರಾಮ ದೇವರ ಹಾಗೂ ನವಗ್ರಹ ವಿಗ್ರಹಗಳ ಕಳಾಕರ್ಷಣೆ ನಿಮಿತ್ತ ಹೋಮ ಹವನ ಕಾರ್ಯಕ್ರಮ, ಸಂಜೆ 6ರಿಂದ ಪುಣ್ಯಾಹ, ಕಳಶಸ್ಥಾಪನೆ, ಸ್ಥಳ: ಶ್ರೀರಾಮ ದೇವಸ್ಥಾನ, ಅರಮನೆ ಉತ್ತರ ಕೋಟೆ ಬಾಗಿಲು.

■ **ಎಎಚ್‌ಪಿ ರಾಷ್ಟ್ರೀಯ ಭಜರಂಗ ದಳ :** ಶ್ರೀರಾಮನವಮಿ ಪ್ರಯುಕ್ತ ಪಾನಕ, ಮಜ್ಜಿಗೆ ವಿತರಣೆ, ಸ್ಥಳ : ಹೈವೇ ಸರ್ಕಲ್, ಮಧ್ಯಾಹ್ನ 12ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ:** ಶ್ರೀ ರಾಮನವಮಿ ಕಾರ್ಯಕ್ರಮಗಳು, ಬೆಳಗ್ಗೆ 9.30 ರಿಂದ ಅಭಿಷೇಕ, ಅರ್ಚನೆ, ಪೂಜಾ ಕಾರ್ಯಕ್ರಮ, ಮಹಾಮಂಗಳಾರತಿ, ಸಂಜೆ 5 ರಿಂದ ವಿದುಷಿ ಡಾ. ಎಂ.ಎ. ಜ್ಯೋತಿ ಅವರಿಂದ ಕರ್ನಾಟಕ ಸಂಗೀತ, ಸ್ಥಳ: ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.

ಸಮಾಜವಾದಿ ಚಿಂತಕ ಪ.ಮಲ್ಲೇಶ್ ಸ್ಮರಣಾರ್ಥ ವಿಚಾರ ಸಂಕಿರಣ

ಇಂದು ಚುನಾವಣಾ ವ್ಯವಸ್ಥೆ ಭ್ರಷ್ಟಗೊಂಡಿದ್ದರೆ ಅದಕ್ಕೆ ರಾಜಕಾರಣಿಗಳೇ ಕಾರಣ

ಮಾಜಿ ಸಿಎಂ ಸಿದ್ದರಾಮಯ್ಯ ವಿಷಾದ; ಆಗ ಜನರೇ ನಮಗೆ ಹಣ ನೀಡುತ್ತಿದ್ದರು; ಈಗ ಹಣ ಇಲ್ಲದೆ ಓಟು ಹಾಕದಂತ ಸ್ಥಿತಿ

ಮೈಸೂರು,ಮಾ.29(ಪಿಎಂ)–ಹಿಂದೆ ಚುನಾವಣೆಗಳಲ್ಲಿ ಅಭ್ಯರ್ಥಿಗಳಿಗೆ ಜನವಾಣೆ ವೆಚ್ಚಕ್ಕಾಗಿ ಜನತೆಯೇ ಹಣ ಕೊಡುತ್ತಿದ್ದರು. ಆದರೆ ಇಂದು ಹಣ ಪಡೆಯದೇ ಸ್ವಯಂ ಪ್ರೇರಣೆಯಿಂದ ಮತ ಹಾಕುವ ಪರಿಸ್ಥಿತಿ ಇಲ್ಲ. ಇದಕ್ಕೆ ಕಾರಣ ಜನರಲ್ಲ. ಇಂದು ಚುನಾವಣಾ ವ್ಯವಸ್ಥೆ ಭ್ರಷ್ಟಗೊಂಡಿದ್ದರೆ ಅದಕ್ಕೆ ರಾಜಕಾರಣಿಗಳೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದಿಸಿದರು.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗ ಮಂದಿರದಲ್ಲಿ ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ (ನೃಪತುಂಗ ಶಿಕ್ಷಣ ಸಂಸ್ಥೆಗಳು) ವತಿಯಿಂದ ಸಮಾಜ ವಾದಿ ಚಿಂತಕ ಪ.ಮಲ್ಲೇಶ್ ಸ್ಮರಣಾರ್ಥ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಪ.ಮಲ್ಲೇಶ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಪ್ರಸ್ತುತ ರಾಜಕಾರಣದಲ್ಲಿ ಪ್ರಾಮಾಣಿಕತೆ ಕಷ್ಟದ ಕೆಲಸ. ನಾನು ತಾಲೂಕು ಬೋರ್ಡ್‌ಗೆ ಸ್ಪರ್ಧಿಸಿದಾಗ 3,500 ರೂ. ವೆಚ್ಚವಾಗಿತ್ತು ಆಗ ನನ್ನ ಬಳಿ ಯಾವುದೇ ವಾಹನ ಇರಲಿಲ್ಲ. ನಮ್ಮ ಪಕ್ಕದೂರಿನ ಮಹೇಶ್ ಎಂಬ ಸ್ನೇಹಿತ ಸ್ಕೂಟರ್‌ನಲ್ಲಿ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಪ್ರಚಾರ ನಡೆಸಿದ್ದೆ. ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದಾಗ ನಮ್ಮ ಊರಿನವರೇ 10 ಸಾವಿರ ಸಂಗ್ರಹಿಸಿ ಕೊಟ್ಟಿದ್ದರು. ಜಾರ್ಜ್ ಫರ್ನಾಂಡಿಸ್ 10 ಸಾವಿರ ಕೊಟ್ಟಿದ್ದರು. ಹಳ್ಳಿಗಳಿಗೆ ಭೇಟಿ ನೀಡಿದಾಗ ಜನರೇ 43 ಸಾವಿರ ರೂ. ಹಣ ಸಂಗ್ರಹಿಸಿ ಕೊಟ್ಟಿದ್ದರು. ಆದರೆ ಇಂದು ಆ ರೀತಿಯಿಲ್ಲ. ಹಣ ಪಡೆಯದೇ ಸ್ವಯಂಪ್ರೇರಿತವಾಗಿ ಓಟು ಹಾಕುವ ಪರಿಸ್ಥಿತಿ ಇಲ್ಲ. ಇಂತಹ ವ್ಯವಸ್ಥೆಗೆ ಜನತೆ ಕಾರಣರಲ್ಲ. ಇದಕ್ಕೆ ನಾವೇ ರಾಜಕಾರಣಿಗಳು ಕಾರಣ ಎಂದು ಬೇಸರ ವ್ಯಕ್ತಪಡಿಸಿದರು.

ಪ.ಮಲ್ಲೇಶ್ ನನ್ನ ಮೊದಲೆರಡು ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 2ನೇ ಚುನಾವಣೆಯಲ್ಲಿ ನನಗೆ ಜನ ಕೊಟ್ಟ 3 ಲಕ್ಷ ಹಣವನ್ನು ಪ.ಮಲ್ಲೇಶ್ ಅವರಿಗೆ ಕೊಟ್ಟಿದ್ದೆ. ಚುನಾವಣೆ ಬಳಿಕ 1.75 ಲಕ್ಷ ರೂ. ಉಳಿದಿದೆ ಎಂದು ವಾಪಸ್ಸು ಕೊಟ್ಟಿದ್ದರು. ಅಲ್ಲದೆ, ಅವರೇ ನನಗೆ ಒಂದು ನಿವೇಶನ ಕೊಡಿಸಿ, ಅವರೇ ನಿಂತು ಮನೆ ಕಟ್ಟಿಸಿಕೊಟ್ಟರು. ಆ ಕಾಲದಲ್ಲಿ ಕೇವಲ 3 ಲಕ್ಷ 75 ಸಾವಿರಕ್ಕೆ ಮನೆ ನಿರ್ಮಾಣವಾಗಿತ್ತು. ಪ್ರತಿ ಪೈಸೆಗೆ ಲೆಕ್ಕ ಇಟ್ಟಿದ್ದರು. ಎಂದೂ ಅಧಿಕಾರ, ಹಣಕ್ಕೆ ಆಸೆಪಟ್ಟವರಲ್ಲ. ಅವರು ಎಂದೂ ಜಾತಿ ಹೇಳಿಕೊಂಡಿರಲಿಲ್ಲ. ಅನೇಕ ಜನ ಸ್ನೇಹಿತರು, ಯುವಕರು, ದಲಿತರು, ಹಿಂದುಳಿದವರ ಸೇರಿದಂತೆ ಬಹಳ ಜನಕ್ಕೆ ಸಹಾಯ ಮಾಡಿದ್ದಾರೆ. ಅನೇಕರು ರಾಜಕಾರಣದಲ್ಲಿ ಬೆಳೆಯಲು ಸಹಕಾರ ನೀಡಿದ್ದಾರೆ ಎಂದು ಸ್ಮರಿಸಿದರು.

ಪ.ಮಲ್ಲೇಶ್ ಮನುಷ್ಯತ್ವ ಇದ್ದಂತಹ ಸಮಾಜಮುಖಿ ಚಿಂತಕ. 1971ರಲ್ಲಿ ಮಲ್ಲೇಶ್ ಅವರ ಪರಿಚಯವಾಯಿತು. ಆಗ ನಾನು ಲಾ ಕಾಲೇಜಿನಲ್ಲಿ ಓದುತ್ತಿದ್ದೆ. ಅವರು ಮಯೂರ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದರು. ಪ್ರೊ.ನಂಜುಂಡಸ್ವಾಮಿಯವರು ಲಾ ಕಾಲೇಜಿನ ಪ್ರೊಫೆಸರ್ ಆಗಿದ್ದರು.



ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಪ.ಮಲ್ಲೇಶ್ ಸ್ಮರಣಾರ್ಥ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಪ.ಮಲ್ಲೇಶ್ ಅವರ ಭಾವಚಿತ್ರಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಇನ್ನಿತರ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಪ್ರೊ.ನಂಜುಂಡಸ್ವಾಮಿ, ಪ.ಮಲ್ಲೇಶ್ ಸಮಾಜವಾದಿ ಯುವ ಜನ ಸಭಾದಲ್ಲಿ ಮುಂಚೂಣಿಯಲ್ಲಿದ್ದರು. ಕಾಲೇಜು ಮುಗಿದ ಬಳಿಕ ಮೈಸೂರು ಕೋರ್ಟ್ ಬಳಿ ಇದ್ದ ಹೋಟೆಲ್‌ಗೆ ನಂಜುಂಡಸ್ವಾಮಿಯವರು ನಮ್ಮನ್ನು ಟೀ ಕುಡಿಸಲು ಕರೆದೊಯ್ಯುತ್ತಿದ್ದರು. ನಂಜುಂಡಸ್ವಾಮಿಯವರು ಚಾರ್‌ಮಿನಾರ್ ಸಿಗರೇಟು ಸೇದುತ್ತಿದ್ದರು. ನಾವು ಸಿಜರ್ ಸಿಗರೇಟ್ ಸೇದುತ್ತಿದ್ದೆವು. ಆದರೆ ಮಲ್ಲೇಶ್ ಅವರಿಗೆ ಸಿಗರೇಟು, ಮದ್ಯದ ಅಭ್ಯಾಸ ಇರಲಿಲ್ಲ. ಅವರು ಶುದ್ಧ ಸಸ್ಯಾಹಾರಿ ಎಂದು ಹೇಳಿದರು.

ಕಾಂಗ್ರೆಸ್ ಕೈಗೊಳ್ಳದ ಕಾರ್ಯಗಳ ಬಗ್ಗೆ ಚರ್ಚೆ: ಪ.ಮಲ್ಲೇಶ್ ಅವರ ಪ್ರೆಸ್‌ಗೆ ಹೋದಾಗ, ಸಮಾಜವಾದಿ ಚಳುವಳಿ ಬಗ್ಗೆ ಮಾತನಾಡುತ್ತಿದ್ದೆವು. ಆಗಿನ್ನೂ ರೈತ ಚಳುವಳಿ ಪ್ರಾರಂಭ ಆಗಿರಲ್ಲಿ. ಭಾಷಾ ಚಳುವಳಿ ಮುಂಚೂಣಿಗೆ ಬಂದಿರಲಿಲ್ಲ. ಸಮಾಜವಾದಿ ಚಳುವಳಿ ವ್ಯಾಪಕವಾಗಿತ್ತು. ಪ್ರತಿ ಸೋಮವಾರ ಸಂಜೆ ಮಹಾರಾಜ ಕಾಲೇಜು ಕ್ಯಾಂಟಿನ್‌ನಲ್ಲಿ ಸೇರುತ್ತಿದ್ದೆವು. ಮಲ್ಲೇಶ್, ನಂಜುಂಡಸ್ವಾಮಿ, ಪ್ರೊ.ರಾಮದಾಸ್, ಶ್ರೀರಾಮ್, ಒಮ್ಮೊಮ್ಮೆ ತೇಜಸ್ವಿ ಇಲ್ಲಿಗೆ ಬರುತ್ತಿದ್ದರು. ಗಾಂಧಿ, ಲೋಹಿಯಾ, ಅಂಬೇಡ್ಕರ್ ವಿಚಾರ ಚರ್ಚೆ ಮಾಡುತ್ತಿದ್ದೆವು. ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಏನೇನು ಮಾಡಿಲ್ಲವೆಂದೂ ಚರ್ಚೆ ಮಾಡುತ್ತಿದ್ದವು. ಹೊಸ ರಾಜಕೀಯ ಚಳುವಳಿ ಮೂಲಕ ಹೊಸ ವ್ಯವಸ್ಥೆ ಬರಬೇಕು ಎಂಬ ಉದ್ದೇಶ ಅಂದಿನದಾಗಿತ್ತು ಎಂದು ಹೇಳಿದರು.

ಪ.ಮಲ್ಲೇಶ್ ನಿಧನದ ನಂತರ ಇನ್ನೊಬ್ಬರು ಅವರ ಜಾಗ ಭರ್ತಿ ಮಾಡುತ್ತಾರೆಂದು ನನಗೆ ಅನ್ನಿಸುತ್ತಿಲ್ಲ. ಅವರು ಅಪ್ಪಟ ಗಾಂಧಿವಾದಿ. ನನಗೆ ರಾಜಕಾರಣದಲ್ಲಿ ಸ್ಥಾನಮಾನ ಸಿಕ್ಕಿದ್ದರೆ ಅದಕ್ಕೆ ಮಲ್ಲೇಶ್ ಅವರೂ ಒಬ್ಬ ಕಾರಣಕರ್ತರು. ಜೊತೆಗೆ ನನ್ನ ಸೈದ್ಧಾಂತಿಕ ನೆಲೆಗಟ್ಟಿನ ಬದ್ಧತೆ, ಪ್ರಾಮಾಣಿಕತೆಗೆ ಮಲ್ಲೇಶ್ ಮತ್ತು ಪ್ರೊ.ರಾಮದಾಸ್ ಕಾರಣ ಎಂದರು.

ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ತರುವಂತೆ ಮಾತನಾಡಿದರೆ ಪ.ಮಲ್ಲೇಶ್ ಸಹಿಸುತ್ತಿರಲಿಲ್ಲ. ನಾನು ಮುಖ್ಯಮಂತ್ರಿ ಆಗಿದ್ದಾಗಲೂ ಕಠಿಣ ಶಬ್ದಗಳಲ್ಲೇ ನನಗೆ ಹೇಳುತ್ತಿದ್ದರು. ಅವರು ಏನು ಹೇಳಿದರೂ ಕೋಪ ಮಾಡಿಕೊಳ್ಳುತ್ತಿರಲಿಲ್ಲ. ಕನ್ನಡ ಶಾಲೆ ಉಳಿಸುವ ಚಳುವಳಿಗೆ (ಎನ್‌ಟಿಎಂಎಸ್) ನಾನು ಬರಲಿಲ್ಲ ಎಂದು ನನ್ನೊಂದಿಗೆ ಮುನಿಸಿಕೊಂಡಿದ್ದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ವಿ.ಹೆಚ್.ಗೌಡ ಮತ್ತು ಮಲ್ಲೇಶ್ ಹೋರಾಟ ಸಂಘಟಿಸುತ್ತಿದ್ದರು. ಪ್ರತಿದಿನ ಒಂದೊಂದು ಗುಂಪು ಹೋರಾಟ ನಡೆಸಬೇಕಿತ್ತು. ಮೊದಲ ಗುಂಪಿನಲ್ಲಿ ಗುರುಪಾದಸ್ವಾಮಿ, ಶ್ರೀನಿವಾಸಪ್ರಸಾದ್, ಎರಡನೇ ಗುಂಪಿ ನಲ್ಲಿ ನಾನು, ರಾಮಣ್ಣ ಮತ್ತು ವೇದಾಂತ ಹೆಮ್ಮಿಗೆ ಇದ್ದೆವು. ಚಳುವಳಿ ಹಿನ್ನೆಲೆಯಲ್ಲಿ ಅಂದು ದೇವರಾಜ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ನಾನು ಸೇರಿದಂತೆ ಮೂವರನ್ನು ಒಂದು ರಾತ್ರಿ ಠಾಣೆಯಲ್ಲಿ ಇರಿಸಿದ್ದರು. ಬೆಳಗ್ಗೆ ನನ್ನ ಮನೆಗೆ ಕಳುಹಿಸಿ ಉಳಿದ ಅವರಿಬ್ಬರನ್ನು ಜೈಲಿಗೆ ಕಳುಹಿಸಿದರು ಎಂದು ಹಳೇ ನೆನಪಿಗೆ ಜಾರಿದರು.

ಗೋಕಾಕ್ ಚಳುವಳಿ ಬಳಿಕ ಪ.ಮಲ್ಲೇಶ್ ನೃಪತುಂಗ ವಿದ್ಯಾಸಂಸ್ಥೆ ಪ್ರಾರಂಭ ಮಾಡಿದರು. ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲೇ ಆಗಬೇಕೆಂದು ಬಲವಾಗಿ ಪ್ರತಿಪಾದಿಸುತ್ತಿದ್ದರು. ನಾನು ಮುಖ್ಯಮಂತ್ರಿ ಆಗಿದ್ದಾಗ ಇದೇ ನಿಟ್ಟಿನಲ್ಲಿ ತೀರ್ಮಾನ ಮಾಡಲು ಮುಂದಾದೆವು. ಆದರೆ ಶಿಕ್ಷಣ ಮಾಧ್ಯಮದ ಆಯ್ಕೆ ಪೋಷಕರಿಗೆ ಬಿಟ್ಟಿದ್ದು ಎಂದು ಸುಪ್ರಿಂಕೋರ್ಟ್ ತೀರ್ಪು ಕೊಟ್ಟಿತು. ಅಲ್ಲದೆ, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದರೂ ಪ್ರಯೋಜನ ಆಗಲಲ್ಲಿ. ಆದರೆ ಪ.ಮಲ್ಲೇಶ್ ಸವಾಲು ಬಿಡದೇ ನೃಪತುಂಗ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಪ್ರಾರಂಭಿಸಿದರು ಎಂದು ತಿಳಿಸಿದರು.

ಮೆಡಿಕಲ್ ಸೀಟ್ ಸಿಕ್ಕಿದ್ದರೆ ಸಿಎಂ ಆಗುತ್ತಿರಲಿಲ್ಲ: ನಾನು ವಿದ್ಯಾವರ್ಧಕ ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮ ದಲ್ಲಿ ಇದ್ದ ಕಾರಣ ಓದಿನಲ್ಲಿ ನಂಬರ್ ಒನ್ ಇದ್ದೆ. ಇಂಗ್ಲಿಷ್ ಮಾಧ್ಯಮಕ್ಕೆ ಹೋದ ಬಳಿಕ ಶೇ.52ರಷ್ಟು ಅಂಕಕ್ಕೆ ಇಳಿಕೆಯಾದೆ. ನಮ್ಮಪ್ಪ ನನ್ನನ್ನು ಡಾಕ್ಟರ್ ಮಾಡಬೇಕೆಂಬ ಆಸೆ ಇಟ್ಟುಕೊಂಡಿದ್ದರು. ನಮ್ಮ ಊರಿನ ಹೊಂಬಯ್ಯನ ಮಗ ಮೆಡಿಕಲ್ ಓದವನೇ. ನೀನೂ ಡಾಕ್ಟರ್ ಆಗಬೇಕೆಂದು ನಮ್ಮಪ್ಪ ಹಠ ಹಿಡಿದ್ದರು. ಒಂದು ವೇಳೆ ಮೆಡಿಕಲ್ ಸೀಟು ಸಿಕ್ಕಿದ್ದರೆ ನಾನು ಮುಖ್ಯಮಂತ್ರಿಯೇ ಆಗುತ್ತಿರಲಿಲ್ಲ ಎಂದರು.

ಲಾ ಓದುವಾಗ ಪ.ಮಲ್ಲೇಶ್, ಪ್ರೊ.ನಂಜುಂಡಸ್ವಾಮಿ, ಪ್ರೊ.ರಾಮದಾಸ್, ತೇಜಸ್ವಿ ಅವರ ಪರಿಚಯವಾಗದೇ ಇದ್ದಿದ್ದರೆ ನಾನು ರಾಜಕಾರಣಕ್ಕೆ ಬರುತ್ತಿರಲಿಲ್ಲ. ಏಕೆಂದರೆ ನಮ್ಮ ಮನೆಯಲ್ಲಿ ರಾಜಕಾರಣದ ಹಿನ್ನೆಲೆ ಇರಲಿಲ್ಲ. ನಮ್ಮ ಅಪ್ಪ ಗ್ರಾಪಂ ಚುನಾವಣೆಯಲ್ಲಿ ಸೋತು ಬಿಟ್ಟಿದ್ದರು. ಹಾಗಾಗಿ ತಾಲೂಕು ಬೋರ್ಡ್‌ಗೆ ನಾನು ಸ್ಪರ್ಧೆ ಮಾಡುವಾಗ ನಮ್ಮಪ್ಪ ಮನೆಗೆ ಬರಬೇಡ ಎಂದಿದ್ದರು. ಕೊನೆಗೆ ಊರಿನವರನ್ನು, ಪಂಚಾಯಿತಿ ಸೇರಿಸಿ ನಮ್ಮಪ್ಪನನ್ನು ಒಪ್ಪಿಸಲಾಯಿತು ಎಂದರು.

ನನ್ನ ಕುರಿತ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪ.ಮಲ್ಲೇಶ್ ಆರೋಗ್ಯವಾಗಿಯೇ ಇದ್ದರು. 89 ವರ್ಷ ವಯೋಮಾನದವರಾದರೂ ಶುಗರ್, ಬಿಪಿ ಇಲ್ಲದ ಹಿನ್ನೆಲೆಯಲ್ಲಿ ನೀವು 100 ವರ್ಷ ಬದುಕಿ ಬಾಳುತ್ತೀರಾ ಎಂದು ಅವರಿಗೆ ಹೇಳಿದ್ದೆ. ಈಗ ಶಾಮನೂರು ಶಿವಶಂಕರಪ್ಪರಿಗೆ 92 ವರ್ಷ. ಅವರಿಗೆ ಈ ಬಾರಿ ಟಿಕೆಟ್ ಕೊಟ್ಟಿದ್ದೇವೆ. ಪ.ಮಲ್ಲೇಶ್ ಅವರ ವಿಚಾರ, ಬದ್ಧತೆಯನ್ನು ನಾವು ಮುಂದುವರೆಸಿದರೆ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ. ಇಡೀ ರಾಜ್ಯದಲ್ಲಿ ಅವರ ಉದ್ದೇಶಿತ ಹೋರಾಟ ಮುಂದುವರೆಸುವ ಕೆಲಸ ಮಾಡಬೇಕು. ಅಧಿಕಾರಕ್ಕೆ ಬರುವ ಅವಕಾಶ ನಮಗೆ ಇದೆ. ಬಂದ ಬಳಿಕ ನೃಪತುಂಗ ಕನ್ನಡ ಶಾಲೆಗೆ ಅಗತ್ಯ ಸಹಾಯ ಮಾಡುವ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಹಿರಿಯ ಪತ್ರಕರ್ತರಾದ ದಿನೇಶ್ ಅಮೀನ್‌ಮಟ್ಟು, ಡಿ.ಉಮಾಪತಿ, ಮೈಸೂರು ವಿವಿ ಪ್ರಾಧ್ಯಾಪಕ ಡಾ.ಮುಜಾಫರ್ ಅಸ್ಸಾದಿ, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿಗಳಾದ ಸವಿತಾ ಪಿ.ಮಲ್ಲೇಶ್ (ಪ.ಮಲ್ಲೇಶ್ ಪುತ್ರಿ), ಪ್ರೊ.ಹೆಚ್.ಜಿ.ಕೃಷ್ಣಪ್ಪ, ಉಪಾಧ್ಯಕ್ಷ ಸ.ರ.ಸುದರ್ಶನ, ಅಂಕಣಕಾರರಾದ ಪದ್ಮಾ ಶ್ರೀರಾಮ್ ಮತ್ತಿತರರು ಹಾಜರಿದ್ದರು.

ಪ.ಮಲ್ಲೇಶ್ ಪ್ರಗತಿಪರ ಚಳುವಳಿಯ ತೇರನ್ನು ಎಲ್ಲಿಯವರೆಗೆ ಎಳೆದು ತಂದಿದ್ದರೋ ಅದನ್ನು ಮುಂದೆ ಸಾಗಿಸುವ ಸಮುದಾಯ ಇದ್ದಾಗ ಅವರ ಆತ್ಮಕ್ಕೆ ಶಾಂತಿ ದೊರೆಯಲಿದೆ. ನಾನು ಪ.ಮಲ್ಲೇಶ್ ಅವರೊಂದಿಗೆ ಭಾಗವಹಿಸಿದ್ದ ಕೊನೆ ಕಾರ್ಯಕ್ರಮದಲ್ಲಿ ಮಲ್ಲೇಶ್ ಅವರ ಕಟುವಾದ ಮಾತು ಅವರ ವಿರುದ್ಧ ತೀವ್ರವಾದ ಪ್ರತಿಕ್ರಿಯೆಗೆ ಕಾರಣವಾಯಿತು. ಆ ನಂತರ ಮಲ್ಲೇಶ್ ಅವರು ಕುಗ್ಗಿ ಹೋಗಿದ್ದರು ಎಂದು ನನಗೆ ಅನ್ನಿಸುತ್ತದೆ. ಆಗ ಅವರ ಮೇಲೆ ನಡೆದ ದಾಳಿ ಇವತ್ತಿನವರೆಗೂ ನಿಂತಿಲ್ಲ. ಇವತ್ತಿಗೂ ಒಬ್ಬ ಅವರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದಾನೆ. ಅವರ ಅಭಿಮಾನಿಗಳು ಇದಕ್ಕೆ ಅವಕಾಶ ನೀಡಬಾರದು. ಮಲ್ಲೇಶ್ ಅವರನ್ನು ನಿಂದಿಸುವ ಪ್ರಯತ್ನ ಮಲ್ಲೇಶ್ ಎಂಬ ವ್ಯಕ್ತಿ ಬಗ್ಗೆ ಅಲ್ಲ. ಬದಲಿಗೆ ಅವರ ಪ್ರತಿಪಾದಿಸಿದ ಸಿದ್ಧಾಂತವನ್ನು ನಿಂದಿಸುತ್ತಿರುವುದಾಗಿದೆ. ಹಾಗಾಗಿ ಆ ಸಿದ್ಧಾಂತ ಸೋಲಲು ನಾವು ಬಿಡಬಾರದು. **–ದಿನೇಶ್ ಅಮೀನ್‌ಮಟ್ಟು, ಹಿರಿಯ ಪತ್ರಕರ್ತರು.**

ಪ.ಮಲ್ಲೇಶ್ ತಮ್ಮ ಬದುಕಿನ ಉದ್ದಕ್ಕೂ ದೇಶ, ಸಮಾಜ ಮತ್ತು ಸಂವಿಧಾನದ ಬಲವರ್ಧನೆಗಾಗಿ ಹೋರಾಟ ನಡೆಸಿ ಸಾರ್ಥಕ ಜೀವನ ನಡೆಸಿದವರು. ಜನಪರವಾದ ವಿಷಯ ಮಂಡನೆ ಮತ್ತು ಅವರ ನಿಲುವು ಗಟ್ಟಿತನದಿಂದ ಕೂಡಿತ್ತು. ಹಾಗಾಗಿ ಪ.ಮಲ್ಲೇಶ್ ಜೀವಂತವಾಗಿಯೇ ಉಳಿದಿದ್ದಾರೆ. ನಿಸ್ವಾರ್ಥ ಜೀವನ, ಪ್ರಾಮಾಣಿಕ ನಡೆಯ ವ್ಯಕ್ತಿತ್ವ ಅವರದು. ಅವರ ನಡೆ ನಮಗೆ ಮಾರ್ಗದರ್ಶನ ಆಗಲಿ. **–ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವರು.**

ಪ.ಮಲ್ಲೇಶ್ ಅವರು ನೇರ ನುಡಿ–ನಿಷ್ಠೂರವಾದಿಗಳು. ಸಮಾಜದ ಸಮಸ್ಯೆ, ಯಾವುದೇ ವರ್ಗಕ್ಕೆ ಅನ್ಯಾಯ ಆಗುತ್ತಿದ್ದರೆ, ಅವುಗಳ ಪರಿಹರಿಸುವ ಸಂಬಂಧ ನಮ್ಮ ತಂದೆಯವರೊಂದಿಗೆ ಚರ್ಚೆ ಮಾಡುತ್ತಿದ್ದರು. ಇಡೀ ಜೀವನದ ಉದ್ದಕ್ಕೂ ತುಳಿತಕ್ಕೆ ಒಳಗಾದವರ ಪರವಾಗಿ ಹೋರಾಟ ಮಾಡಿದ್ದಾರೆ. **–ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರು.**



ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಮೈಸೂರಿನ ಅವರ ನಿವಾಸದಲ್ಲಿ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಚಾಮುಂಡೇಶ್ವರಿ ಕ್ಷೇತ್ರ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ, ಕೃಷ್ಣಕುಮಾರ್ ಸಾಗರ್ ಆತ್ಮೀಯವಾಗಿ ಅಭಿನಂದಿಸಿದರು.

ಭಾರೀ ಗಾಳಿ–ಮಳೆ: ಉರುಳಿ ಬಿದ್ದ ಮರ, ಎರಡು ಕಾರು ಜಖಂ


ಮೈಸೂರು,ಮಾ.29–ಮೈಸೂರಿನಲ್ಲಿ ಬುಧವಾರ ಸುರಿದ ಅಕಾಲಿಕ ಮಳೆಗೆ ಬೃಹತ್ ಮರವೊಂದು ಉರುಳಿ ಬಿದ್ದ ಪರಿಣಾಮ ಎರಡು ಕಾರುಗಳು ಜಖಂಗೊಂಡಿರುವ ಘಟನೆ ಮೈಸೂರಿನ ಸೀತಾ ವಿಲಾಸ ರಸ್ತೆಯಲ್ಲಿ(ಮರಿಮಲ್ಲಪ್ಪ ಕಾಲೇಜು ಬಳಿ) ನಡೆದಿದೆ. ಮಧ್ಯಾಹ್ನ 3.30ರ ವೇಳೆಗೆ ಮೈಸೂರಿನ ಹಲವೆಡೆ ಭಾರಿ ಗಾಳಿ ಮಳೆಯಾಯಿತು. ಈ ವೇಳೆ ಸೀತಾ ವಿಲಾಸ ರಸ್ತೆಯಲ್ಲಿರುವ ಬೃಹತ್ ಮರ ಮುರಿದು ಬಿದ್ದಿದೆ. ಈ ವೇಳೆ ಮರದಡಿ ನಿಲ್ಲಿಸಿದ ಹುಂಡೈ ನಿಯೋಸ್(ಕೆಎ–05 ಎನ್ 0114), ಮಾರುತಿ 800(ಕೆಎ–05 ಝಡ್ 6952) ಕಾರು ಜಖಂಗೊಂಡಿದ್ದು, ಅದೃಷ್ಟವಶಾತ್ ಕಾರಿನಲ್ಲಿ ಕುಳಿತಿದ್ದ ಮೂವರು ಪಾರಾಗಿದ್ದಾರೆ. ದಿಢೀರ್ ಮಳೆಯಿಂದಾಗಿ ರಸ್ತೆಗಳಲ್ಲಿ ಕಸ ಹರಡಿ ವಾಹನ ಸವಾರರು ಪರದಾಡುವಂತಾಯಿತು. ಜೋರಾಗಿ ಬೀಸಿದ ಗಾಳಿಯಿಂದಾಗಿ ಒಣಗಿದ್ದ ಹೂ, ಎಲೆಗಳು ರಸ್ತೆಯಲ್ಲೆಲ್ಲಾ ಚೆಲ್ಲಪಿಲ್ಲಿಯಾಗಿ ದ್ವಿಚಕ್ರ ವಾಹನ ಸವಾರರಂತು ಆತಂಕದಲ್ಲೇ ಸಂಚರಿಸಿದರು. ಕೆಲ ಗಂಟೆಗಳ ಕಾಲ ಬಿಡುವುಕೊಟ್ಟ ಮಳೆರಾಯ ರಾತ್ರಿ 11.30ರಿಂದ ತಡರಾತ್ರಿವರೆಗೂ ಮಳೆ ಸುರಿಯಿತು.





ಮೈಸೂರಿನ ಇಬ್ಬರು ಸೇರಿ ರಾಜ್ಯದ 134 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ

ಮೈಸೂರು, ಮಾ.29(ಆರ್‌ಕೆ)–ಮೈಸೂರು ನಗರದ ಇಬ್ಬರು ಸೇರಿದಂತೆ ರಾಜ್ಯದ 134 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ 2022ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಗಳಿಸಿದ್ದಾರೆ. ಮೈಸೂರು ನಗರದ ಸಶಸ್ತ್ರ ಮೀಸಲು ಪಡೆ ಇನ್ಸ್‌ಪೆಕ್ಟರ್ ಕೆ.ಎಂ.ಮೂರ್ತಿ, ವಿಜಯನಗರ ಠಾಣೆ ಸಬ್ ಇನ್ಸ್‌ಪೆಕ್ಟರ್ ವಿ.ಆರ್.ಶಭರೀಶ್ ಮುಖ್ಯಮಂತ್ರಿಗಳ ಪದಕ ವಿಜೇತರು. ಅದೇ ರೀತಿ ಮೈಸೂರು ದಕ್ಷಿಣ ಠಾಣೆ ಹೆಡ್ ಕಾನ್‌ಸ್ಟೇಬಲ್ ಎಂ.ನಾರಾಯಣ, ನಾಗಮಂಗಲ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಎನ್.ಸುಧಾಕರ್, ಮಡಿಕೇರಿ ಸಿಐಡಿ ಅರಣ್ಯ ಘಟಕದ ಸಬ್ ಇನ್ಸ್‌ಪೆಕ್ಟರ್ ಸಿ.ಯು.ಸವಿ, ವಿರಾಜಪೇಟೆ ಗ್ರಾಮಾಂತರ ಠಾಣೆ ಕಾನ್‌ಸ್ಟೇಬಲ್ ಡಿ.ರಾಜ ಅವರಿಗೂ ಪದಕ ನೀಡಲಾಗುತ್ತಿದೆ. ಏಪ್ರಿಲ್ 2ರಂದು ಬೆಳಗ್ಗೆ 8 ಗಂಟೆಗೆ ಬೆಂಗಳೂರಿನ ಕೋರಮಂಗಲ ಕೆಎಸ್‌ಆರ್‌ಪಿಯಲ್ಲಿ ಪದಕ ಪ್ರದಾನ ಮಾಡಲಾಗುವುದು ಎಂದು ತಿಳಿಸಲಾಗಿದೆ.



ಕೆ.ಎಂ.ಮೂರ್ತಿ

ರಾಜ್ಯದಲ್ಲಿ ಪ್ರಗತಿಪರ ಅಲೆ ಶುರು

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗವು ಚುನಾವಣೆ ದಿನಾಂಕ ಪ್ರಕಟಿಸಿದ ಬೆನ್ನಲ್ಲೇ ಟ್ವೀಟ್ ಮಾಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಈಗ ಕರ್ನಾಟಕದಲ್ಲಿ ಹೊಸ ಪ್ರಗತಿಪರ ಭವಿಷ್ಯದ ಅಲೆ ಶುರುವಾಗಿದ್ದು, ರಾಜ್ಯದಲ್ಲಿ ಮೇ 10ರಂದು ನಡೆಯಲಿರುವ ಚುನಾವಣೆಯನ್ನು ಉತ್ಸಾಹದಿಂದ ಸ್ವಾಗತಿಸುತ್ತೇವೆ, ಈ ಮೂಲಕ ಕಾಂಗ್ರೆಸ್ ಪಕ್ಷ ಜನರಿಗೆ ಅಭಿವೃದ್ಧಿ ಮತ್ತು ಪಾರದರ್ಶಕತೆಯನ್ನು ಮರಳಿ ನೀಡಲು ಸಜ್ಜಾಗಿದೆ' ಎಂದು ಬರೆದುಕೊಂಡಿದ್ದಾರೆ.



ಕಾನೂನುಬದ್ಧವಾಗಿ ಸಾಲ ನೀಡಲಾಗಿದೆ: ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಸ್ಪಷ್ಟನೆ

ಮೈಸೂರು, ಮಾ.29–ಆಸ್ತಿಯ ನಕಲಿ ದಾಖಲೆಗಳನ್ನು ನೀಡಿದ ವ್ಯಕ್ತಿಯೊಂದಿಗೆ ಬ್ಯಾಂಕ್ ಅಧಿಕಾರಿಗಳು ಶಾಮೀಲಾಗಿ 40 ಲಕ್ಷ ರೂ. ಸಾಲ ನೀಡಿದ್ದಾರೆ ಎಂಬ ಆರೋಪವನ್ನು ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಪ್ರಭಾರ ವ್ಯವಸ್ಥಾಪಕರು ಅಲ್ಲಗಳೆದಿದ್ದು, ಕಾನೂನುಬದ್ಧವಾಗಿಯೇ ಸಾಲ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ತೊಣಚಿಕೊಪ್ಪಲಿನಲ್ಲಿರುವ 110X40 ನಿವೇಶನವನ್ನು ಚಿಕ್ಕಬೀರಯ್ಯ ಮತ್ತಿತರರಿಂದ 1975ರ ಏ.3ರಂದು ದೊಡ್ಡತಾಯಮ್ಮ ಎಂಬುವರು ಖರೀದಿಸಿದ್ದಾರೆ. ಈ ಆಸ್ತಿಗೆ 1986ರಲ್ಲಿ ನಗರಸಭೆ ಖಾತೆ ಮಾಡಿಕೊಟ್ಟಿದ್ದು, ಈ ಸ್ವತ್ತಿನ ಮೇಲೆ ದೊಡ್ಡತಾಯಮ್ಮ 2000ನೇ ವರ್ಷ ಜುಲೈ 22ರಂದು 1.25 ಲಕ್ಷ ರೂ. ಸಾಲ ಪಡೆದು 2002ರಲ್ಲಿ ಸಾಲ ತೀರಿಸಿ, ಅದೇ ವರ್ಷ ಸದರಿ ನಿವೇಶನದಲ್ಲಿ ಪಾಲಿಕೆ ರಹದಾರಿ ಪಡೆದು ಕಟ್ಟಡ ನಿರ್ಮಿಸಿದ್ದಾರೆ. 2014ರ ಮೇ 19ರಂದು ಈ ಆಸ್ತಿಯನ್ನು ತಮ್ಮ ಪುತ್ರ ಟಿ.ಮಂಜುನಾಥ್ ಹೆಸರಿಗೆ ದಾನಪತ್ರದ ಮೂಲಕ ನೋಂದಾಯಿಸಿದ್ದಾರೆ.

2014ರ ಜು.25ರಿಂದ ಈವರೆವಿಗೂ ಮಂಜುನಾಥ್ ಸದರಿ ಆಸ್ತಿಗೆ ಮಹಾನಗರ ಪಾಲಿಕೆಗೆ ಕಂದಾಯ ಪಾವತಿಸುತ್ತಿದ್ದು, ಅವರು 2015ರಲ್ಲಿ ತಮ್ಮ ಬ್ಯಾಂಕ್‌ನಲ್ಲಿ 15 ಲಕ್ಷ ಸಾಲ ಪಡೆದು ಮರುಪಾವತಿ ಮಾಡಿದ್ದಾರೆ. ನಂತರ 2019ರ ಜು.8ರಂದು 40 ಲಕ್ಷ ಸಾಲ ಪಡೆದು ಮರುಪಾವತಿ ಮಾಡಿದ್ದಾರೆ. ತಮ್ಮ ಬ್ಯಾಂಕ್ ಈ ಆಸ್ತಿಗೆ ವಕೀಲರಿಂದ ಅಭಿಪ್ರಾಯ ಪಡೆದು ಮೌಲ್ಯಮಾಪಕರು ಮೌಖಿಕವಾಗಿ ಸ್ಥಳ ಪರಿಶೀಲನೆ ಮಾಡಿ, ನೀಡಿರುವ ವರದಿಯನ್ನು ಸಾಲ ಸಮಿತಿ ಸಭೆಯಲ್ಲಿ ಮಂಡಿಸಿ, ನಂತರ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದಿಸಿ ಸಾಲ ವಿತರಿಸಲಾಗಿದೆ. ವಸ್ತುಸ್ಥಿತಿ ಹೀಗಿದ್ದರೂ, ಬ್ಯಾಂಕ್‌ನ ವಿರುದ್ಧ ಸುಳ್ಳು ಆರೋಪ ಮಾಡಿರುವ ವ್ಯಕ್ತಿಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗುವುದು ಎಂದು ಬ್ಯಾಂಕ್ ಪ್ರಭಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಮೇ 10ರಂದು ದೇಶದ ಕೆಲವೆಡೆ ಉಪ ಚುನಾವಣೆ

ನವದೆಹಲಿ: ಮೇ 10ರಂದು ಒಂದು ಲೋಕಸಭಾ ಕ್ಷೇತ್ರ ಹಾಗೂ 4 ರಾಜ್ಯಗಳ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಬುಧವಾರ ತಿಳಿಸಿದ್ದಾರೆ. ಈ ಉಪಚುನಾವಣೆಗಳ ಮತ ಎಣಿಕೆಯೂ ಮೇ 13ರಂದೇ ನಡೆಯಲಿದೆ.



ಎಲ್ಲೆಲ್ಲಿ ಚುನಾವಣೆ: ಸಂಸದ ಸಂತೋಖ್ ಸಿಂಗ್ ಚೌಧರಿ ಅವರು ಕಳೆದ ಜನವರಿಯಲ್ಲಿ ಭಾರತ್ ಜೋಡೊ ಯಾತ್ರೆ ವೇಳೆ ಹೃದಯಾಘಾತದಿಂದ ನಿಧನರಾದ ಕಾರಣ ಪಂಜಾಬ್‌ನ ಜಲಂಧರ್ ಲೋಕಸಭಾ ಕ್ಷೇತ್ರ ತೆರವಾಗಿತ್ತು. ಈ ಕ್ಷೇತ್ರದಲ್ಲಿ ಈಗ ಉಪಚುನಾವಣೆ ನಡೆಯಲಿದೆ. ಒಡಿಶಾದ ಝರ್ಸುಗುಡ ವಿಧಾನಸಭಾ ಕ್ಷೇತ್ರ, ಉತ್ತರ ಪ್ರದೇಶದ ಸುವಾರ್, ಛನ್‌ಬೇ ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ಮೇಘಾಲಯದಲ್ಲಿ ವಿಧಾನಸಭೆ ಚುನಾವಣೆ ಘೋಷಣೆಯಾದ ಬಳಿಕ, ಯುನೈಟೆಡ್ ಡೆಮಾಕ್ರಟಿಕ್ ಪಕ್ಷದ (ಯುಡಿಪಿ) ಅಭ್ಯರ್ಥಿಯೊಬ್ಬ ಮೃತಪಟ್ಟ ಹಿನ್ನೆಲೆಯಲ್ಲಿ ಸೋಹಿಯಾಂಗ್ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು. ಮೇ 10ರಂದು ಈ ಕ್ಷೇತ್ರದಲ್ಲಿ ಚುನಾವಣೆ ನಡೆಯಲಿದೆ.

ವಯನಾಡ್ ಉಪಚುನಾವಣೆ ಘೋಷಣೆಗೆ ಆತುರವಿಲ್ಲ: ಚು.ಆಯೋಗ

ನವದೆಹಲಿ: ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿರುವ ರಾಹುಲ್ ಗಾಂಧಿ ಅವರಿಗೆ ಮಾನನಷ್ಟ ಮೊಕದ್ದಮೆಯಲ್ಲಿ ಮೇಲ್ಮನವಿ ಸಲ್ಲಿಸಲು ನ್ಯಾಯಾಲಯವು ಒಂದು ತಿಂಗಳ ಕಾಲಾವಕಾಶ ನೀಡಿರುವ ಹಿನ್ನೆಲೆಯಲ್ಲಿ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ಘೋಷಿಸಲು ಯಾವುದೇ ಆತುರವಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ. ಫೆಬ್ರವರಿಗೆ ತೆರವಾಗಿರುವ ಸ್ಥಾನಗಳ ಆಧಾರದಲ್ಲಿ ಚುನಾವಣಾ ಆಯೋಗ ನಿರ್ಧಾರ ಕೈಗೊಂಡಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಯನಾಡ್ ಉಪಚುನಾವಣೆ ಘೋಷಣೆಗೆ ಯಾವುದೇ ಆತುರವಿಲ್ಲ. ವಿಚಾರಣಾ ನ್ಯಾಯಾಲಯದ ಮುಂದಿನ ಆದೇಶದವರೆಗೆ ನಾವು ಕಾಯುತ್ತೇವೆ ಎಂದು ತಿಳಿಸಿದ್ದಾರೆ. ಗುಜರಾತ್ ನ್ಯಾಯಾಲಯ 2019ರಲ್ಲಿ ದಾಖಲಾದ ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಅವರಿಗೆ 2 ವರ್ಷಗಳ ಜೈಲು ಶಿಕ್ಷೆ ನೀಡಿ ತೀರ್ಪು ನೀಡಿದೆ. ಶಿಕ್ಷೆಯನ್ನು 30 ದಿನಗಳವರೆಗೆ ಅಮಾನತಿನಲ್ಲಿರಿಸಿ, ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಇದರ ಬೆನ್ನಲ್ಲೇ ಲೋಕಸಭೆ ಸದಸ್ಯತ್ವದಿಂದ ರಾಹುಲ್ ಗಾಂಧಿ ಅನರ್ಹಗೊಳಿಸಿ ಲೋಕಸಭಾ ಕಾರ್ಯಾಲಯ ಅಧಿಸೂಚನೆ ಹೊರಡಿಸಿತ್ತು. ಕಾನೂನಿನ ಪ್ರಕಾರ, ಸ್ಥಾನ ತೆರವುಗೊಂಡ 6 ತಿಂಗಳೊಳಗೆ ಉಪಚುನಾವಣೆ ನಡೆಯಬೇಕಿದೆ. ಆದರೆ ಹಾಲಿ ಸಂಸದರ ಅವಧಿಯೂ 1 ವರ್ಷಕ್ಕೂ ಕಡಮೆಯಿದ್ದರೆ ಉಪಚುನಾವಣೆ ನಡೆಸುವಂತಿಲ್ಲ ಎಂದು ರಾಜೀವ್ ಹೇಳಿದ್ದಾರೆ.

ದೇವರ ದಾಸಿಮಯ್ಯ ಜಯಂತಿ



ಮೈಸೂರು, ಮಾ.29(ಎಸ್‌ಪಿಎನ್)– ತಾಲೂಕಿನ ದೇವಲಾಪುರ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ನಡೆದ ವಚನಕಾರ 'ದೇವರ ದಾಸಿಮಯ್ಯ' ಜಯಂತಿ ಆಚರಿಸಲಾಯಿತು.

ಕಪೂರ್ರವಳ್ಳಿ ಶ್ರೀ ಜಂಗಮ ಮಠದ ಜಡೇಸ್ವಾಮೀಜಿ ಮಾತನಾಡಿ, ಮಠ–ಮಾನ್ಯಗಳು ಶಿಕ್ಷಣ, ಆರೋಗ್ಯ, ಧಾರ್ಮಿಕ ಕ್ಷೇತ್ರದಲ್ಲಿ ಮಹತ್ವ ಕೊಡುಗೆಗಳನ್ನು ನೀಡುತ್ತಿವೆ. ಆ ಸಾಲಿನಲ್ಲಿ ಗುರುಮಲ್ಲೇಶ್ವರ ದಾಸೋಹ ಪರಂಪರೆಯೂ ಸೇರಿದೆ ಎಂದು ತಿಳಿಸಿದರು.

ಹಿರಿಯ ಬರಹಗಾರ ಎಸ್.ಬಸವರಾಜ್ ದೊಡ್ಡಟ್ಟಿ ಮಾತನಾಡಿ, ದಾಸೋಹ ಚಕ್ರವರ್ತಿ ಗುರುಮಲ್ಲೇಶ್ವರ ಕಾಲಘಟ್ಟದ ಹಲವು ಘಟನೆಗಳನ್ನು ಉದಾಹರಣೆ ಸಹಿತ ವಿವರಿಸಿದರಲ್ಲದೆ, ಗುರುಮಲ್ಲೇಶ್ವರ ದಾಸೋಹ ಮಠ ಶಿಕ್ಷಣಕ್ಕೆ ತನ್ನದೆ ಆದ ಕೊಡುಗೆ ನೀಡಿದರು. ಈ ವೇಳೆ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಲೇಖಕ ದೇವರಾಜು ಪಿ.ಚಿಕ್ಕಹಳ್ಳಿ, ವೀರಶೈವಲಿಂಗಾಯತ ಮುಖಂಡರಾದ ಹೆಳವರಹುಂಡಿ ಸಿದ್ದಪ್ಪ, ಎಲ್.ಮಹೇಶ್ ಇದ್ದರು. ಕಾರ್ಯಕ್ರಮ ನಂತರ ವಚನ ಗಾಯನ, ಭಜನೆ ಕಾರ್ಯಕ್ರಮಗಳು ಜರುಗಿದವು.

ಸಂಸದ ಸ್ಥಾನದಿಂದ ರಾಹುಲ್ ಗಾಂಧಿ ಅನರ್ಹಗೊಳಿಸಿದ್ದನ್ನು ಖಂಡಿಸಿ

ಮೈಸೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಮೈಸೂರು, ಮಾ.29(ಆರ್‌ಕೆ)–ಎಐಸಿಸಿ ಅಧಿನಾಯಕ ರಾಹುಲ್‌ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಇಂದು ಮೈಸೂರಿನ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

'ಪ್ರಜಾಪ್ರಭುತ್ವ ಉಳಿಸಿ' ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಿದ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಕಾರ್ಯಕರ್ತರು, ಗುಜರಾತ್ ನ್ಯಾಯಾಲಯದಲ್ಲಿ ದಾವೆ ಹೂಡಿ, ವಾಕ್ ಸ್ವಾತಂತ್ರ್ಯ ಹತ್ತಿಕ್ಕಲು ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಹಾಗೂ ಇತರರು, ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸುವ ಸಂಚು ನಡೆಸಿದ್ದಾರೆ ಎಂದು ಆರೋಪಿಸುತ್ತಿದ್ದರು.



ರಾಜಕೀಯ ದುರುದ್ದೇಶದಿಂದ, ಕಾಂಗ್ರೆಸ್ ಬಲ ಕುಗ್ಗಿಸಲು ರಾಹುಲ್ ಗಾಂಧಿ ಅವರ ಸಂಸದ ಸ್ಥಾನವನ್ನು ರದ್ದುಗೊಳಿಸಲಾಗಿದೆ ಎಂದು ದೂರಿದ ಪ್ರತಿಭಟನಾಕಾರರು, ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಕೆ.ರಮೇಶ್, ಗ್ರಾಮಾಂತರ ವಿಭಾಗದ ಕೆ.ಎಸ್.ಸಿದ್ದರಾಜು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖಂಡರಾದ ಎಂ.ಶಿವಣ್ಣ, ನಾಗೇಶ್, ಜಾವಿದ್, ರೆಹವಾನ್ ಖಾನ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಟಿಯು ಕಾರ್ಯಕಾರಿ ಮಂಡಳಿ ಸದಸ್ಯೆ

ಮೈಸೂರು, ಮಾ.29–ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಬಯೋ ಟೆಕ್ನಾಲಜಿ ವಿಭಾಗದ ಪ್ರೊ.ಪಲ್ಲವಿ ವಸ್ತ್ರದ್ ಅವರನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ ಎಂದು ವಿವಿ ಕುಲಸಚಿವ ಡಾ.ರಂಗಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಹಾಯ ಧನಕ್ಕೆ ಅರ್ಜಿ

ಮೈಸೂರು,ಮಾ.29– 2022–23ನೇ ಸಾಲಿನ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿಯಲ್ಲಿ (20+01) ಕುರಿ/ಮೇಕೆ ಘಟಕಗಳ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಚಾಮುಂಡಿಪುರಂನ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದು. ಮಾಹಿತಿಗಾಗಿ ದೂ.ಸಂ: 0821–2488830) ಸಂಪರ್ಕಿಸಿ

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ರಾಮನಿಗೂ ರಾವಣನಿಗೂ ಯುದ್ಧ ಏಕೆ ಆಯಿತು?
ವಿದ್ಯಾರ್ಥಿ : ನನಗೆ ಗೊತ್ತಿಲ್ಲ ಸಾರ್
ಮಾಸ್ಟರ್ : (ಗದರಿಸುತ್ತಾ) ಅದಕ್ಕೆ ಮಹಾಭಾರತ ಓದು ಅಂತ ಬಡ್ಕೊಳ್ಳೋದು!

ಮೈಸೂರು ಮಿತ್ರ

ಗುರುವಾರ, 30 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಾಧ್ಯವಾದಷ್ಟೂ ಹೆಚ್ಚು ಹಣವನ್ನು ಸಂಪಾದಿಸು. ಸಾಧ್ಯವಾದಷ್ಟನ್ನು ಉಳಿಸು, ಸಾಧ್ಯವಾದಷ್ಟು ದಾನ ಮಾಡು. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಬಂದಾಗ ಸೋತು ಹೋದವನೇ ಜಾಣ

ನಿಮ್ಮ ಪತ್ರಗಳು

ಪರೀಕ್ಷಾ ಕೇಂದ್ರದಲ್ಲಿ ಎಲೆಕ್ಟ್ರಾಲ್, ಗ್ಲೂಕೋಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಎಲ್ಲೆಡೆ ಬಿಸಿಲಿನ ಬೇಗೆ ಹೆಚ್ಚಾಗಿದೆ. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಮಾರ್ಚ್ 31 ರಿಂದ ಪರೀಕ್ಷೆ ಆರಂಭವಾಗುತ್ತಿದೆ. ಬಿಸಿಲಿನ ತಾಪಕ್ಕೆ ಪರೀಕ್ಷೆ ಎಂಬ ಆತಂಕದಿಂದ ಹೃದಯದ ಬಡಿತ ಹೆಚ್ಚಾಗಬಹುದು. ದೇಹ ತಲ್ಲಣಗೊಂಡು ನಿರ್ಜಲವಾಗಬಹುದು. ಇದರಿಂದ ಭಯಭೀತರಾಗುತ್ತಾರೆ. (ಕಳೆದ ವರ್ಷ ಪರೀಕ್ಷಾ ಕೇಂದ್ರದಲ್ಲಿ ಹಲವಾರು ಕಹಿ ಘಟನೆಗಳು ನಡೆದಿರುತ್ತದೆ) ಆದ್ದರಿಂದ ಎಲ್ಲೆಡೆ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಆರೋಗ್ಯ ದೃಷ್ಟಿಯಿಂದ ಗ್ಲೂಕೋಸ್ ಹಾಗೂ ಎಲೆಕ್ಟ್ರಾಲ್ ಅನ್ನು ಮುಂಜಾಗ್ರತೆ ಕ್ರಮವಾಗಿ ಇಟ್ಟುಕೊಳ್ಳುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಳ್ಳೆಯದು. ಪರೀಕ್ಷಾ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯದಲ್ಲಿ ಏರುಪೇರಾದಾಗ ಶುದ್ಧ ನೀರಿನೊಂದಿಗೆ ಎಲೆಕ್ಟ್ರಾಲ್ ಅಥವಾ ಗ್ಲೂಕೋಸ್ ಅನ್ನು ಬೆರೆಸಿ ನೀಡಿದರೆ ವಿದ್ಯಾರ್ಥಿಗಳು ಬಳಲಿದ್ದರೆ ಚೈತನ್ಯ ಬಂದು ಪರೀಕ್ಷೆಯನ್ನು ಬರೆಯಲು ಅನುಕೂಲವಾಗುತ್ತದೆ. ಆಂಬುಲೆನ್ಸ್‌ನೊಂದಿಗೆ ಹಲವೆಡೆ ವೈದ್ಯರ ತಂಡವು ನಿಯೋಜಿಸಿದ್ದರೆ, ನಿತ್ರಾಣಗೊಂಡ ವಿದ್ಯಾರ್ಥಿಗಳಿಗೆ ಕೂಡಲೇ ಚಿಕಿತ್ಸೆ ನೀಡಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಬಹುದು. ಇದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಳ್ಳೆಯದು. ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿ ಯೋಚಿಸಿದರೆ ಎಲ್ಲರ ಹಿತದೃಷ್ಟಿಯಿಂದ ಒಳಿತಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಸರ್ಕಾರಿ ವೈದ್ಯರಿಗೆ ಖಾಸಗಿ ಕ್ಲಿನಿಕ್ ತೆರೆಯಲು ಅನುಮತಿ ಬೇಡ


ಮಾನ್ಯರೇ,

ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದ್ದು, ಇಲ್ಲಿ ಬಡವರು ಹಾಗೂ ಮಧ್ಯಮ ವರ್ಗದ ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹಾಗೂ ಇತರೆ ಜನರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮನುಷ್ಯರು ಅನೇಕ ರೋಗಗಳಿಗೆ ತುತ್ತಾಗಿ ಖಾಸಗಿ ಆಸ್ಪತ್ರೆಗೆ ಹಣ ಕಟ್ಟಲಾಗದೆ, ಸರ್ಕಾರಿ ಆಸ್ಪತ್ರೆಗೆ ತೆರಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಸರಿಯಾಗಿ ಕರ್ತವ್ಯದ ಸಮಯಕ್ಕೆ ಹಾಜರಾಗದೆ, ಕರ್ತವ್ಯವನ್ನು ನಿರ್ವಹಿಸದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಮತ್ತು 2ನೇ ಹಾಗೂ 4ನೇ ಶನಿವಾರ ಮತ್ತು ತಿಂಗಳ ಪ್ರತಿ ಭಾನುವಾರಗಳಂದು ವೈದ್ಯರು ಆಸ್ಪತ್ರೆಗೆ ಬರುವುದಿಲ್ಲ. ಇದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದ್ದು, ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲದೆ ಇರುವ ಸಮಯದಲ್ಲಿ ನರ್ಸ್‌ಗಳು ಅವರ ಅನುಮತಿ ಪಡೆಯದೆ ರೋಗಿಗಳಿಗೆ ಇಂಜಕ್ಷನ್ ನೀಡುತ್ತಾರೆ. ಕಾರಣ, ಮುಖ್ಯವಾಗಿ ಡಾಕ್ಟರ್‌ಗಳು ಹೆಚ್ಚಿನ ಆದಾಯ ಗಳಿಸುವ ಉದ್ದೇಶದಿಂದ ತಮ್ಮ–ತಮ್ಮ ಮನೆಗಳು ಹಾಗೂ ಹಲವಾರು ಕಡೆಗಳಲ್ಲಿ ಖಾಸಗಿ ಕ್ಲಿನಿಕ್ ತೆರೆದು ಹಣ ಗಳಿಸಲು ಮುಂದಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾಗಿ ಕೆಲಸ ನಿರ್ವಹಿಸದೆ ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಆದ್ದರಿಂದ ಸರ್ಕಾರವೂ ಕೂಡ ಸರ್ಕಾರಿ ವೈದ್ಯರಿಗೆ ಖಾಸಗಿ ಕ್ಲಿನಿಕ್ ತೆರೆಯಲು ಅನುಮತಿ ನೀಡಬಾರದು ಮತ್ತು ಸರ್ಕಾರಿ ಆಸ್ಪತ್ರೆಗೆ ವೈದ್ಯರಾಗಿದ್ದು ಸರಿಯಾಗಿ ಕರ್ತವ್ಯ ನಿರ್ವಹಿಸುವ ವೈದ್ಯರನ್ನು ಬಿಟ್ಟು, ಉಳಿದ ಎಲ್ಲ ವೈದ್ಯರ ವಿರುದ್ಧ ವೈದ್ಯಾಧಿಕಾರಿಗಳು ಕ್ರಮ ಜರುಗಿಸಿ, ರೋಗಿಗಳಿಗೆ ಆರೋಗ್ಯ ಗುಣಪಡಿಸಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಚಾರುಕೀರ್ತಿ ಭಟ್ಟಾರಕ ಎಂಬ ಧರ್ಮ ಮತ್ತು ಜ್ಞಾನ ಜ್ಯೋತಿ

ಮಾನ್ಯರೆ,



ಹಾಸನ ಜಿಲ್ಲೆ, ಶ್ರವಣಬೆಳಗೊಳದ ಜೈನ ಮಠದ ಮುಖ್ಯಸ್ಥರಾಗಿದ್ದ ಕರ್ಮಯೋಗಿ, ತಪೋನಿಧಿ, ಸ್ವತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ತಮ್ಮ 75ನೇ ವಯಸ್ಸಿನಲ್ಲಿ ಜಿನೈಕ್ಯರಾಗಿರುವುದು ಅತ್ಯಂತ ನೋವಿನ ಸಂಗತಿ. ವಿಶ್ವವಿಖ್ಯಾತ ಶ್ರವಣಬೆಳಗೊಳದಲ್ಲಿ ನಾಲ್ಕು ಬಾರಿ ಅತ್ಯಂತ ಯಶಸ್ವಿಯಾಗಿ ಮಹಾ ಮಸ್ತಕಾಭಿಷೇಕಗಳನ್ನು ನಡೆಸಿದ್ದ ಶ್ರೀಗಳು, ತಮ್ಮ ಧಾರ್ಮಿಕ ಹಾಗೂ ಜನಪರ ಕೈಂಕರ್ಯಗಳ ಮೂಲಕ ಇಡೀ ವಿಶ್ವದ ಗಮನ ಸೆಳೆದಿದ್ದರು. ಸಂಸ್ಕೃತ, ಪ್ರಾಕೃತ, ಕನ್ನಡ, ಆಂಗ್ಲ ಭಾಷೆಗಳೂ ಸೇರಿದಂತೆ ಶ್ರೀಗಳು ಹಲವಾರು ಭಾರತೀಯ ಭಾಷೆಗಳ ಮೇಲೆ ಪ್ರಭುತ್ವ ಸಾಧಿಸಿದ್ದರು. ದೇಶ ವಿದೇಶಗಳಲ್ಲಿ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ್ದ ಶ್ರೀಗಳು, ಸಮಾಜ ಸೇವೆಯೇ ತಮ್ಮ ಬದುಕಿನ ಗುರಿ ಎಂದು ಭಾವಿಸಿದ್ದರು. ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜ್ಞಾನ ದಾಸೋಹಕ್ಕೆ ನೆರವಾಗಿದ್ದ ಶ್ರೀಗಳು, ಹಲವಾರು ಆಸ್ಪತ್ರೆಗಳು, ವಸತಿ ನಿಲಯಗಳನ್ನು ಸ್ಥಾಪಿಸಿದ್ದರು.

ಶ್ರವಣಬೆಳಗೊಳದ ದಿಗಂಬರ ಜೈನ ಮಠದ ಮುಖ್ಯಸ್ಥರಾಗಿದ್ದ ಶ್ರೀಗಳು, 1949ರ ಮೇ ತಿಂಗಳ 3ರಂದು ಜನಿಸಿದರು. ವಿವಿಧ ಜೈನಮಠಗಳಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ, ಪಾಳಿ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಶ್ರೀಗಳು, ಬೆಂಗಳೂರು ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರದಲ್ಲಿ ಸಹ ಸ್ನಾತಕೋತ್ತರ ಪದವಿ ಪಡೆದಿದ್ದರು. ಇದಲ್ಲದೆ, ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದು ಬಹುಭಾಷಾ ವಿಶಾರದರೆನ್ನಿಸಿದ್ದರು.

ತಮ್ಮ 20ನೇ ವಯಸ್ಸಿನಲ್ಲೇ ಶ್ರವಣಬೆಳಗೊಳದ ದಿಗಂಬರ ಜೈನ ಮಠದ ಧರ್ಮಾಚಾರ್ಯ ಪೀಠವನ್ನು ಏರಿದ್ದ ಶ್ರೀಗಳು, ಕಳೆದ ಐವತ್ತು ವರ್ಷಗಳ ಕಾಲಘಟ್ಟದಲ್ಲಿ ಶ್ರೀ ಕ್ಷೇತ್ರದ ಸಮಗ್ರ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸಿ, ಶ್ರವಣಬೆಳಗೊಳವನ್ನು ಪುಟಕ್ಕಿಟ್ಟ ಚಿನ್ನದ ಹಾಗೆ ಹೊಳೆಯುವಂತೆ ಮಾಡಿದರು. ಶ್ರೀಕ್ಷೇತ್ರದಲ್ಲಿ 1981, 1993, 2006 ಹಾಗೂ 2018 ರಲ್ಲಿ ನಡೆದ ಮಹಾಮಸ್ತಾಭಿಷೇಕಗಳ ನೇತೃತ್ವವನ್ನು ವಹಿಸಿದ್ದ ಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜೊತೆ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದರು. ಶ್ರೀಗಳ ಕಾರ್ಯತತ್ಪರತೆಯನ್ನು ಮೆಚ್ಚಿ ನೂರಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಅವರಿಗೆ ಲಭಿಸಿದ್ದವು. ಅವುಗಳ ಪೈಕಿ ಮುಖ್ಯವಾಗಿ ಕರ್ಮಯೋಗಿ, ಆಧ್ಯಾತ್ಮ ಯೋಗಿ ಭಟ್ಟಾರಕ ಶಿರೋಮಣಿ ಮುಂತಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು. ಪೂಜ್ಯ ಶ್ರೀಗಳು, 16ಕ್ಕೂ ಹೆಚ್ಚು ದೇಶಗಳಗೆ ಭೇಟಿ ನೀಡಿ ಭಾರತದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದ ಶ್ರೀಮಂತಿಕೆ ಹಾಗೂ ಪರಂಪರೆಯನ್ನು ಪಸರಿಸಿದ್ದರು. ತಮ್ಮ ಪ್ರವಚನಗಳ ಮೂಲಕ ಜನರ ಬದುಕಿಗೆ ದಾರಿದೀಪವಾಗಿದ್ದ ಶ್ರೀಗಳು, ನೂರಾರು ಜೈನ ಬಸದಿಗಳನ್ನು ಪುನರುಜ್ಜೀವನಗೊಳಿಸಿದರು. ಇತ್ತೀಚಿನ ದಿನಗಳಲ್ಲಿ ಶ್ರೀಗಳು, ವೈರಾಗ್ಯದ ಕಡೆ ವಾಲಿ, ಜೈನರಲ್ಲಿ ಅತ್ಯಂತ ಪ್ರಮುಖವಾದ "ಸಲ್ಲೇಖನ ವ್ರತ" ವನ್ನು (ಅನ್ನಾಹಾರಗಳನ್ನು ತ್ಯಜಿಸುವುದು) ಕೈಗೊಂಡಿದ್ದರು ಎಂದು ಹೇಳಲಾಗಿದೆ. ಶ್ರೀಗಳ ನಿಧನದೊಂದಿಗೆ ಜೈನಧರ್ಮದ ಪ್ರಮುಖ ಚೇತನವೊಂದು ಕಣ್ಮರೆಯಾಗಿದೆ. ಆದರೆ ಶ್ರೀಗಳು ಹೊತ್ತಿಸಿರುವ ಜ್ಞಾನ ಜ್ಯೋತಿ, ಸಮಾಜವನ್ನು ನಿರಂತರವಾಗಿ ಬೆಳಗುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮೈಸೂರು ಜಿಲ್ಲೆಯಲ್ಲಿ ಏ.11ರವರೆಗೂ ಹೊಸ ಮತದಾರರ ಸೇರ್ಪಡೆಗೆ ಅವಕಾಶ

● ತಿದ್ದುಪಡಿಗೂ ಆಸ್ಪದ: ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾಹಿತಿ ● ಜಿಲ್ಲೆಯಲ್ಲಿ 31,754 ವಿಕಲಚೇತನರು, 84,917 ಮಂದಿ 80 ವರ್ಷ ಮೇಲ್ಪಟ್ಟವರಿಗೆ ಮನೆಯಲ್ಲೇ ಮತದಾನಕ್ಕೆ ಅವಕಾಶ



ಬುಧವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಚುನಾವಣಾ ಸಂಬಂಧ ಅಗತ್ಯ ಸಿದ್ಧತೆಗಳ ಕುರಿತು ಮಾತನಾಡಿದರು. ಚಿತ್ರದಲ್ಲಿ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಇದ್ದಾರೆ.

ಮೈಸೂರು, ಮಾ.29 (ಎಂಕೆ)–ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಯಾಗಿದ್ದು, ಚುನಾವಣೆಗೆ ಜಿಲ್ಲಾಡಳಿತ ಸಕಲ ರೀತಿಯಲ್ಲೂ ಸಿದ್ಧವಾಗಿದೆ. ಏಪ್ರಿಲ್ 13ರಂದು ಅಧಿಸೂಚನೆ ಹೊರಡಿಸಲಿದ್ದು, ಏ.11ರವರೆಗೂ ಹೊಸ ಮತದಾರರ ಸೇರ್ಪಡೆ, ತಿದ್ದುಪಡಿಗೆ ಅವಕಾಶ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಬುಧವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ಏ.13ರಿಂದಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ಏಪ್ರಿಲ್ 20 ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾಗಿದ್ದು, ಏ.21ರಂದು ನಾಮಪತ್ರ ಪರಿಶೀಲಿಸಲಾಗುವುದು. ಏ.24 ರಂದು ನಾಮಪತ್ರ ಹಿಂಪಡೆಯಲು ಕಡೆಯ ದಿನವಾಗಿದ್ದು, ಮೇ 10 ರಂದು ಮತದಾನ ನಡೆಯಲಿದೆ. ಹಾಗೆಯೇ ಮೇ 13 ರಂದು ಮತ ಎಣಿಕೆ ಕಾರ್ಯ ನಡೆಯಲಿದ್ದು, ಮೇ 15ರಂದು ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ(ಮಾ.29 ರವರೆಗೆ ಹೊಸದಾಗಿ ಸೇರ್ಪಡೆಗೊಂಡವರು ಸೇರಿ) ಒಟ್ಟು 26,22,551 ಮತದಾರರಿದ್ದು, ಅವರಲ್ಲಿ 13,01,022 ಪುರುಷ ಮತದಾರರು ಹಾಗೂ 13,21,316 ಮಹಿಳಾ ಮತದಾರರಿದ್ದಾರೆ. 213 ಮಂದಿ ತೃತೀಯ ಲಿಂಗಿ ಮತದಾರರಿದ್ದಾರೆ. ಈ ಬಾರಿ ಹೊಸದಾಗಿ ಜಿಲ್ಲೆಯಲ್ಲಿ 47,812 ಯುವ ಮತದಾರರ ನೋಂದಣಿಯಾಗಿದೆ ತಿಳಿಸಿದರು.

ಏಪ್ರಿಲ್ 11ರವರೆಗೆ ಅವಕಾಶ

ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿರುವವರು ಫಾರ್ಮ್–6 ಅನ್ನು ಭರ್ತಿ ಮಾಡಿ ಏಪ್ರಿಲ್ 11ರವರೆಗೂ ಸಲ್ಲಿಸಬಹುದು. ಏ.11ರ ನಂತರ ಬರುವ ಅರ್ಜಿಗಳನ್ನು ಚುನಾವಣೆಯ ನಂತರವೇ ಪರಿಶೀಲನೆ ನಡೆಸಲಾಗುವುದು. ಅರ್ಜಿ ಪರಿಶೀಲನೆಗೆ ಕನಿಷ್ಠ 7–10 ದಿನಗಳ ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಏ.11ರವರೆಗೂ ಕಾಯದೆ ಸಾಧ್ಯವಾದಷ್ಟು ಬೇಗ ಅರ್ಜಿಸಲ್ಲಿಸಿ. ಎಲ್ಲಾ ಮತಗಟ್ಟೆ ಅಧಿಕಾರಿ ಕಚೇರಿ ಎದುರು ಮತಗಟ್ಟೆ ಅಧಿಕಾರಿಯ ಹೆಸರು ಮತ್ತು ಮೊಬೈಲ್ ನಂಬರ್ ಬರೆಸಲಾಗಿದ್ದು, ಗೊಂದಲಗಳಿದ್ದರೆ ಸಂಪರ್ಕಿಸಬಹುದಾಗಿದೆ.

ಅಲ್ಲದೆ ವೋಟರ್ ಹೆಲ್ಪ್‌ಲೈನ್ ಆ್ಯಪ್ ಮೂಲಕವೂ ಅರ್ಜಿ ಪಡೆದು ಸಲ್ಲಿಸಲು ಅವಕಾಶವಿದೆ. ಕೊನೆಯಲ್ಲಿ ಬಂದು ಮತದಾರರ ಪಟ್ಟಿಯಲ್ಲಿ ನನ್ನ ಹೆಸರಿಲ್ಲ, ಬಿಟ್ಟುಹೋಗಿದೆ ಎಂದರೂ ಯಾವುದೇ ಪ್ರಯೋಜನವಾಗುವುದಿಲ್ಲ. ಬಹಳಷ್ಟು ಜನ ಮೃತಪಟ್ಟಿದ್ದರೂ ಅವರ ಹೆಸರು ಮತದಾರರ ಪಟ್ಟಿಯಲ್ಲೇ ಇರುತ್ತದೆ. ಸಾಧ್ಯವಾದಷ್ಟು ಹೆಸರುಗಳನ್ನು ತೆಗೆದು ಹಾಕಲಾಗಿರುತ್ತದೆ. ಆದರೂ ತೆಗೆಯಲು ಸಾಧ್ಯವಾಗದೆ ಉಳಿದ ಮೃತ ಪಟ್ಟವರ ಹೆಸರುಗಳನ್ನು ಗುರ್ತಿಸಿಕೊಂಡು, ಅವರ ಹೆಸರಿನಲ್ಲಿ ಮತದಾನ ನಡೆಯದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದರು.

ಅಂಚೆ ಮತಪತ್ರ



ಜಿಲ್ಲೆಯಲ್ಲಿ 31,754 ವಿಕಲಚೇತನ ಮತದಾರು ಹಾಗೂ 80 ವರ್ಷ ಮೇಲ್ಪಟ್ಟ 84,917 ಮಂದಿ ಮತದಾರರಿದ್ದಾರೆ. ಇವರು ಮನೆಯಿಂದಲೇ ಮತದಾನ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಇದಕ್ಕಾಗಿ ಫಾರ್ಮ್ ನಂ.12ಡಿ ಅಲ್ಲಿ ನಾಮಪತ್ರ ಸಲ್ಲಿಕೆ ಆರಂಭವಾದ ದಿನದಿಂದ 5 ದಿನದೊಳಗೆ ಚುನಾವಣಾಧಿಕಾರಿಗಳಿಗೆ ಸಲ್ಲಿಸ ಬಹುದು. ಆದರೆ ಇದು ಕಡ್ಡಾಯವಲ್ಲ. ಎಲ್ಲರಿಗೂ ಮತಗಟ್ಟೆಗೆ ಬಂದು ಮತ ಚಲಾಯಿಸಲು ಪ್ರೋತ್ಸಾಹಿಸಲಾಗುವುದು. ಮತಗಟ್ಟೆಗೆ ಬಂದು ಮತ ಚಲಾಯಿಸಲು ಸಾಧ್ಯವಾಗದ ಅಥವಾ ಹಾಸಿಗೆ ಹಿಡಿದಿರುವ 80 ವರ್ಷ ಮೇಲ್ಪಟ್ಟ ಮತದಾರರುಗಳಿಗೆ ಅಂಚೆ ಮತಪತ್ರದ ಮೂಲಕ ಮನೆಯಿಂದಲೇ ಮತದಾನ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ. ಮತದಾನಕ್ಕೂ ಮೂರು ದಿನ ಮುಂಚಿತವಾಗಿ ವಿಶೇಷ ಮತಗಟ್ಟೆ ಅಧಿಕಾರಿಗಳು, ಏಜೆಂಟ್‌ಗಳು, ಸೆಕ್ಯೂರಿಟಿ ಏಜೆಂಟ್‌ಗಳು, ವಿಡಿಯೋಗ್ರಾಫರ್ ಜೊತೆಗೆ ಮನೆ ಮನೆಗೂ ಅಂಚೆ ಮತಪತ್ರ ನೀಡುವ ಮೂಲಕ ಮತದಾನ ಗುಪ್ತವಾಗಿ ನಡೆಯುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ರಾಜೇಂದ್ರ ತಿಳಿಸಿದರು.

2,905 ಮತಗಟ್ಟೆಗಳು

ಜಿಲ್ಲೆಯಲ್ಲಿ ಒಟ್ಟು 2,905 ಮತಗಟ್ಟೆಗಳಿವೆ. ಎಲ್ಲಾ ಮತಗಟ್ಟೆಗೂ ಕನಿಷ್ಠ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ರ್‍ಯಾಂಪ್ ವ್ಯವಸ್ಥೆ ಒದಗಿಸಲು ಕ್ರಮ ವಹಿಸಲಾಗಿದೆ. ಹಾಗೆಯೇ ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು ವಿವಿ ಪ್ಯಾಟ್ ಪೂರೈಸಲಾಗುವುದು. ಅಲ್ಲದೆ ಕ್ಷೇತ್ರವಾರು ನಿಯಂತ್ರಣ ಕೊಠಡಿ ತೆರೆಯಲಾಗಿದೆ. ಸಾರ್ವಜನಿಕರು ತಮಗೆ ಬೇಕಾದ ಮಾಹಿತಿ, ದೂರನ್ನು ಸಹ ದಾಖಲಿಸಬಹುದು.

ಮಾಡೆಲ್ ಪೊಲೀಸ್ ಠಾಣೆಗಳ ಸ್ಥಾಪನೆ

ಪ್ರತಿ ಕ್ಷೇತ್ರದಲ್ಲಿ ಸಾಧ್ಯವಾದಷ್ಟು ಮಾಡಲ್ ಪೊಲೀಸ್ ಠಾಣೆಗಳ ಸ್ಥಾಪನೆಗೆ ಚಿಂತಿಸಲಾಗಿದೆ. ಅಲ್ಲಿ ವೇಟಿಂಗ್ ರೂಂ, ಟಿ.ವಿ, ದಿನಪತ್ರಿಕೆಗಳು, ಮಕ್ಕಳ ಆಟಿಕೆಗಳು ಸೇರಿದಂತೆ ಒಂದು ಠಾಣೆಯಲ್ಲಿರುವ ಎಲ್ಲಾ ಬಗೆಯ ಸೌಲಭ್ಯಗಳು ಇರುವಂತಹ ಮಾಡಲ್ ಪೊಲೀಸ್ ಠಾಣೆಗಳ ಸ್ಥಾಪನೆಗೆ ವ್ಯವಸ್ಥೆ ಮಾಡಲಾಗುವುದು. ಪ್ರತಿ ಕ್ಷೇತ್ರದಲ್ಲಿ 5 ಪಿಂಕ್ ಪೊಲೀಸ್ ಠಾಣೆಗಳ ಸ್ಥಾಪನೆಗೂ ಚಿಂತಿಸಲಾಗಿದೆ. ಮುಖ್ಯವಾಗಿ ಯುವ ಮತದಾರರೇ ಮಾಡಲ್ ಪೊಲೀಸ್ ಠಾಣೆಗಳನ್ನು ನಿರ್ವಹಿಸುವ ಪರಿಕಲ್ಪನೆಯಲ್ಲೂ ಚಿಂತನೆ ನಡೆಸಲಾಗಿದೆ. ಬುಡಕಟ್ಟು ಜನಾಂಗದ ಮತದಾರರಿಗೆ ಯತ್ನಿಕ್ ಪೋಲಿಂಗ್ ಸ್ಟೇಷನ್‌ಗಳನ್ನು ನಿರ್ಮಿಸುವ ಮೂಲಕ ವಿಶೇಷ ರೀತಿಯಲ್ಲಿ ಹೆಚ್ಚು ಮತದಾನಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು.

ಇವಿಎಂ, ವಿವಿ ಪ್ಯಾಟ್ ಪರಿಶೀಲನೆ



ಈಗಾಗಲೇ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಪರಿಶೀಲನೆ ನಡೆಸಿ ಭದ್ರತೆಯಲ್ಲಿರಿಸಲಾಗಿದೆ. ಮತ್ತೊಮ್ಮೆ ಮೊದಲ ಹಂತದ ರ್‍ಯಾಂಮ್ ಆಗಿ ಪರಿಶೀಲನೆ ನಡೆಸಿ ಆಯಾ ಕ್ಷೇತ್ರ ವ್ಯಾಪ್ತಿಯ ಸ್ಟ್ರಾಂಗ್ ರೂಂಗಳಲ್ಲಿ ಇಡುವ ವ್ಯವಸ್ಥೆ ಮಾಡ ಲಾಗುವುದು. ಈ ವೇಳೆ ಪೊಲೀಸ್ ಭದ್ರತಾ ವ್ಯವಸ್ಥೆ ಮೂಲಕ ರಾಜಕೀಯ ಪಕ್ಷಗಳಿಗೂ ಮಾಹಿತಿ ನೀಡಿ, ಯಾವುದೇ ಗೊಂದಲ ಉಂಟಾಗದಂತೆ ಪಾರದರ್ಶಕವಾಗಿ ಮತಗಟ್ಟೆಗೆ ಇವಿಎಂ, ವಿವಿ ಪ್ಯಾಟ್‌ಗಳನ್ನು ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂದರು.


ಮತಗಟ್ಟೆ ಅಧಿಕಾರಿಗಳ ನೇಮಕ

ಚುನಾವಣಾ ಆಯೋಗದ ಸೂಚನೆಯಂತೆ ಪ್ರತಿ ಮತಗಟ್ಟೆಗೆ ಅಗತ್ಯ ಮತಗಟ್ಟೆ ಅಧಿಕಾರಿ ಮತ್ತು ಮೀಸಲು ಸಿಬ್ಬಂದಿಯನ್ನು ನೇಮಿಸಲು ಅಂತೆಯೇ ಕೇಂದ್ರ ಸರ್ಕಾರಿ ಅಧಿಕಾರಿ ಹಾಗೂ ಮೀಸಲು ಸಿಬ್ಬಂದಿ ನೇಮಿಸಲು ಕ್ರಮವಹಿಸಲಾಗಿದೆ. ದೊಡ್ಡ ಜಿಲ್ಲೆಯಾಗಿರುವುದರಿಂದ ಸುಮಾರು 16 ಸಾವಿರ ಜನ ಅಧಿಕಾರಿಗಳನ್ನು ನೇಮಿಸಲಾಗುವುದು. ಮಾದರಿ ನೀತಿ ಸಂಹಿತೆ ಹಾಗೂ ಅಭ್ಯರ್ಥಿಗಳ ವೆಚ್ಚದ ಮೇಲೆ ನಿಗಾವಹಿಸಲು ತಂಡ ರಚಿಸಲಾಗಿದೆ. ಸೆಕ್ಟರ್ ಆಫೀಸರ್, ಫ್ಲೈಯಿಂಗ್ ಸ್ಕ್ವಾಡ್, ಸ್ಟಾಟಿಕ್ ಸರ್ವೆಲೆನ್ಸ್ ಟೀಂ, ವೀಡಿಯೋ ವೀವ್ಹಿಂಗ್ ಟೀಮ್, ವೀಡಿಯೋ ಸರ್ವೆಲೆನ್ಸ್ ಟೀಮ್, ಅಸಿಸ್ಟೆಂಟ್ ಎಲೆಕ್ಷನ್ ಅಬ್ಸರ್ವರ್ಸ್ ತಂಡ ರಚಿಸಲಾಗಿದೆ. 242 ಸೆಕ್ಟರ್ ಅಧಿಕಾರಿಗಳು, 33 ಫ್ಲೈಯಿಂಗ್ ಸ್ಕ್ವಾಡ್, 54 ಸ್ಟಾಟಿಕ್ ಸರ್ವೆಲೆನ್ಸ್ ಟೀಂ ನಿಯೋಜಿಸಿದ್ದು, ಅವಶ್ಯಕತೆಗೆ ತಕ್ಕಂತೆ ನಿಯೋಜಿಸಲಾಗುವುದು. ಅಬಕಾರಿ ಇಲಾಖೆಯೂ ಕಾರ್ಯನಿರ್ವಹಿಸಲಿದೆ ಎಂದು ಮಾಹಿತಿ ನೀಡಿದರು.

ಚುನಾವಣಾ ವೇಳಾಪಟ್ಟಿ ಪ್ರಕಟವಾದ 72 ಗಂಟೆಯೊಳಗೆ ಎಲ್ಲಾ ರೀತಿಯ ಖಾಸಗಿ ಸ್ವತ್ತುಗಳ ಮೇಲೆ ಪ್ರಚುರಪಡಿಸಿರುವ ಎಲ್ಲಾ ರೀತಿಯ ಅನಧಿಕೃತ ರಾಜಕೀಯ ಜಾಹೀರಾತುಗಳನ್ನು ತೆರವುಗೊಳಿಸಲಾಗುತ್ತಿದೆ. ಚುನಾವಣಾ ನೀತಿ ಸಂಹಿತೆ ಹಿನ್ನೆಲೆ ಹೊಸ ಕಾಮಗಾರಿ, ಟೆಂಡರ್ ಕರೆಯಲು ಅವಕಾಶವಿಲ್ಲ. ಈಗಾಗಲೇ ಚಾಲನೆ ನೀಡಿರುವ ಕಾಮಗಾರಿಗಳು ಮುಂದುವರೆಯಲಿವೆ. ಚುನಾವಣೆಯನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಪ್ರತಿಯೊಬ್ಬ ಮತದಾರರು ಸಹ ಅವರ ಹಕ್ಕನ್ನು ಚಲಾಯಿಸಲು ಅಡೆತಡೆಗಳಾಗದಂತೆ ಮತದಾನದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲಾಡಳಿತದಿಂದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಭಾರತ ಚುನಾವಣಾ ಆಯೋಗದ ಎಲ್ಲಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಚುನಾವಣೆಯನ್ನು ನಡೆಸಲು ಜಿಲ್ಲೆಯಲ್ಲಿ ಮತದಾರರು ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳು ಸಹಕರಿಸಬೇಕು. ಮಾಧ್ಯಮಗಳು ಕೂಡ ಅನಧಿಕೃತ ಗೋಡೆ ಬರಹ, ಅನುಮತಿ ಇಲ್ಲದೆ ಬರೆಯುತ್ತಿದ್ದರೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಸಿ–ವಿಜಿಲ್ ತಂತ್ರಾಂಶ ಬಿಡುಗಡೆ

ಚುನಾವಣಾ ಆಯೋಗವು ನಾಗರಿಕರ ಅನುಕೂಲಕ್ಕಾಗಿ ಸಿ–ವಿಜಿಲ್ ಆನ್‌ಲೈನ್ ಮೊಬೈಲ್ ತಂತ್ರಾಂಶವನ್ನು ಹೊರತಂದಿದ್ದು, ಈ ಮೂಲಕ ನಾಗರಿಕರು ಮಾದರಿ ನೀತಿ ಸಂಹಿತೆ ಮತ್ತು ಚುನಾವಣಾ ವೆಚ್ಚದ ಉಲ್ಲಂಘನೆ ಕುರಿತು ಸ್ಥಳದಿಂದಲೇ ದೂರು ದಾಖಲಿಸಲು ಅವಕಾಶವಿದೆ. ಈ ತಂತ್ರಾಂಶದ ಮೂಲಕ ದೂರು ದಾಖಲಿಸಿದರೆ ದೂರು ದಾರರ ಹೆಸರು ಅಥವಾ ವಿಳಾಸ ಗೊತ್ತಾಗುವುದಿಲ್ಲ.



ಇದರಲ್ಲಿ ಹಣ ಹಂಚುವುದು, ಮದ್ಯ ಹಂಚುವುದು, ಉಡುಗೊರೆ ನೀಡುವುದು ಸೇರಿದಂತೆ ಎಲ್ಲಾ ರೀತಿಯ ಚುನಾವಣಾ ಅಕ್ರಮದ ಕುರಿತು ದೂರು ನೀಡಬಹುದು. ಇದಕ್ಕಾಗಿ ಸಿ. ವಿಸಿಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಚುನಾವಣಾ ಸಂಬಂಧದ ದೂರುಗಳನ್ನು ಈ ತಂತ್ರಾಂಶದ ಮೂಲಕ ದಾಖಲಿಸ ಬಹುದು. ಜಿಲ್ಲೆಯ ಪ್ರಜ್ಞಾವಂತ ಮತದಾರರು ಸಿ–ವಿಜಿಲ್ ಆ್ಯಪ್ ಅನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಕೆ ಮಾಡುವ ಮೂಲಕ ಮಾಹಿತಿ ನೀಡಿದಲ್ಲಿ ಉಲ್ಲಂಘಟನೆ ತಡೆಯಲು ಸಹಾಯವಾಗುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ರಾಜೇಂದ್ರ ತಿಳಿಸಿದರು. ಜಿಪಂ ಸಿಇಓ ಕೆ.ಎಂ. ಗಾಯತ್ರಿ, ಎಡಿಸಿ ಕವಿತಾ ಉಪಸ್ಥಿತರಿದ್ದರು. ಸಭೆಯಲ್ಲಿ ಜಿಪಂ ಸಿಇಓ ಗಾಯಿತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಂ, ಚುನಾವಣಾ ತಹಸೀಲ್ದಾರ್ ರಾಮ್‌ಪ್ರಸಾದ್ ಉಪಸ್ಥಿತರಿದ್ದರು.

ಜಾವಗಲ್ ಶ್ರೀನಾಥ್ ಚುನಾವಣಾ ರಾಯಭಾರಿ...



ಜಿಲ್ಲಾ ಚುನಾವಣಾ ರಾಯಭಾರಿಯಾಗಿ ಜಾವಗಲ್ ಶ್ರೀನಾಥ್ ಅವರು ಆಯ್ಕೆಯಾಗಿದ್ದಾರೆ. ಮತದಾರರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಜಿ ಕ್ರಿಕೆಟಿಗರಾದ ಜಾವಗಲ್ ಶ್ರೀನಾಥ್ ಅವರೊಟ್ಟಿಗೆ ತೃತೀಯ ಲಿಂಗಿ ಹಾಗೂ ಶತಾಯುಷಿಗಳನ್ನು ಆಹ್ವಾನಿಸಲಾಗಿದೆ. ಈ ಮೂಲಕ ಮತದಾನ ಹೆಚ್ಚಿಸುವಲ್ಲಿ ಕಾರ್ಯನಿರ್ವಹಿಸಲಾಗುವುದು.

ನಿಯಮಾನುಸಾರ ಪ್ರಧಾನಿ ಕಾರ್ಯಕ್ರಮ



ಏ.9ರಂದು ಕರ್ನಾಟಕ ಮುಕ್ತ ವಿವಿಯಲ್ಲಿ ನಡೆಯುವ ಹುಲಿ ಸಮೀಕ್ಷಾ ವರದಿ ಬಿಡುಗಡೆ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿದ್ದು, ಚುನಾವಣೆ ನೀತಿ ಸಂಹಿತೆ ಹಿನ್ನೆಲೆ ಕಾರ್ಯಕ್ರಮ ರದ್ದಾಗಲಿದೆಯಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಸರ್ಕಾರಿ ಕಾರ್ಯಕ್ರಮವಾಗಿರುವುದರಿಂದ ಚುನಾವಣಾ ಆಯೋಗದ ನಿಯಮಾನುಸಾರ ನಡೆಯಲಿದೆ ಎಂದರು.

50 ಸಾವಿರಕ್ಕಿಂತ ಹೆಚ್ಚು ಹಣ ಒಯ್ಯದಿರಿ...

"ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಜಿಲ್ಲೆಯ ಹಲವು ಕಡೆ ಚೆಕ್ ಪೋಸ್ಟ್ ತೆರೆಯಲಾಗಿದೆ. ಈ ಸಂದರ್ಭದಲ್ಲಿ 50 ಸಾವಿರಕ್ಕಿಂತ ಹೆಚ್ಚು ಹಣ ಇದ್ದರೆ, ಅದಕ್ಕೆ ಅಗತ್ಯ ದಾಖಲಾತಿ ಹೊಂದಿರಬೇಕು. ಇಲ್ಲವಾದರೆ ಪ್ರಕರಣ ದಾಖಲಿಸಲಾಗುವುದು. ಬ್ಯಾಂಕ್‌ಗಳಿಗೂ ಹೆಚ್ಚಿನ ಹಣ ವರ್ಗಾವಣೆ ಮಾಡುವವರು ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಸಾಧ್ಯವಾದಷ್ಟು ಆನ್‌ಲೈನ್ ಮೂಲಕ ವರ್ಗಾವಣೆ ಮಾಡುವುದು ಒಳ್ಳೆಯದು.

– ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಮತದಾರರ ಅನುಕೂಲಕ್ಕಾಗಿ ಕಂಟ್ರೋಲ್ ರೂಂ ಕಾರ್ಯಾಚರಣೆ

ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನೆಲೆ 11 ವಿಧಾನಸಭಾ ಕ್ಷೇತ್ರಗಳಲ್ಲಿ ಹಾಗೂ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕಂಟ್ರೋಲ್ ರೂಂ ಕಾರ್ಯನಿರ್ವಹಿಸಲಿದೆ. ಮತದಾರರು ಯಾವುದೇ ಮಾಹಿತಿಗಾಗಿ ಕರೆ ಮಾಡಬಹುದು. ಪಿರಿಯಾಪಟ್ಟಣ ಕಂಟ್ರೋಲ್ ರೂಂ ದೂ.ಸಂ. 08223–274175, ಕೆ.ಆರ್.ನಗರ ದೂ.ಸಂ.08223–262371, 262234, ಹುಣಸೂರು ದೂ.ಸಂ. 08223– 251550, ಹೆಚ್.ಡಿ. ಕೋಟೆ ದೂ.ಸಂ. 08228– 255600, ನಂಜನಗೂಡು ದೂ.ಸಂ. 08221–223108, ಚಾಮುಂಡೇಶ್ವರಿ ದೂ.ಸಂ. 0821– 2414811, 2414812, ಕೃಷ್ಣರಾಜ ಕ್ಷೇತ್ರ ದೂ.ಸಂ. 0821– 2418800, 2418816, 2418811, 2440890, ವರುಣಾ ದೂ.ಸಂ. 08221– 223108, ಟಿ.ನರಸೀಪುರ ದೂ.ಸಂ.08227– 260210, ಜಿಲ್ಲಾಧಿಕಾರಿ ಕಚೇರಿ ಕಂಟ್ರೋಲ್ ರೂ.ನಂ.1077 ಹಾಗೂ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಮತದಾರ ಸೌಲಭ್ಯ ಕೇಂದ್ರ ಪ್ರಾರಂಭವಾಗಿದ್ದು, 1950 ನಂಬರ್‌ಗೆ ಉಚಿತ ದೂರವಾಣಿಗೆ ಕರೆ ಮಾಡಿ ಮತದಾರರ ಪಟ್ಟಿಗೆ ಸಂಬಂಧಿಸಿದ ಅಗತ್ಯ ಮಾಹಿತಿ ಪಡೆಯಬಹುದು.

ಚೆಕ್‌ಪೋಸ್ಟ್‌ಗಳ ನಿರ್ಮಾಣ...



ಮೈಸೂರು ನಗರ ವ್ಯಾಪ್ತಿಯಲ್ಲಿ ಅಗತ್ಯ ಇರುವ ಕಡೆಗಳಲ್ಲಿ ಚೆಕ್ ಪೋಸ್ಟ್ ನಿರ್ಮಿಸಲಾಗಿದೆ. ಅಲ್ಲದೆ ರೌಡಿ ಶೀಟರ್ಸ್‌ಗಳ ಪೈಕಿ ಕೆಲವರನ್ನು ಗಡಿಪಾರು ಮಾಡಲಾಗಿದೆ. ಅಲ್ಲದೆ ಚುನಾವಣೆ ಸಂಬಂಧ ಎಲ್ಲಾ ರೀತಿಯ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದರು.

ನಗರ ವ್ಯಾಪ್ತಿಯಲ್ಲಿ ಈಗಾಗಲೇ 10 ಚೆಕ್‌ಪೋಸ್ಟ್ ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಚುನಾವಣಾ ತಂಡ ಹಾಗೂ ಕೇಂದ್ರದ ಸಿಬ್ಬಂದಿ ಸೇರ್ಪಡೆಯಾಗುತ್ತಾರೆ. ದಿನದ 24 ಗಂಟೆಗಳ ಕಾಲ ತಪಾಸಣೆ ನಡೆಯಲಿದೆ. ನಗರ ವ್ಯಾಪ್ತಿಯಲ್ಲಿ 855 ರೌಡಿಶೀಟರ್‌ಗಳಿದ್ದು, 12 ಮಂದಿಗೆ ಈಗಾಗಲೇ ಗಡಿಪಾರಾಗಿದೆ. 312 ಸೂಕ್ಷ್ಮ ಸ್ಥಳಗಳಿದ್ದು, ಅಲ್ಲಿ ಹೆಚ್ಚಿನ ಮುಂಜಾಗ್ರತೆ ವಹಿಸಲಾಗಿದೆ. ನಗರದ ಪ್ರಮುಖ ಸ್ಥಳಗಳಲ್ಲಿ ರೂಟ್ ಮಾರ್ಚ್ ನಡೆಸಲಾಗುವುದು. ಈಗಾಗಲೇ 26 ಲಕ್ಷ ರೂ. ನಗದು, 25 ಕೆಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. 68 ಲಿಕ್ಕರ್ ಕೇಸ್ ದಾಖಲಾಗಿದೆ ಎಂದು ಮಾಹಿತಿ ನೀಡಿದರು.

41 ಲಕ್ಷ ರೂ. ವಶ: ಎಸ್ಪಿ ಸೀಮಾ ಲಾಟ್ಕರ್ ಮಾತನಾಡಿ, ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 41 ಲಕ್ಷ ರೂ. ವಶಕ್ಕೆ ಪಡೆಯಲಾಗಿದೆ. ಜಿಲ್ಲೆಗೆ 5 ಪ್ಯಾರಾ ಮಿಲಿಟರಿ ಫೋರ್ಸ್ ಬರಲಿದೆ.

ಜಿಲ್ಲಾ ವ್ಯಾಪ್ತಿಯಲ್ಲಿ 385 ಅನ್ನು ಸೂಕ್ಷ್ಮ ಪ್ರದೇಶಗಳೆಂದು ಗುರ್ತಿಸಲಾಗಿದೆ. ಕೇರಳದ ಬಾವಲಿಯಲ್ಲಿ ಚೆಕ್‌ಪೋಸ್ಟ್ ನಿರ್ಮಾಣ ಮಾಡಲಾಗಿದೆ. ಇದರೊಟ್ಟಿಗೆ 41 ಸರ್ಪ್ರೈಸ್ ಚೆಕ್‌ಪೋಸ್ಟ್ ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ 1493 ರೌಡಿ ಶೀಟರ್‌ಗಳಿದ್ದಾರೆ. ಅವರಲ್ಲಿ 1201 ರೌಡಿಶೀಟರ್‌ಗಳು ಯಾವುದೇ ಪ್ರಕರಣಗಳಲ್ಲಿ ಭಾಗಿಯಾಗದಂತೆ ಕ್ರಮ ವಹಿಸಲಾಗಿದೆ. ಮೂವರು ರೌಡಿಶೀಟರ್‌ಗಳನ್ನು ಗಡಿಪಾರು ಮಾಡಲಾಗಿದ್ದು, ಇನ್ನು 13 ಮಂದಿ ಗಡಿಪಾರಿಗೆ ಶಿಫಾರಸ್ಸು ಮಾಡಲಾಗಿದೆ ಎಂದರು.

ಮೀಡಿಯಾ ಮಾನಿಟರಿಂಗ್



ಫೇಕ್ ಸುದ್ದಿಗಳು ಪ್ರಸಾರವಾಗದಂತೆ ತಡೆಗಟ್ಟಲು ಮೀಡಿಯಾ ಮಾನಿ ಟರಿಂಗ್ ಟೀಂ ಕೆಲಸ ಮಾಡಲಿದೆ. ಸಾಮಾಜಿಕ ಮಾಧ್ಯಮಗಳ ಮೇಲೂ ಗಮನಹರಿಸಲಾಗುವುದು. ಅಧಿಕೃತವಾಗಿ, ವ್ಯವಸ್ಥಿತವಾಗಿ ನಿಯಮಾನುಸಾರ ಜಾಹೀರಾತು ನೀಡಲು ಖರ್ಚು ಮಾಡಬಹುದಾಗಿದೆ. ಆದರೆ ಅನುಮತಿಯಿಲ್ಲದೆ ಮಾಡುವ ಎಲ್ಲಾ ಚುನಾವಣಾ ಪ್ರಚಾರವನ್ನು ಗಮನಿಸಲಾಗುವುದು. ಜೊತೆಗೆ ಸಂಬಂಧಪಟ್ಟವರ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ ಸೇರಿದಂತೆ ಇನ್ನಿತರೆ ಕಾಯ್ದೆಗಳ ಕಾನೂನು ಕ್ರಮ ಜರುಗಿಸಲಾಗುವುದು. ಕರಪತ್ರ, ಪೋಸ್ಟರ್, ಬಿಲ್‌ಗಳಲ್ಲಿ ಪ್ರಕಾಶಕರು, ಪ್ರಕಾಶನ ಸಂಸ್ಥೆಯ ಹೆಸರನ್ನು ಕಡ್ಡಾಯವಾಗಿ ಮುದ್ರಿಸಬೇಕು, ಪೇಯ್ಡ್ ನ್ಯೂಸ್‌ಗೆ ಅವಕಾಶ ಇರುವುದಿಲ್ಲ. ಯಾವುದೇ ಕಾರ್ಯಕ್ರಮ ನಡೆಸಬೇಕಾದರೂ ಅನುಮತಿ ಪಡೆಯಬೇಕು ಮತ್ತು ವೆಚ್ಚದ ವಿವರ ಸಲ್ಲಿಸಬೇಕು. ಯಾವುದೇ ಕಟ್ಟಡ, ಸಾರ್ವಜನಿಕ ಸ್ಥಳ, ರೈಲ್ವೆ ಸೇತುವೆ, ಏರ್ ಪೋರ್ಟ್, ಬಸ್ ನಿಲ್ದಾಣ, ಮುನಿಸಿಪಲ್ ಕಟ್ಟಡ, ಟೆಲಿಫೋನ್, ವಿದ್ಯುತ್ ಕಂಬ ಮುಂತಾದ ಕಡೆ ಹೋಲ್ಡಿಂಗ್ಸ್, ಕಟೌಟ್, ಫ್ಲಾಗ್ಸ್ ಮುಂತಾದವುಗಳನ್ನು ತೆರವುಗೊಳಿಸಬೇಕು. ಎಲ್ಲಾ ರೀತಿಯ ಅನಧಿಕೃತ ಜಾಹೀರಾತು ಫಲಕ ತೆರವುಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹಾಗೆಯೇ ಯಾವುದೇ ಕಾರ್ಯಕ್ರಮ ಮಾಡಲು ಅನುಮತಿ ಕಡ್ಡಾಯವಾಗಿದ್ದು, ಅನುಮತಿ ಪಡೆಯದೆ ಯಾವುದೇ ಕಾರ್ಯಕ್ರಮ ಮಾಡುವಂತಿಲ್ಲ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED

Data Entry Operators Telecallers, Sales Executive, Service Advisor, ITI, Diploma.
Contact:
8867196098

SITE FOR SAE

890 Sqft (22.25x40) N/E Corner @ Silicon Echo City beside Vijayanagar 4th Stage, Near Rashtrotthana Vidya Kendra, Mysore
Rate - 4000/- Sqft
9845322723
9741880668

WANTED

Female Telecallers -10
9886654463

Reflect Hair and Skin Professional Saloon

WANTED

Female Beauticians & Hair Dresser.
Place: J.P. Nagar, Mysore
9880548126, 9916887478

ತಕ್ಷಣ ಬೇಕಾಗಿದ್ದಾರೆ

ನಂಜನಗೂಡು, ಕಡಕೊಳ ಮತ್ತು ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC &ಮೇಲ್ಪಟ್ಟು
ಸಂಬಳ: 16000 + W/O (8 hrs)
ವಯೋಮಿತಿ: 50 ವರ್ಷದೊಳಗೆ
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819
9538567819

ವೃದ್ಧಾಶ್ರಮ

ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಯಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಶ್ರೀ ಗೌರಿಶಂಕರ ಟ್ರಾವೆಲ್ಸ್

29–4–23 (4 ದಿನ): ಚಿತ್ರದುರ್ಗ, ಟಿ.ಬಿ. ಡ್ಯಾಂ, ಹಂಪಿ, ಕೂಡಲಸಂಗಮ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬಿಜಾಪುರ ಇತ್ಯಾದಿ.
20–5–2023 (7 ದಿನ): ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಬುದ್ಧಗಯಾ, ಗಯಾ, ಬಾಬಾ ಬೈದ್ಯನಾಥ್ ಇತ್ಯಾದಿ.
ವಿಮಾನ / ಎ.ಸಿ. ಬಸ್ / ಊಟ / ರೂಂ.
Mob: 9620002114

ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 40 ವರ್ಷ
ವಿದ್ಯಾರ್ಹತೆ : ITI Fitter, Diploma Mach & 7 to PUC
9035381989

ಬೇಕಾಗಿದ್ದಾರೆ

ಮೈಸೂರು ಹಾಗೂ ನಗುವಿನಹಳ್ಳಿ, ಸಿದ್ದಲಿಂಗಪುರ ಸುತ್ತಮುತ್ತಾ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು ESI & PF ಸೌಲಭ್ಯವಿರುತ್ತದೆ.
380/ಎ, 2ನೇ ಮಹಡಿ, ಕೃಷ್ಣವಿಲಾಸ ರಸ್ತೆ, ಮೈಸೂರು
9513089922
9513999755

29-04-2023 & 12-05-2023

14 ದಿನಗಳ ದೆಹಲಿ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, 28–06–2023 ರಿಂದ 13 ದಿನಗಳ ವೈಷ್ಣವಿದೇವಿ ಕಾಶ್ಮೀರ, ಗುಲ್ಮಾರ್ಗ್ ಅಮರನಾಥ್,
ಸಂಪರ್ಕಿಸಿ: ಟಿಪ್ಪನ್ ಟೂರ್ಸ್ ಅಂಡ್ ಟ್ರಾವೆಲ್ಸ್ ತ್ಯಾಗರಾಜನಗರ, ಬೆಂಗಳೂರು
9342287551
8050629305

WANTED JOB !

PART TIME ! HOME BASSED
ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಫೋನ್ ಹೊಂದಿರಬೇಕು

EDUCATION	WORK TIME	SALARY
SSLC, PUC any Deegree	4 HOURS	7000/- 10000/-

Office Staff (ದಟ್ಟಗಳ್ಳಿ ಮೈಸೂರು)
9986621226

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SITES FOR SALE

MUDA Approved
Cauvery Enclave
40x60, 30x40, 20x30
in between Manipal & NH Hospital
LOAN AVAILABLE from all major Banks.
8971119292/9611223444

ಟಿವಿ ರಿಪೇರಿ

ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮೈಸೂರು ಮ್ಯಾರೇಜ್ ಬ್ಯೂರೋ

ಬೆಂಗಳೂರಿನಲ್ಲಿರುವ ಸುಂದರ ಶ್ರೀಮಂತ ಕೋಟ್ಯಾಧೀಶ್ವರ MBA ವರ್ಷಕ್ಕೆ 24 ಲಕ್ಷ ವರಮಾನ ವಿರುವ ಸ್ವಂತ ಮನೆ ಮತ್ತು ಆಸ್ತಿ ಇರುವ ಒಳ್ಳೆಯ ಮನೆತನದ ವರನಿಗೆ ಸುಂದರ ವಿದ್ಯಾವಂತ–ವಧುಬೇಕು ಜಾತಿ ಅಬ್ಯಂತರ ಇಲ್ಲ ನೇರ ಸಂಪರ್ಕಿಸಿ:
ಡಾ. ಗುರೂಜಿ ಮೈಸೂರು
9448229184,7899625268

ತಕ್ಷಣ ಬೇಕಾಗಿದ್ದಾರೆ

ಇಲವಾಲ, ಹೂಟಗಳ್ಳಿ, ಸಿಟಿ ಬಸ್‌ಸ್ಟ್ಯಾಂಡ್, ಹೆಬ್ಬಾಳ್ ಬನ್ನಿಮಂಟಪ ಪ್ರದೇಶಗಳಿಗೆ ಸೆಕ್ಯೂರಿಟಿಗಾರ್ಡ್ಸ್ & ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ.
ESI +PF ಊಟ+ವಸತಿ ಇರುತ್ತದೆ.
9632049421

NAATYA ®

MAKKALA SAINYA SUMMER CAMP
ACTIVITIES : Dance, Drama, Singing, Drawing etc.,+20 Activities. Regular classes available.
Venue: Nazarbad, Mysore. Call
9964491957/9964566070

SITE FOR SALE

30x40 Sites, Bank Loan upto 80%, Near Gurur Bus Stop, Ramabainagar, Mysore. DTCP approved (Corporation Limits)
1.5 kms from J P Nagar Ring Road.
8660105902

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 BANGALORE 9343142258

Dr. D. H. BAGALKOT SEXOLOGIST (Since 1983)

ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ



ಶೀಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ...
ಮೈಸೂರು: ಪ್ರತಿ ತಿಂಗಳು 1, 2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ, ಧನ್ವಂತ್ರಿ ರೋಡ
Cell:9743193428
www.drbagalkot.com

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ರಾಧ್ವ ಐಟಿ ಕಂಪನಿಗೆ ಗುತ್ತಿಗೆ ಆಧಾರದ (ಕಾಂಟ್ರಾಕ್ಟ್) ಮೇಲೆ ಹೌಸ್ ಕೀಪಿಂಗ್ ಕೆಲಸ ಮಾಡುವ ಹುಡುಗರು ಬೇಕಾಗಿದ್ದಾರೆ. ಸೌಲಭ್ಯಗಳು : ವೇತನ, ಪಿಎಫ್, ಇ.ಎಸ್.ಐ, ವಾರ್ಷಿಕ ಬೋನಸ್, ವಾರ್ಷಿಕ ಸಂಬಳ ಹೆಚ್ಚಳಿಕೆ, ಗ್ರಾಚ್ಯುಟಿ, ಸಮವಸ್ತ್ರ ಮತ್ತು ಕೂ. ವೇತನ ರೂ13,800/– ವಯೋಮಿತಿ 18 ರಿಂದ 35 ವರ್ಷ, ವಿದ್ಯಾರ್ಹತೆ 7 ರಿಂದ 10ನೇ ತರಗತಿ ಪಾಸ್ ಅಥವಾ ಫೇಲ್. ಆಸಕ್ತಿಯುಳ್ಳವರು ಸಂಪರ್ಕಿಸಿ: ಎಸ್.ಎಲ್.ಎನ್ ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈ.ಲಿ., ನಂ.291/ಸಿ, ಹರಿಲಮ್ಮ ಬಿಲ್ಡಿಂಗ್, ಎಸ್.ಎಸ್.ಟಿ.ಪಿ. ಎದುರು, ಆರೋಮ ಬೇಕರಿ ಫ್ಯಾಕ್ಟರಿ ಔಟ್ ಲೇಟ್ ಪಕ್ಕದಲ್ಲಿ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570017
9900509554 / 8105669977

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಕಂಪನಿಗಳಲ್ಲಿ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. (ಊಟ ವಸತಿ ಸೌಲಭ್ಯವಿರುತ್ತದೆ) ಮತ್ತು (ಮನೆಯಲ್ಲೆ ಕುಳಿತು ಕೈ ಬರಹದ ಮೂಲಕ ತಿಂಗಳಿಗೆ 6 ರಿಂದ 7 ಸಾವಿರದ ವರೆಗೆ ಸಂಪಾದನೆ ಮಾಡಲು ಪಾರ್ಟ್ ಟೈಮ್ ಜಾಬ್ ಸಿಗುತ್ತದೆ. ತಕ್ಷಣ ಸಂಪರ್ಕಿಸಿ: 9164975503
7795485519,8217498208

WANTED

1. Lady Admin for Office Work Experience 5 to 10 Years
2. Sales Executive for Marketing Experience - 2 to 3 Years
9620052257
8152027860

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸೋಲಾರ್ ವಾಟರ್ ಹೀಟರ್

Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

Part Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ).
87490 98879

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ.
ಸಂಬಳ+ಓಟಿ, 15,200–86000.
9740733021 / 9535028750

ಸೈಟ್ಸ್ @ ಮೈಸೂರು

ಟಿ.ನರಸೀಪುರ ರಿಂಗ್ ರೋಡ್ ನಿಂದ ಸುಮಾರು 1.5 KMS
MUDA APPROVED
ಸುತ್ತಮುತ್ತ ಮೂಡಾ ಲೇಔಟ್ಗಳಿವೆ
GSS 89512-76688

MATCH MAKER BRIDES/ GROOMS

ವಧು–ವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ Up to 65 Years Govt Jobs, Private Jobs/ Own Industries, Showrooms, 1st ಮದುವೆಗೆ 28000 ವಧುಗಳಿಗೆ ವರಬೇಕು, 40000 ವರಗಳಿಗೆ ವಧು ಬೇಕು, 4000 ಡೈವೋರ್ಸಿಗಳಿಗೆ ವಿದುರರಿಗೆ/ ವಿದವೆಯರಿಗೆ/ ಸ್ವತಂತ್ರರಿಗೆ ವಧುಗಳಿಗೆ SSLC/ PUC ಬಡವರ ವಧುಗಳಿಗೆ/ಹಳ್ಳಿ ನಗರ ಪ್ರದೇಶ ಹೆಣ್ಣುಗಳಿಗೆ ಉಚಿತ ಮದುವೆ+ವಸತಿ+ಉದ್ಯೋಗ ಆಯ್ಕೆ ನಿಮ್ಮದು ಆಯಾ ಜಾತಿಯ
7975728012

ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ

ಹೂಟಗಳ್ಳಿ, ಕೂರ್ಗಳ್ಳಿ ಮತ್ತು ಬಸ್ತಿಪುರ ಹತ್ತಿರವಿರುವ ಚಪ್ಪಲ್ ಕಂಪನಿಗೆ ಟೈಲರಿಂಗ್ ಮತ್ತು ಹೆಲ್ಪರ್ ಕೆಲಸಕ್ಕೆ 18 ರಿಂದ 35 ವರ್ಷದ ಮಹಿಳೆಯರು ಬೇಕಾಗಿದ್ದಾರೆ. ಕ್ಯಾಂಟೀನ್ ಮತ್ತು ವಾಹನ ಸೌಲಭ್ಯವಿರುತ್ತದೆ. Day Timing - 9AM to 5.30 PM ಇ.ಎಸ್.ಐ. ಮತ್ತು ಪಿ.ಎಫ್ ಸೌಲಭ್ಯವಿರುತ್ತದೆ. ಆಧಾರ್ ಪ್ರತಿ, ಪಾನ್‌ಕಾರ್ಡ್, ಬ್ಯಾಂಕ್ ಪುಸ್ತಕ ಮತ್ತು ಫೋಟೋ–2 ಹಳೆ ಇ.ಎಸ್.ಐ. ನಂಬರ್‌ನೊಂದಿಗೆ ಸಂಪರ್ಕಿಸಿ
ಬೋರೇಗೌಡ : 8050905152
ರತ್ನಯ್ಯ : 9900889325
ಪ್ರಕಾಶ್ – 8971460235

ಸಂಪು ಕ್ಲೀನಿಂಗ್‌ಗಾಗಿ

ಸಂಪರ್ಕಿಸಿ:
8861612486

BOOKING START

ಕೇಶವಮೂರ್ತಿ ಲೇಔಟ್
ಶ್ರೀನಗರ ರೈಲ್ವೆ ಗೇಟ್ ಹಿಂಭಾಗದ ಬಡಾವಣೆ ... ಹತ್ತಿರ, ... ಮೈಸೂರು ತಾಲ್ಲೂಕು.
just 3.5 KM jp nagar ringroad
30x40, 30x50
MUDA APPROVED
SK DEVELOPER & PROPERTIES
Office: Teachers layout opp. JP nagar Ringroad, Mysore.
8453531221

ಮನೆಯಿಂದಲೇ ಸಂಪಾದಿಸಿ

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
9731891409

ತಕ್ಷಣ ಬೇಕಾಗಿದ್ದಾರೆ

ಹೂಟಗಳ್ಳಿ, ಹೆಬ್ಬಾಳ ಮತ್ತು ಮೇಟಗಳ್ಳಿ, ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಡ್ರೈವರ್/ಗಾರ್ಡ್‌ಗಳು, ಲೇಡಿಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ SSLC &ಮೇಲ್ಪಟ್ಟು
ಸಂಬಳ: 16000 + W/O (8 hrs)
ಊಟ, ತಿಂಡಿ ಸೌಲಭ್ಯವಿರುತ್ತದೆ.
9620667819
9880727819

JOB OPPORTUNITY

* TELECALLING & ADMIN(Female)
Age limit upto 35years
English: Speak & write
Computer Knowledge - Not essential

CONTACT
SREENIVASA GLAMOUR STORES
K R CIRCLE, MYSORE-1
MOB: 7899062018
glamourmysore@gmail.com

ಬೇಕಾಗಿದ್ದಾರೆ

ಮೈಸೂರಿನ ಬೋಗಾದಿ ರಿಂಗ್‌ರೋಡ್‌ನಲ್ಲಿ ಇರುವ ಕಂಪೆನಿಯಲ್ಲಿ ಕೆಲಸ ಮಾಡುವುದಕ್ಕೆ ಪುರುಷ ಅಥವಾ ಮಹಿಳಾ ಟೈಲರ್‌ಗಳು ಹಾಗೂ ಹೆಲ್ಪರ್‌ಗಳು ಬೇಕಾಗಿದ್ದಾರೆ
9900251990
7899007585

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು

FAMOUS ASTROLOGER
ಪಂ. ಎಸ್.ಮಣಿಕಂಠನ್
ಮೊ: 9480743991
ಪ್ರೀತಿಯಲ್ಲಿ ನಂಬಿ ಮೋಸ, ಹಣಕಾಸು, ಶತ್ರುಕಾಟ, ಸ್ತ್ರೀಪುರುಷ, ಪ್ರೇಮ, ಗುಪ್ತ ಸಮಸ್ಯೆ, ಗಂಡ–ಹೆಂಡತಿ ಕಿರಿಕಿರಿ, ಸೋಲಬಾಧೆ, ಅನಾರೋಗ್ಯ ಮದುವೆ, ಸಂತಾನ, ವ್ಯಾಪಾರ, ವಿ.ಸೂ: ಅಘೋರಿ, ಕೊಲ್ಲತ್ತ, ಕೇರಳ, ಕೊಳ್ಳೇಗಾಲ, ಪೂಜಾ ಶಕ್ತಿಯಿಂದ ನಮ್ಮ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ, ನಿಮ್ಮ ಯಾವುದೇ ಗುಪ್ತ ಕಠಿಣ, ಸಮಸ್ಯೆಗಳಿಗೆ 600 ವರ್ಷಗಳ ತಾಳೆಗರಿ ವಿದ್ಯೆಯಿಂದ 100% ಪರಿಹಾರ
ಸೂಚನೆ: ಸರಿಯಾದ ವಿಳಾಸ ತಿಳಿದುಕೊಂಡು ಬನ್ನಿ: ಅಶೋಕ ರಸ್ತೆ, ಈಸ್ಟ್ ಕ್ರಾಸ್ 36, ಮೈಸೂರು

AFFIDAVIT

I, Meghna. E. alias Meghna Rao, residing at #MIG-4, 2nd Main, 'E' and 'F' Block, Ramakrishnanagar, Mysuru-570 022, after my marriage with Akshay Srikar, I am identified and known as Meghna Akshay. That my marriage with Akshay Srikar is dissolved on 28-02-2023 by the Family Court at Mysuru by granting decree of divorce on mutual consent in M.C.No. 41/2023, as such I shall be known and identified as Meghna Rao, herein afterwasrds. I have signed the affidavit in front of Notary on 28.3.2023 in Mysore.
Sd/- Meghna Rao

SITE FOR SALE

30x40, North face, 40 ft road, Op. Park, KSRTC Layout, J.P. Nagara, Mysore.
Pragathi Properties
Mob: 99001 46468

30x40 House for Rent

East face Vaastu built, two wardrobe rooms, granite kitchen, pooja room, showcase, solar and camode, teakwood doors.
Rent: Rs. 13,000/- PM.
No. 7, MIG, Hebbal, Laxmikanthanagar, Mysore. No brokers.
Mob: 6361760880

Document Lost

I, M.K. Venu Kishor, No. 19/24, Ashokapura, Madikeri, Kodagu, have lost MUDA original allotment letter, khatha, tax paid receipt of Site No. 1752, Lal Bahaddur Shastri Nagar, Mysore & Pan Card lost in between Ramaswamy Circle and MUDA Office. Finders please contact:
Mob: 9482331469

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್

17–4–23: ಜಾರ್ಖಂಡ್, ಬಾಬಾ ಬೈದ್ಯನಾಥ್, ಜ್ಯೋತಿರ್ಲಿಂಗ, ಕೊಲ್ಕತ್ತಾ, ಗಂಗಾಸಾಗರ, ಕಪಿಲ ಮುನಿ ದೇವಸ್ಥಾನ, ಭುವನೇಶ್ವರ ಪುರಿ ಜಗನ್ನಾಥ್. 26–4–2023: ಜಮ್ಮು, ಕಾಶ್ಮೀರ್, ವೈಷ್ಣೋದೇವಿ, ಪಹಲ್‌ಗಾಮ್, ಸೋನಮಾರ್ಗ್, ಗುಲ್‌ಮಾರ್ಗ್. 8–6–23: ಚಾರ್‌ಧಾಮ್ ಯಾತ್ರೆ, ಕೇದಾರನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ. 12–4–23: ಶಿರಡಿ, 3 ಜ್ಯೋತಿರ್ಲಿಂಗ, ಭೀಮಾಶಂಕರ, ಗೃಷ್ಣೇಶ್ವರ, ತ್ರಯಂಬಕೇಶ್ವರ್.
9591017782, 9964527782

ಮನೆ ಭೋಗ್ಯಕ್ಕೆ ಇದೆ

2BHK, Ist ಫ್ಲೋರ್–ಉತ್ತರ ದಿಕ್ಕು 24 ಗಂಟೆ ನೀರಿನ ಸೌಲಭ್ಯ, ಸೋಲಾರ್ ಗೀಸರ್ ಸೌಲಭ್ಯ ಇರುವ ಮನೆ ನಂ. 2458/K8, 12ನೇ ಕ್ರಾಸ್, ಬಸವೇಶ್ವರ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು
9945615679
9916019102

WANTED

1. Receptionist (ಮಹಿಳೆ)
2. Nursing Staff (ಮಹಿಳೆ)
3. Driver (ಚಾಲಕ)
4. ಮಾರ್ಕೆಟಿಂಗ್ ಹುಡುಗರು
9035159747

ನಿವೇಶನ ಮಾರಾಟಕ್ಕಿದೆ

ನ್ಯಾಯಾಂಗ ಬಡಾವಣೆ ಪೂರ್ವದಿಕ್ಕು, 20x32, Site No. 529, ಕ್ರೈಸ್ತ ಪಬ್ಲಿಕ್ ಸ್ಕೂಲ್ ಹಿಂಭಾಗ
Mob: 9972479583

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

WANTED

1) HELPER BOYS
SSLC, PUC, ITI Pass or Fail
2) ACCOUNTANT
3) FRONT OFFICE ASSISTANT
4) GRAPHIC DESIGNER
(Coreldraw, Photoshop, Indesign)
contact
9448067939 / 9739569260

SITE FOR SALE

East facing 40 feet Road 40x60 site Vijayanagar 4th Stage, 2nd Phase, near Marimallappa's School.
Mob: 9845809369

LKG - UKG

Montessori Teachers
WANTED
Mandi Mohalla, Mysore
9739548823
9739606258

ಇಂದೇ ಸಂಪರ್ಕಿಸಿ

ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 128 ವಿವಿಧ ಪೋಸ್ಟ್‌ಗಳಿಗೆ SSLC, PUC & Degree ಆಗಿರುವ ಉತ್ಸಾಯಿ ಯುವಕ / ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿ ಊಟದೊಂದಿಗೆ 14000 - 30000 ESI+PF ಸೌಲಭ್ಯವಿದೆ
9008603466
9980346131

ಬೇಕಾಗಿದ್ದಾರೆ

ಮೈಸೂರು ನಗರದ ನೀಲಾಂಜನ ಮಹೇಶ ಪ್ರಸಾದ ಸಸ್ಯಾಹಾರಿ ಹೋಟೆಲ್ ಕೆಲಸಕ್ಕೆ ಅನುಭವಿ ಸಪ್ಲೈಯರ್‌ಗಳು, ಕ್ಯಾಪ್ಟನ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಬೇಕಾದ ಮೊಬೈಲ್ ನಂಬರ್:
Mob: 9916636767

WANTED

B.S.G. Properties
* TELECALLERS (F)
5 Members
FIXED SALARY.
9008639936, 8317347642

SITE FOR SALE

East facing 30x50 site for sale at Adhiswar MUDA Layout, Vijayanagar 4th Stage, 2nd Phase.
Mob: 9620451565

Change of Name

I, Naagendra M.P., S/o Puttalaiah, aged 49 years, residing at No. 174, Telecom Layout, Bogadi 2nd Stage (North), Mysuru-570 026, shall henceforth be known as Nanthesh. P, vide affidavit dt. 15-02-2023 sworn before Notary K.M. Krishna, Mysore.
Sd/- Nanthesh. P

SITE FOR SALE

30x40, South facing plot attached to Marimallappa School, Vijayanagar 4th Stage, 2nd Phase.
Mob: 9686779810

ಬೇಕಾಗಿದ್ದಾರೆ

18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತಿಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ /ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು. ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು.
9035113222

WANTED

LADY YOGA TEACHER
Classes @
1) Ramakrishna Nagara
2) Srirampura
9035506790
9008727172

ದಾಖಲೆ ಕಳೆದಿದೆ

ಇಂದ್ರ / ನರಸೇಗೌಡ, ಹಂಪಾಪುರ, ಹೊಸ ಅಗ್ರಹಾರ ಹೋಬಳಿ, ಕೆ.ಆರ್. ನಗರ ತಾಲ್ಲೂಕು, ಮೈಸೂರಿನಲ್ಲಿ ವಾಸ ವಾಗಿದ್ದು, ರಿಜಿಸ್ಟರ್ಡ್ ಸೇಲ್ ಡೀಡ್ ನಂ. MIR-1-0199716-17 & MIR-1-00513/16-17 ಕಳೆದಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
Mob: 9741453209

Change of Name

Santhoshi, residing at 154/126 A, 3rd Ward, Karnataka State (India), T.B. Extension, Gundlupet, Chamarajanagar district, have changed my name from K. Santhoshi Kumari to Santhoshi on my own free will, sworn in before Notary K. Jyothi, Mysore vide affidavit dated 21-3-2023.
Sd/- Santhoshi

MONTESSORI TEACHERS REQUIRED

No. Of Posts - 5 Nos.
Fluency in English Mandatory, Attractive Salary
Sai Gurukula, JP Nagar
9686862606

ಸೈಟು ಮಾರಾಟಕ್ಕಿದೆ

30x40
ಟ್ರಾಂಕ್ವಿಲ್ ಬಡಾವಣೆ ದಟ್ಟಗಳ್ಳಿ ರಿಂಗ್ ರೋಡ್ ಹತ್ತಿರ
9741076619

HOUSE FOR SALE

35X45 Preeti Layout II Stage, Sreerampura Mysore, G/F 2 Shop+ 2BHK, F/F 3BHK, S/F Room+Attached Bath
9342183724

WANTED

Telecallers
Male No. 10, Female No.10
Hindi, Telugu, Language
Required Salary 15K
Data Entry Operator No.12
Meghana H R
7829803426

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್–ಸಂಬಳ (12,000) 12 ಗಂಟೆ, ಸ್ಥಳ: ಬೋಗಾದಿ ಮರಟಿಕ್ಯಾತನಹಳ್ಳಿ, ಹೆಬ್ಬಾಳ್, ಯಾದವಗಿರಿ
ವಯಸ್ಸು – 25 ರಿಂದ 55 ವರ್ಷ, ವಿದ್ಯಾರ್ಹತೆ ಅವಶ್ಯಕತೆ ಇಲ್ಲ
9741616826

WANTED

Tellecallars Girls
Freshers / Experienced
PUC / SSLC
Qualifued with attractive Incentives and Salary
9686571802
Place : Kuvempunagar

ಬೇಕಾಗಿದ್ದಾರೆ

ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 12000 ರಿಂದ 18000 (ESI, PF ಸೌಲಭ್ಯವಿರುತ್ತದೆ.)
8050699742, 7760043596

ಬೇಕಾಗಿದ್ದಾರೆ

ಮಂಡ್ಯ, ಹೋಟೆಲ್‌ನಲ್ಲಿ ಕೆಲಸ ಮಾಡುವವರು, ಮ್ಯಾನೇಜರ್ ಹಾಗೂ ಸೂಪರ್‌ವೈಸರ್, ಕ್ಯಾಪ್ಟನ್, ಕ್ಯಾಶಿಯರ್‌ಗೆ ಅನುಭವ ಉಳ್ಳವರಿಗೆ ಆದ್ಯತೆ. ಮಹಿಳೆಯರು / ಪುರುಷರು ಸಂಪರ್ಕಿಸಿ: ಉತ್ತಮ ಸಂಬಳ ದೊರೆಯುತ್ತದೆ
9036709090

WANTED SHOP FOR RENT

For a reputed Chicken Shop at Hootagalli & Vijayanagar 4th Stage)
7955669184
9060596169

HOUSE FOR RENT

2BHK Vijayanagar, 3rd Stage, 2BHK Bogadi Road
HOUSE FOR SALE
2BHK SBM Layout, Bogadi
9845074836

ಬೇಕಾಗಿದ್ದಾರೆ

ಮಹಿಳಾ ಟೆಲಿ ಕಾಲರ್ಸ್ Full Time, Part time, Work from Home available
ವಿದ್ಯಾರ್ಹತೆ : ಪಿಯುಸಿ, ಯಾವುದೇ ಪದವಿ
ಸಂಬಳ: 8,000 – 20,000
9591649247

WANTED IMMEDIATELY

Delivery Boys 2 No. and Female 1No. to Vegetables Shop
7760199462

SITE FOR SALE

1. ಟಿ.ನರಸೀಪುರ ಮೇನ್ ರಸ್ತೆ, ವರಕೋಡ್ ಗೇಟ್ ಹತ್ತಿರ, 30x40 Sqft, Rate 1550/- Negotiable
2. ಇಲವಾಲ ಕೆ.ಆರ್.ಎಸ್ ನಿಸರ್ಗ ಬಡಾವಣೆ, 20x30 Sqft, Rate1375/- Negotiable
7676077678

HOUSE FOR SALE

Nimishamba Nagar, Near Vivekananda Circle, Mysore 25x30, 3 Floor House
9880627177
9845804674

WANTED

A Reputed Lodge in the Heart of the City is looking for the Position of Receptionist (Male Only) Should have Prior Experience Computer Knowledge, Age-25 to 40
9663747452, 9739742344
ರೂಂ ಬಾಯ್ ಕೆಲಸಕ್ಕೆ ವಯಸ್ಸಿನ ವಯೋಮಿತಿ (20-35) ಮೊ: 9663991888

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಸೂರು ಮಿತ್ರ

ಚುನಾವಣೆಗೆ ಮಂಡ್ಯ ಜಿಲ್ಲಾಡಳಿತ ಸಜ್ಜು

● ಏಳು ಮಂದಿ ರೌಡಿಶೀಟರ್ ಗಡಿಪಾರು ● 34 ಚೆಕ್‌ಪೋಸ್ಟ್ ನಿರ್ಮಾಣ, 45.32 ಲಕ್ಷ ರೂ. ವಶ ● ಸಚಿವರು, ನಿಗಮ ಮಂಡಳಿ ಅಧ್ಯಕ್ಷರ ಸರ್ಕಾರಿ ವಾಹನ ವಶ



ಮಂಡ್ಯ, ಮಾ.29– ಸಾರ್ವತ್ರಿಕ ಚುನಾವಣೆಯಲ್ಲಿ ಶಾಂತಿ, ಸುವ್ಯವಸ್ಥೆಗೆ ಧಕ್ಕೆಯಾಗಬಾರದೆಂಬ ಕಾರಣಕ್ಕೆ ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ಏಳು ಮಂದಿ ಕುಖ್ಯಾತ ರೌಡಿಶೀಟರ್‌ಗಳನ್ನು ಗಡಿಪಾರು ಮಾಡಿದ್ದು, ಮತ್ತಷ್ಟು ರೌಡಿಶೀಟರ್‌ಗಳ ಪಟ್ಟಿಯನ್ನು ತಯಾರಿ ಮಾಡುತ್ತಿದ್ದು, ಅಶಾಂತಿಯುಂಟು ಮಾಡುವ ಸಂಭವವಿದ್ದರೆ ಅವರನ್ನು ಸಹ ಜಿಲ್ಲೆಯಿಂದ ಗಡಿಪಾರು ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ ತಿಳಿಸಿದರು.

ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಬುಧವಾರ ಸಂಜೆ ಡಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಅಶಾಂತಿ ಸೃಷ್ಟಿಸಿ, ಇಲ್ಲಸಲ್ಲದ ಗಲಭೆ ಸೃಷ್ಟಿಸುವುದನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಮುಂದಾಗಿದ್ದು, ಈಗಾಗಲೇ ಏಳು ಮಂದಿ ಕುಖ್ಯಾತ ರೌಡಿಗಳನ್ನು ಗಡಿಪಾರು ಮಾಡಿದ್ದೇವೆ. ಜೊತೆಗೆ ಮಾರಕಾಸ್ತ್ರಗಳು ಹಾಗೂ ಗನ್‌ಗಳನ್ನು ಚುನಾವಣೆ ಸಮಯವಾದ್ದರಿಂದ ವಶಕ್ಕೆ ಪಡೆಯುತ್ತಿದ್ದೇವೆ. ಈಗಾಗಲೇ ಮಂಡ್ಯ ಜಿಲ್ಲೆಯಲ್ಲಿ 690 ವೆಪನ್ಸ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ಈಗಾಗಲೇ ಜಿಲ್ಲಾದ್ಯಂತ 34 ಚೆಕ್‌ಪೋಸ್ಟ್‌ಗಳನ್ನು ನಿರ್ಮಾಣ ಮಾಡಿದ್ದು, ಈವರೆಗೆ 45,32,040 ರೂ.ಹಣವನ್ನು ವಶಕ್ಕೆ ಪಡೆಯಲಾಗಿದೆ. ಜೊತೆಗೆ 1090 ಲೀಟರ್ ಮದ್ಯ ವಶಪಡಿಸಿಕೊಂಡಿದ್ದು, ಇದು 3,85,392 ರೂ. ಬೆಲೆ ಬಾಳಲಿದ್ದು, 3.5 ಕೆಜಿ ಗಾಂಜಾ ಸಹ ವಶಪಡಿಸಿಕೊಂಡಿದ್ದು, 3,5290 ರೂ. ಬೆಲೆ ಬಾಳಲಿದೆ. ಜೊತೆಗೆ ಈವರೆಗೆ 4979 ಉಡುಗೊರೆ ವಸ್ತುಗಳನ್ನು ವಶಕ್ಕೆ ಪಡೆದಿದ್ದು ಇದರ ಬೆಲೆ 1 ಕೋಟಿ ಐದು ಲಕ್ಷದಷ್ಟು ಬೆಲೆ ಬಾಳಲಿದೆ ಎಂದು ವಿವರಿಸಿದರು.

ಕಟ್ಟುನಿಟ್ಟಿನಿಂದ ಚುನಾವಣೆ ನಡೆಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದು, ಈಗಾಗಲೇ ಜಿಲ್ಲೆಯಲ್ಲಿ 15,15,894 ಮತದಾರರಿದ್ದು, ಈ ಪೈಕಿ 7,50,935 ಪುರುಷರು ಹಾಗೂ 7,64,823 ಮಹಿಳಾ ಮತದಾರರಿದ್ದು, 136 ಮಂದಿ ಇತರೆ ಮತದಾರರಿದ್ದಾರೆ. ಏಪ್ರಿಲ್ 11ರ ಬಳಿಕ ಈ ಮತದಾರರ ಪಟ್ಟಿ ಮತ್ತಷ್ಟು ಹೆಚ್ಚಾಗಲಿದೆ ಎಂದರು.

ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಮಂಡ್ಯ ಜಿಲ್ಲೆಯಲ್ಲಿ ಅಧಿಕಾರಿಗಳು ವರ್ಗ ಸಚಿವರು, ನಿಗಮ ಮಂಡಳಿ ಅಧ್ಯಕ್ಷರು, ಸಹಕಾರಿ ಸಂಸ್ಥೆಯಲ್ಲಿ ಅಧಿಕಾರ ಹೊಂದಿರುವ ರಾಜಕಾರಣಿಗಳ ವಾಹನಗಳನ್ನು ಹಿಂಪಡೆದಿದ್ದಾರೆ. ಜೊತೆಗೆ ರಾಜಕೀಯ ನಾಯಕರ ಫ್ಲೆಕ್ಸ್ ಹಾಗೂ ಸರ್ಕಾರದ ಫ್ಲೆಕ್ಸ್‌ಗಳನ್ನು ಈಗಾಗಲೇ ಸ್ಥಳೀಯ ಸಂಸ್ಥೆ ಹಾಗೂ ಪಂಚಾಯ್ತಿ ಮಟ್ಟದಲ್ಲಿ ಮುಂದಿನ 48 ಗಂಟೆಗಳಲ್ಲಿ ತೆರವು ಮಾಡಲಾಗುತ್ತಿದೆ. ಜೊತೆಗೆ ಪ್ರವಾಸಿ ಮಂದಿರ ಹಾಗೂ ಸರ್ಕ್ಯೂಟ್ ಹೌಸ್‌ನಲ್ಲಿ ಯಾವುದೇ ರಾಜಕೀಯ ನಾಯಕರಿಗೆ ಸಭೆ, ಸಮಾರಂಭಕ್ಕೆ ಅವಕಾಶವಿರುವುದಿಲ್ಲ ಎಂದು ಹೇಳಿದರು.

ಇನ್ನು ಇದೇ ಶನಿವಾರ ಐತಿಹಾಸಿಕ ಮೇಲುಕೋಟೆ ವೈರಮುಡಿ ಉತ್ಸವ ನಡೆಯುವುದರಿಂದ ಯಾವುದೇ ರಾಜಕೀಯ ನಾಯಕರಿಗೆ ನಿರ್ಬಂಧ ಇರುವುದಿಲ್ಲ. ಆದರೆ ಶಿಷ್ಟಾಚಾರ ಪಾಲಿಸುವ ಪದ್ಧತಿ ಇಲ್ಲದಿರುವುದರಿಂದ ಸಾಮಾನ್ಯರಂತೆ ಬಂದು ಉತ್ಸವದಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್ಪಿ ಯತೀಶ್, ಜಿ.ಪಂ. ಸಿಇಓ ಶಾಂತಾ ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ನಾಗರಾಜು, ವಾರ್ತಾಧಿಕಾರಿ ನಿರ್ಮಲಾ ಉಪಸ್ಥಿತರಿದ್ದರು.

ಹೆಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ

ಶಾಸಕ ಸಿ.ಎಸ್. ಪುಟ್ಟರಾಜು ಭವಿಷ್ಯ



ಚಿನಕುರಳಿ, ಮಾ.29– 2023ಕ್ಕೆ ರಾಜ್ಯದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದು ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ, ಮತ್ತಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತೊಮ್ಮೆ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಲು ಕ್ಷೇತ್ರದ ಜನತೆ ಸಹಕಾರ ನೀಡಬೇಕೆಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ತಾಲೂಕಿನ ಡಿಂಕಾ ಗ್ರಾಮದಲ್ಲಿ ನಡೆದ ಚಿನಕುರಳಿ ಜಿಪಂ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಶಾಸಕ, ಸಚಿವನಾಗಿ ಕ್ಷೇತ್ರದಲ್ಲಿ ಹಲವಾರು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇನೆ. ಇನ್ನೂ ಹಲವರು ಯೋಜನೆಗಳು ಪೂರ್ಣಗೊಳ್ಳಬೇಕಾಗಿದೆ. ಜತೆಗೆ ಕ್ಷೇತ್ರಕ್ಕೆ ಮತ್ತಷ್ಟು ಯೋಜನೆಗಳನ್ನು ಮಂಜೂರು ಮಾಡಿಸಿ ಕ್ಷೇತ್ರದ ಜನರು ನೆಮ್ಮದಿಯಿಂದ ಜೀವನ ನಡೆಸುವಂತೆ ಮಾಡಬೇಕಾಗಿದೆ, ಅದಕ್ಕಾಗಿ ನಿಮ್ಮೆಲ್ಲರ ಮನೆ ಮಗ ಸಿ.ಎಸ್.ಪುಟ್ಟರಾಜು ಅವರು ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾಗಬೇಕಿದೆ. ಅದಕ್ಕಾಗಿ ಕ್ಷೇತ್ರದ ಮಹಾಜನತೆ ಸಹಕಾರ ಮಾಡಬೇಕು ಎಂದು ಮನವಿ ಮಾಡಿದರು.

ಡಿಂಕದಮ್ಮನ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಸಂದರ್ಭದಲ್ಲಿ ಚುನಾವಣೆಯ ದಿನಾಂಕ ಘೋಷಣೆಯಾಗಿದ್ದು ಶುಭ ಸೂಚನೆಯಾಗಿದೆ. ಸಚಿವನಾಗಿ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಮಲ್ಲಿಗೆರೆ ಏತನೀರಾವರಿ ಯೋಜನೆಗಳ ಮೂಲಕ ಈ ಭಾಗದ ಎಲ್ಲಾ ಕೆರೆಗಳನ್ನು ತುಂಬಿಸಲಾಗಿದೆ. ಬೇಬಿಬೆಟ್ಟದಲ್ಲಿ 2 ಕೋಟಿ ವೆಚ್ಚದಲ್ಲಿ ಶ್ರೀಮಹದೇಶ್ವರ ಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಲಾಗಿದೆ. ಜತೆಗೆ ಡಿಂಕಾ ಗ್ರಾಮದ ಶಕ್ತಿ ದೇವತೆ ಡಿಂಕದಮ್ಮ ದೇವಸ್ಥಾನ ನಿರ್ಮಾಣಕ್ಕೂ 2.50 ಕೋಟಿ ಅನುದಾನ ಮಂಜೂರು ಮಾಡಿಸಲಾಗಿದೆ ಎಂದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ. ಯಶವಂತ್‌ಕುಮಾರ್ ಮಾತನಾಡಿ, ಸಿ.ಎಸ್.ಪುಟ್ಟರಾಜು ಅವರು ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾಗಿ ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿದ್ದಾರೆ. ನೀರಾವರಿ, ವಿದ್ಯುತ್, ಶಿಕ್ಷಣ ಕ್ಷೇತ್ರದಲ್ಲಿ ಅಭೂತಪೂರ್ವ ಕೆಲಸ ಮಾಡಿದ್ದಾರೆ. ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಇದಕ್ಕೂ ಮುನ್ನ ಶಾಸಕ ಸಿ.ಎಸ್. ಪುಟ್ಟರಾಜು ಅವರನ್ನು ಡಿಂಕ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು, ಜೆಡಿಎಸ್ ಮುಖಂಡರು ಪೂರ್ಣಕುಂಭ, ವಿವಿಧ ಕಲಾತಂಡಗಳ ಮೂಲಕ ಅದ್ದೂರಿಯಾಗಿ ಎತ್ತಿನಗಾಡಿಯಲ್ಲಿ ಮೆರವಣಿಗೆ ನಡೆಸಿದರು. ಬೃಹತ್ ಸೇವಿನ ಹಾರ, ಗುಲಾಬಿ ಹೂವಿನ ಹಾರಗಳನ್ನು ಹಾಕಿ ಪುಷ್ಪಾರ್ಚನೆ ಮಾಡಿ ಅದ್ದೂರಿಯಾಗಿ ಸ್ವಾಗತಿಸಿದರು. ಆದಿಶಕ್ತಿ ಡಿಂಕದಮ್ಮ ದೇವಿಗೆ ಪೂಜೆ ಸಲ್ಲಿಸಿದರು. ವೇದಿಕೆ ಸಮಾರಂಭದಲ್ಲಿ ಬನ್ನಂಗಾಡಿ ಗ್ರಾಮದ ಕಾಂಗ್ರೆಸ್ ಮುಖಂಡ ಮಹೇಂದ್ರ ಸೇರಿದಂತೆ ರೈತಸಂಘ, ಕಾಂಗ್ರೆಸ್ ಪಕ್ಷ ತೊರೆದು ನೂರಾರು ಕಾರ್ಯಕರ್ತರು ಸಿ.ಎಸ್. ಪುಟ್ಟರಾಜು ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ತಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮಾ ವೆಂಕಟೇಶ್, ಗ್ರಾಪಂ ಅಧ್ಯಕ್ಷರಾದ ಭವಾನಿ, ಚಂದ್ರಶೇಖರಯ್ಯ, ಶೃತಿನಾಗೇಶ್, ಮಾಜಿ ಅಧ್ಯಕ್ಷ ಚಂದ್ರೇಗೌಡ, ಮುಖಂಡರಾದ ಬನ್ನಂಗಾಡಿ ಶ್ರೀನಿವಾಸ್, ಬಿ.ಆರ್.ಪ್ರಸನ್ನ, ಕೆ.ಎಸ್.ಜಯರಾಮು, ಶೀಲಾಜಗದೀಶ್, ಪುಟ್ಟರಾಜು, ಜಗದೀಶ್, ಸೋಮಶೇಖರ್, ಚಂದ್ರೇಗೌಡ, ಎಂ.ಎಸ್. ಜಗದೀಶ್, ಕಲಿಗಣೇಶ್, ರುದ್ರಪ್ಪ ಆರ್.ಎಂ.ಪುಟ್ಟರಾಜು, ಶಿಂಢಭೋಗನಹಳ್ಳಿ ನಾಗಣ್ಣ, ಬಿಂಡಹಳ್ಳಿ ರಾಜೇಶ್ ಸೇರಿದಂತೆ ಹಲವರು ಹಾಜರಿದ್ದರು.

ಕುಚೇಲೇಗೌಡ ನಿಧನ



ಕೆ.ಆರ್.ಪೇಟೆ, ಮಾ.29– ತಾಲೂಕಿನ ಹಿರಿಯ ವಕೀಲರಾದ ಎಂ.ಎನ್. ಕುಚೇಲೇಗೌಡ (52) ಅವರು ಮಂಗಳವಾರ ಮಧ್ಯರಾತ್ರಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ತಾಲೂಕಿನಲ್ಲಿ ಕಳೆದ 20 ವರ್ಷಗಳಿಂದ ವಕೀಲರಾಗಿ ಸೇವೆ ಸಲ್ಲಿಸುವ ಮೂಲಕ ಉತ್ತಮ ಹೆಸರು ಗಳಿಸಿದ್ದರು. ಮೃತರ ಅಂತ್ಯಕ್ರಿಯೆಯು ಹುಟ್ಟೂರು ಮಾಂಬಹಳ್ಳಿ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ನಡೆಯಿತು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ನಿಧನಕ್ಕೆ ತಾಲೂಕು ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಹಿರಿಯ ವಕೀಲರಾದ ಬಿ.ಎಲ್.ದೇವರಾಜು, ವಿಜಯ್ ಕುಮಾರ್, ಗಣೇಶ್, ಬಿ.ರಾಮೇಗೌಡ ಸೇರಿದಂತೆ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮಾದಾಪುರ ಗ್ರಾಪಂ ಅಧ್ಯಕ್ಷೆಯಾಗಿ ಕನ್ಯಾಕುಮಾರಿ ಆಯ್ಕೆ



ಕಿಕ್ಕೇರಿ, ಮಾ.29– ಹೋಬಳಿಯ ಮಾದಾಪುರ ಗ್ರಾಮದಲ್ಲಿ ನಡೆದ ಗ್ರಾಪಂ. ಅಧ್ಯಕ್ಷರ ಚುನಾವಣೆಯಲ್ಲಿ ಕನ್ಯಾಕುಮಾರಿ ಲೋಕೇಶ್ ಅವಿರೋಧವಾಗಿ ಆಯ್ಕೆಯಾದರು.

11 ಸದಸ್ಯರ ಬಲಾಬಲ ಇರುವ ಗ್ರಾಪಂನಲ್ಲಿ ಈ ಹಿಂದೆ ಅಧ್ಯಕ್ಷರಾಗಿದ್ದ ಶೋಭಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅಧ್ಯಕ್ಷರ ಚುನಾವಣೆಯಲ್ಲಿ ಕನ್ಯಾಕುಮಾರಿ ಲೋಕೇಶ್ ಮಾತ್ರ ತಮ್ಮ ಉಮೇದು ವಾರಿಕೆ ಸಲ್ಲಿಸಿದ ಕಾರಣ ಅವಿರೋಧ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ತಾಪಂ ಕಾರ್ಯನಿರ್ವಹಣಾಧಿಕಾರಿ ಸತೀಶ್, ಸಹಚುನಾವಣಾಧಿಕಾರಿ ಸತೀಶ್‌ಬಾಬು, ಪಿಡಿಒ ಪ್ರವೀಣ ಕುಮಾರ್ ಕರ್ತವ್ಯ ನಿರ್ವಹಿಸಿದರು. ನೂತನ ಅಧ್ಯಕ್ಷರಿಗೆ ರಾಜ್ಯ ಮಾರಾಟ ಮಹಾಮಂಡಳಿ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ಸದಸ್ಯರಾದ ಯೋಗೇಶ್, ಕುಮಾರ್, ಕೃಷ್ಣೇಗೌಡ, ಅರುಣ್, ಜಯಲಕ್ಷ್ಮೀ, ದಿವ್ಯ ಮತ್ತಿತರರು ಸಿಹಿ ತಿನಿಸಿ, ಪುಷ್ಪಮಾಲೆ ಅರ್ಪಿಸಿ ಅಭಿನಂದಿಸಿದರು.

ರೈತನಿಂದ ಲಂಚ; ವಿಎ ಲೋಕಾಯುಕ್ತ ಬಲೆಗೆ

ಮಂಡ್ಯ, ಮಾ.29– ರೈತರೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದ ವೇಳೆ ನಗರದ ಗುತ್ತಲು ಬಡಾವಣೆಯ ವಿಎ ರೂಪ.ಎಂ.ಎಸ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಗುತ್ತಲು ಗ್ರಾಮದ ರೈತ ಆತ್ಮಾನಂದ ಎಂಬುವವರಿಂದ ಜಮೀನು ಒಟ್ಟುಗೂಡಿಸಿ, ಪೋಡಿ ಮಾಡಿ ಆರ್.ಟಿ.ಸಿ ಸಿದ್ಧಪಡಿಸಲು 15 ಸಾವಿರ ರೂಪಾಯಿಗೆ ಲಂಚ ಬೇಡಿಕೆ ಇಟ್ಟಿದ್ದರು ಎಂದು ದೂರಲಾಗಿದೆ. ಬುಧವಾರ ಬೆಳಗ್ಗೆ ಮಂಡ್ಯ ನಗರದಲ್ಲಿ ರೈತನಿಂದ 5 ಸಾವಿರ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಇನ್ಸ್‌ಪೆಕ್ಟರ್ ಬ್ಯಾಟರಾಯಗೌಡ ನೇತೃತ್ವದ ತಂಡ ದಾಳಿ ನಡೆಸಿ ಹಣ ಸಹಿತ ಅಧಿಕಾರಿಯನ್ನು ಬಂಧಿಸಲಾಗಿದೆ. ಲೋಕಾಯುಕ್ತ ಎಸ್ಪಿ ಪುಟ್ಟಮಾದಯ್ಯ, ಡಿವೈಎಸ್ಪಿ ಸುನೀಲ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಸಿಬ್ಬಂದಿಗಳಾದ ಶಂಕರ್, ಭರತ್, ನಂದಿನಿ, ಹೇಮಾವತಿ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಹಲಗೂರು, ಮಾ.29– ಸಮೀಪದ ಮುತ್ತತ್ತಿ ರಸ್ತೆಯಲ್ಲಿರುವ ಬೈಪಾಸ್ ಬಳಿ ಇನ್ನೋವಾ ಕಾರು ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಬುಧವಾರ ಜರುಗಿದೆ.

ಘಟನೆಯಲ್ಲಿ ಶಿವರಾಜು(40) ಮೃತಪಟ್ಟ ದುರ್ದೈವಿಯಾಗಿದ್ದು, ಇವರು ಹಲಗೂರು ಗ್ರಾಮ ಪಂಚಾಯತಿ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಬೈಕ್‌ನಲ್ಲಿ ಕೆಲಸ ಮುಗಿಸಿ ಮನೆಗೆ ಹೋಗುವಾಗ ಮುತ್ತತ್ತಿ ಕಡೆಯಿಂದ ಬಂದ ಇನ್ನೋವಾ ಕಾರು ಡಿಕ್ಕಿ ಹೊಡೆದ ಪರಿಣಾಮ ತಲೆಗೆ ಗಂಭೀರವಾಗಿ ಗಾಯಗೊಂಡು ಮಳವಳ್ಳಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಸಾವನ್ನಪ್ಪಿದ್ದಾರೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ: ಬಾಲಕಿ ಸಾವು, ಮೂವರಿಗೆ ಗಾಯ

ಮದ್ದೂರು, ಮಾ.29– ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬಾಲಕಿ ಮೃತಪಟ್ಟು, ಮೂರು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ರುದ್ರಾಕ್ಷಿಪುರ ಗ್ರಾಮದ ಬಳಿ ಮಂಗಳವಾರ ರಾತ್ರಿ ಜರುಗಿದೆ.

ತಾಲೂಕಿನ ಸಿಎ ಕೆರೆ ಹೋಬಳಿಯ ಅಂಬರಹಳ್ಳಿ ಗ್ರಾಮದ ನಂದೀಶ್ ಅವರ ಪುತ್ರಿ ಎ.ಎನ್.ವೀಕ್ಷಾ (5) ಮೃತಪಟ್ಟ ಬಾಲಕಿಯಾಗಿದ್ದು ಮೃತಳ ಅಜ್ಜ ರಮೇಶ್, ತಾಯಿ ಸೌಂದರ್ಯ, ಸಹೋದರ ವಿನೀಶ್(3) ಗಾಯಗೊಂಡಿದ್ದಾರೆ. ಮೃತಳ ಅಜ್ಜ ರಮೇಶ್ ತನ್ನ ಪುತ್ರಿ ಸೌಂದರ್ಯ ಅವರೊಂದಿಗೆ ತನ್ನ ಇಬ್ಬರು ಮೊಮ್ಮಕ್ಕಳನ್ನು ಅಂಬರಹಳ್ಳಿ ಗ್ರಾಮದಿಂದ ಹುಣಸೆಮರದದೊಡ್ಡಿ ಗ್ರಾಮಕ್ಕೆ ತಮ್ಮ ದ್ವಿಚಕ್ರವಾಹನದಲ್ಲಿ ಕರೆತರುತ್ತಿದ್ದ ವೇಳೆ ಹಿಂಬದಿಯಿಂದ ಬಂದ ಕಾರು ಡಿಕ್ಕಿಯೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ. ಅಪಘಾತದ ವೇಳೆ ತೀವ್ರವಾಗಿ ಗಾಯಗೊಂಡ ಎ.ಎನ್. ವೀಕ್ಷಾ ಸ್ಥಳದಲ್ಲೇ ಮೃತಪಟ್ಟಿದ್ದು, ಇತರೆ ಮೂವರನ್ನು ತಾಲೂಕು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು ಘಟನೆ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಫಲಿತಾಂಶ ಮೇ 13

ಮೇ 10 ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, 13ರಂದು ಫಲಿತಾಂಶ ಪ್ರಕಟಗೊಳ್ಳಲಿದೆ. ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ 5,24,11,557 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಇದರಲ್ಲಿ 2,62,42,561 ಕೋಟಿ ಪುರುಷರು, 2,59,26,319 ಕೋಟಿ ಮಹಿಳಾ ಮತದಾರರಿದ್ದಾರೆ. ಮೊದಲ ಬಾರಿಗೆ 9,17,241 ಹೊಸ ಮತದಾರರಿದ್ದು, ಇದರಲ್ಲಿ 18 ವರ್ಷ ತುಂಬುವ ಹೊಸ ಮತದಾರರ ಸಂಖ್ಯೆ 1.25 ಲಕ್ಷ ಇರುತ್ತದೆ. ಇದೇ ಮೊದಲ ಬಾರಿಗೆ 80 ವರ್ಷ ಮೇಲ್ಪಟ್ಟ ಮತದಾರರಿಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಸುಗಮ ಮತದಾನಕ್ಕಾಗಿ ರಾಜ್ಯದಲ್ಲಿ 58,282 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. ನಗರ ಪ್ರದೇಶದಲ್ಲಿ 24,063 ಗ್ರಾಮೀಣ ಭಾಗದಲ್ಲಿ 34,219 ಮತಗಟ್ಟೆಗಳಿರಲಿವೆ. ಒಟ್ಟಾರೆ 12 ಸಾವಿರ ಸೂಕ್ಷ್ಮ ಮತಗಟ್ಟೆಗಳನ್ನಾಗಿ ಗುರುತಿಸಲಾಗಿದೆ. ಚುನಾವಣಾ ಅಕ್ರಮ ತಡೆಗೆ 2400 ವಿಶೇಷ ಸಿಬ್ಬಂದಿ ನಿಯೋಜನೆ ಮಾಡಲಾಗಿದ್ದು, ಇದೇ ಪ್ರಮಾಣದ ವೀಕ್ಷಕರಿರುತ್ತಾರೆ.

ಚುನಾವಣಾ ವಿಚಾರಕ್ಕೆ ಸಂಬಂಧಿಸಿ ಆಯೋಗವು ಕೆವೈಸಿ ಆ್ಯಪ್ ಮತ್ತು ಸಿವಿಜಿಎಲ್ ಆ್ಯಪ್‌ನ್ನು ಅಭಿವೃದ್ಧಿಪಡಿಸಿದೆ ಎಂದು ಆಯುಕ್ತರು ಮಾಹಿತಿ ನೀಡಿದರು. ಕೆವೈಸಿ ಆ್ಯಪ್ ಮೂಲಕ ಚುನಾವಣಾ ಅಭ್ಯರ್ಥಿಯ ವಿವರಗಳ ಜೊತೆಗೆ ಅವರ ಪ್ರಮಾಣಪತ್ರವೂ ಲಭ್ಯವಿರುತ್ತದೆ. ಅಭ್ಯರ್ಥಿಗಳು ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದು, ಕಂಡು ಬಂದಲ್ಲಿ ಸಿವಿಜಿಎಲ್ ಆ್ಯಪ್ ಮೂಲಕ ಮತದಾರರು ದೂರು ಸಲ್ಲಿಸಬಹುದಾಗಿದೆ ಎಂದರು.

16ನೇ ವಿಧಾನಸಭಾ ಚುನಾವಣೆ ಘೋಷಣೆಯಾದ ಬೆನ್ನಲ್ಲೇ ನೀತಿ ಸಂಹಿತೆ ತಕ್ಷಣದಿಂದಲೇ ಜಾರಿಗೆ ಬಂದಿದೆ. ಚುನಾವಣೆ ಫಲಿತಾಂಶ ಘೋಷಣೆಯಾಗಿ ಹೊಸ ಸರ್ಕಾರ ರಚನೆಯಾಗುವವರೆಗೆ ನೀತಿ ಸಂಹಿತೆಗಳು ಜಾರಿಯಲ್ಲಿರುತ್ತದೆ. ನೀತಿ ಸಂಹಿತೆಯ ಅವಧಿಯಲ್ಲಿ ಎಲ್ಲಾ ಪಕ್ಷಗಳು ಚುನಾವಣಾ ಆಯೋಗದ ಪ್ರತಿಯೊಂದು ನಿರ್ಧಾರವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಆಯೋಗದ ಆದೇಶವನ್ನು ಪಾಲಿಸದಿದ್ದರೆ ಸಂಬಂಧಪಟ್ಟ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳುವ ಹಕ್ಕು ಆಯೋಗಕ್ಕೆ ಇರುತ್ತದೆ.

ಮುಖ್ಯಮಂತ್ರಿ ಸೇರಿದಂತೆ ಸಚಿವರು ಸರ್ಕಾರಿ ಸೌಲಭ್ಯವನ್ನು ಬಳಸುವಂತಿಲ್ಲ, ಸರ್ಕಾರಿ ವಾಹನ ಸೇರಿದಂತೆ ಇತರೆ ಸವಲತ್ತುಗಳನ್ನು ಬಳಸುವ ಹಾಗಿಲ್ಲ. ಹೊಸ ಯೋಜನೆಯನ್ನು ಘೋಷಣೆ ಮಾಡುವಂತಿಲ್ಲ, ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗಿಯಾಗುವಂತಿಲ್ಲ. ಆದರೆ ಮುಖ್ಯಮಂತ್ರಿ, ಸಚಿವರು ಹಾಗೂ ಶಾಸಕರಿಗೆ ಎಂದಿನಂತೆ ಭದ್ರತೆ ಇರುತ್ತದೆ, ಎಸ್ಕಾರ್ಟ್ ಸೇರಿದಂತೆ ಎಲ್ಲಾ ರೀತಿಯ ಭದ್ರತೆ ಮುಂದುವರೆಯಲಿದೆ.

ನೀತಿ ಸಂಹಿತೆ ಜಾರಿಯಾದ ನಂತರ ಯಾವುದೇ ಅಭ್ಯರ್ಥಿ ಮತದಾರರನ್ನು ಯಾವುದೇ ರೀತಿಯಲ್ಲಿ ಪ್ರೇರೇಪಿಸಲು ಪ್ರಯತ್ನಿಸುವಂತಿಲ್ಲ. ಯಾವುದೇ ಅಭ್ಯರ್ಥಿಯು ತನ್ನ ಮತದಾರರಿಗೆ ಮದ್ಯ ಅಥವಾ ಯಾವುದೇ ರೀತಿಯ ಲಂಚ ನೀಡುವ ಬಗ್ಗೆ ಮಾತನಾಡುವಂತಿಲ್ಲ. ಅವರು ಯಾವುದೇ ಮತದಾರರನ್ನು ಬೆದರಿಸಲು ಸಹ ಸಾಧ್ಯವಿಲ್ಲ. ಈ ರೀತಿ ಮಾಡಿ ಸಿಕ್ಕಿಬಿದ್ದರೆ ಚುನಾವಣಾ ಆಯೋಗ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂದು ಎಚ್ಚರಿಸಿದರು.

ಯಾವುದೇ ಅಭ್ಯರ್ಥಿಯು ಧಾರ್ಮಿಕ ಅಥವಾ ಜಾತಿ ಭಾವನೆ ಕೆರಳಿಸುವ ಅಥವಾ ಪ್ರಚೋದಿಸುವ ಪ್ರಯತ್ನವೆಂದು ಪರಿಗಣಿಸಬಹುದಾದಂತಹ ಕೆಲಸವನ್ನು ಮಾಡಬಾರದು. ಈ ಸಂದರ್ಭದಲ್ಲಿ ಯಾರ ವಿರುದ್ಧವೂ ಅಶ್ಲೀಲ ಭಾಷೆ ಬಳಸುವಂತಿಲ್ಲ. ಯಾವುದೇ ರಾಜಕೀಯ ಪಕ್ಷ ಅಥವಾ ನಾಯಕರು ತಮ್ಮ ಜಾತಿ ಅಥವಾ ಧರ್ಮದ ಆಧಾರದ ಮೇಲೆ ಮತಕ್ಕಾಗಿ ಮತದಾರರಲ್ಲಿ ಮನವಿ ಮಾಡುವಂತಿಲ್ಲ. ಚುನಾವಣೆಯ ಸಂದರ್ಭದಲ್ಲಿ ಸರ್ಕಾರಿ ವಾಹನ ಅಥವಾ ಸರ್ಕಾರಿ ವಿಮಾನವನ್ನು ಯಾವುದೇ ರೀತಿಯಲ್ಲಿ ಚುನಾವಣಾ ಪ್ರಚಾರಕ್ಕೆ ಬಳಸುವಂತಿಲ್ಲ. ನೀತಿ ಸಂಹಿತೆ ಜಾರಿಯಾದ ನಂತರ ಯಾವುದೇ ರೀತಿಯ ಸರ್ಕಾರಿ ಘೋಷಣೆಗಳು, ಉದ್ಘಾಟನೆ, ಶಂಕುಸ್ಥಾಪನೆ ಅಥವಾ ಭೂಮಿಪೂಜೆ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ.

ಪಕ್ಷಗಳು ಯಾವುದೇ ಸಭೆ ಅಥವಾ ಕೂಟವನ್ನು ನಡೆಸಬೇಕಾದರೆ, ಅದಕ್ಕಾಗಿ ಆ ಪ್ರದೇಶದ ಸ್ಥಳೀಯ ಪೊಲೀಸರಿಗೆ ಅದರ ಬಗ್ಗೆ ತಿಳಿಸಬೇಕಾಗುತ್ತದೆ ಮತ್ತು ಇದಕ್ಕಾಗಿ ಸಂಬಂಧಪಟ್ಟ ಅಧಿಕಾರಿಯ ಅನುಮತಿ ಕೂಡ ಅಗತ್ಯ. ಚುನಾವಣಾ ಆಯೋಗದಿಂದ ಮಾನ್ಯವಾದ ಪಾಸ್ ಹೊಂದಿರುವ ಮತದಾರರು ಮಾತ್ರ ಮತಗಟ್ಟೆ ಪ್ರವೇಶಿಸಬಹುದು. ಚುನಾವಣಾ ಆಯೋಗವು ಪ್ರತಿ ಮತಗಟ್ಟೆಯ ಹೊರಗೆ ನಿರೀಕ್ಷಕರನ್ನು ನಿಯೋಜಿಸುತ್ತದೆ. ಇದರಿಂದ ಯಾರಾದರೂ ನೀತಿ ಸಂಹಿತೆ ಉಲ್ಲಂಘಿಸಿದರೆ ಅವರಿಗೆ ದೂರು ನೀಡಬಹುದು ಎಂದು ಮಾಹಿತಿ ನೀಡಿದರು.

ವೃತ್ತಿ ಜೀವನದಲ್ಲಿ ಕಾಣುವ ಸೋಲಿನಿಂದ ಧೃತಿಗೆಡಬಾರದು

ಉದ್ಯಮಿ ಎಲ್.ಗಣೇಶ್ ಸಲಹೆ



ಮೈಸೂರು, ಮಾ.29(ಜಿಎ)–ವೃತ್ತಿ ಜೀವನದಲ್ಲಿ ಕಾಣುವ ಸೋಲಿನಿಂದ ಧೃತಿಗೆಡಬಾರದು, ಸೋಲೇ ಗೆಲುವಿನ ಮೆಟ್ಟಿಲು ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಮುಂದುವರೆಯಬೇಕು ಎಂದು ರಾಣೆ ಹೋಲ್ಡಿಂಗ್ಸ್ ಆಡಳಿತ ನಿರ್ದೇಶಕ ಎಲ್.ಗಣೇಶ್ ಸಲಹೆ ನೀಡಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಕಾಲೇಜು ಬುಧವಾರ ಆಯೋಜಿಸಿದ್ದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, ಕಾಲೇಜು ಜೀವನ ಹಾಗೂ ವೃತ್ತಿ ಜೀವನವು ವಿಭಿನ್ನತೆಯಿಂದ ಕೂಡಿದೆ. ತಪ್ಪುಗಳ ತಿದ್ದಿಕೊಂಡು ಮುಂದುವರೆಯಬೇಕು. ಜೀವನದ ಪ್ರತಿ ಕ್ಷಣವು ಹೊಸ ವಿಚಾರವನ್ನು ಕಲಿಯುವ ಆಸಕ್ತಿಯುಳ್ಳವರು ಶಕ್ತಿಯುತ ನಾಯಕರಾಗಿ ಬೆಳೆಯುತ್ತಾರೆ. ವೃತ್ತಿ ಜೀವನದ ಸೋಲಿನಿಂದ ದೃತಿಗೆಡಬಾರದು, ಸೋಲೇ ಗೆಲುವಿನ ಮೆಟ್ಟಿಲು ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಮುಂದುವರೆಯಬೇಕು ಎಂದು ಹೇಳಿದರು. ಒಬ್ಬಂಟಿಯಾಗಿದ್ದು ಎಲ್ಲವನ್ನು ಸಾಧಿಸಬಲ್ಲೇ ಎಂಬ ಭ್ರಮೆಯಿಂದ ಹೊರಬಂದು ಎಲ್ಲರೊಂದಿಗೆ ಬೆರೆಯುವ ಗುಣವನ್ನು ಮೈಗೂಡಿಸಿಕೊಳ್ಳಬೇಕು. ತಂಡವಾಗಿ ಕೆಲಸ ಮಾಡುವ ಚಾಕಚಕ್ಯತೆ ಇಂದಿನ ಪ್ರಮುಖ ಅವಶ್ಯಕತೆಗಳಲ್ಲೊಂದು. ಇತರರನ್ನು ಯಶಸ್ವಿ ಕೆಲಸಗಾರರನ್ನಾಗಿ ಮಾಡಿದಾಗ, ನಮಗೂ ಅದರ ಪ್ರತಿಫಲ ದೊರೆಯುತ್ತದೆ. ಇವು ಉನ್ನತ ಸ್ಥಾನಕ್ಕೇರಲು ಸಹಾಯ ಮಾಡುತ್ತದೆ. ಯಶಸ್ಸಿಗಾಗಿ ಅಡ್ಡದಾರಿಯನ್ನು ಹಿಡಿಯದಿರಿ. ಅದು ಶಾಶ್ವತವಲ್ಲ ಎಂದು ಸಲಹೆ ನೀಡಿದರು.

ವರ್ತಮಾನದಲ್ಲಿ ಎಲ್ಲಾ ದೃಷ್ಟಿಕೋನದಿಂದ ಚಿಂತಿಸಿ ಸಮಸ್ಯೆಗಳನ್ನು ನಿವಾರಿಸುವ ನಾಯಕತ್ವವನ್ನು ಕಾರ್ಪೊರೇಟ್ ಜಗತ್ತು ಅಪೇಕ್ಷಿಸುತ್ತಿದೆ. ಎಸ್‌ಡಿಎಂಐಎಂಡಿಯು ಆ ಮಾರ್ಗದಲ್ಲಿ ಚಿಂತಿಸಿ ವಿದ್ಯಾರ್ಥಿಗಳನ್ನು ರೂಪಿಸುತ್ತಿದ್ದಾರೆ ಎಂದರು. ನಂತರ ಎಸ್‌ಡಿಎಂಐಎಂಡಿ ಕಾಲೇಜಿನ ಮುಖ್ಯಸ್ಥರು ಹಾಗೂ ರಾಜ್ಯಸಭಾ ಸದಸ್ಯರೂ ಆದ ಡಾ.ವೀರೇಂದ್ರ ಹೆಗ್ಗಡೆ ಮಾತನಾಡಿ, ವೃತ್ತಿ ಜೀವನದಲ್ಲಿ ಯಶಸ್ವಿಯಾಗಲು ಮನಸ್ಸು ಮತ್ತು ಮನೋಧರ್ಮವು ಅಗತ್ಯವಿರುವ ಪ್ರಮುಖ ಲಕ್ಷಣಗಳಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಅದರಂತೆ ನಾವು 2 ವರ್ಷಗಳ ಅವಧಿಯಲ್ಲಿ, ನಮ್ಮ ವಿದ್ಯಾರ್ಥಿಗಳಲ್ಲಿ ಒಟ್ಟಾರೆ ವ್ಯಕ್ತಿತ್ವ ಮತ್ತು ಪಾತ್ರವನ್ನು ರೂಪಿಸಲು ಶ್ರಮಿಸುತ್ತಿದ್ದೇವೆ ಎಂದರು.

ವಿದ್ಯಾರ್ಥಿಗಳು ತಮ್ಮ ಸಾಂಸ್ಥಿಕ ಅಥವಾ ಸ್ವಂತ ಉದ್ಯಮಗಳಲ್ಲಿ ಉತ್ಕೃಷ್ಟರಾಗಬೇಕೆಂದು, ಏಕಕಾಲದಲ್ಲಿ ಭಾರತೀಯ ಮೌಲ್ಯಗಳು ಮತ್ತು ನೈತಿಕತೆಯನ್ನು ಎತ್ತಿಹಿಡಿಯಬೇಕಂದು ನಾವು ಬಯಸುತ್ತೇವೆ. ಭಾರತದಲ್ಲಿ ಉನ್ನತ ಶಿಕ್ಷಣವು ಬಹಳಷ್ಟು ಬದಲಾವಣೆಯಾಗುತ್ತಿದ್ದು, 2020ರಲ್ಲಿ ಹೊರತಂದ ರಾಷ್ಟ್ರೀಯ ಶೈಕ್ಷಣಿಕ ನೀತಿಯು ಒಂದು ದಾಖಲೆಯಾಗಿದೆ. ಇದು ವಿದ್ಯಾರ್ಥಿಯ ಶಿಕ್ಷಣವನ್ನು ಹೆಚ್ಚು ಉತ್ತೇಜನಕಾರಿಯಾಗಿ ಮಾಡಲು ಪರಿಣಾಮಕಾರಿಯಾಗಿದೆ ಎಂದರು.

ಸಂಸ್ಥೆಯೂ 28 ವರ್ಷಗಳನ್ನು ಪೂರ್ಣಗೊಳಿಸುವುದರೊಂದಿಗೆ ತನ್ನ ಸಂಪೂರ್ಣ ಶ್ರೇಷ್ಠತೆಯ ಗುರಿಯಲ್ಲಿ ಮುನ್ನಡೆಯುತಿದೆ. ಸಂಸ್ಥೆಯ ಪ್ರಾರಂಭದಿಂದಲೂ, AICTE ಯಿಂದ ಗುರುತಿಸಲ್ಪಟ್ಟ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾವು ಉನ್ನತ ಮಟ್ಟದ ಶೈಕ್ಷಣಿಕ ಕಠಿಣತೆಯೊಂದಿಗೆ ನಡೆಯುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ 165 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಹಣಕಾಸು ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಗಾಗಿ ಕೆ.ಎಸ್.ಶರತ್‌ಗೆ ಅಂಕುರ್ ಗುಪ್ತಾ ಚಿನ್ನದ ಪದಕ, ಮಾರ್ಕೆಟಿಂಗ್‌ನಲ್ಲಿ ಅತ್ಯುತ್ತಮ ಸಾಧನೆಗಾಗಿ ವಿಶಾಲ್ ಶರ್ಮಾ ಚಿನ್ನದ ಪದಕ ಪಡೆದರು. ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಅತ್ಯುತ್ತಮ ಸಾಧನೆಗಾಗಿ ಸುಮನ್ ನಾರಾಯಣ್ ಮತ್ತು ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ ಅಧ್ಯಕ್ಷರ ಗೌರವಾನ್ವಿತ ಚಿನ್ನದ ಪದಕವನ್ನು ಎನ್.ಸಿ.ಪ್ರಿಯಾ ದರ್ಶಿನಿ ಪಡೆದುಕೊಂಡರೆ, ಸಿಸ್ಟಮ್ಸ್‌ನಲ್ಲಿ ಅತ್ಯುತ್ತಮ ಪ್ರದರ್ಶನ ಮತ್ತು ಅತ್ಯುತ್ತಮ ಒಟ್ಟಾರೆ ಪ್ರದರ್ಶನಕ್ಕಾಗಿ ಎಸ್. ಗುರು ಪ್ರಾಣೇಶ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಐಎಂಡಿ ಉಪಾಧ್ಯಕ್ಷ ಸುರೇಂದ್ರ ಕುಮಾರ್, ನಿರ್ದೇಶಕ ಡಾ.ಎನ್.ಆರ್. ಪರಶು ರಾಮನ್, ಉಪ ನಿರ್ದೇಶಕ ಎಸ್.ಎನ್. ಪ್ರಸಾದ್, ಆಡಳಿತಾಧಿಕಾರಿ ಡಾ.ಎಂ.ವಿ. ಸುನಿಲ್, ಆಡಳಿತ ಮಂಡಳಿ ಸದಸ್ಯರಾದ ಪ್ರೊ.ಇಂದಿರಾ, ಮುತ್ತುರಾಮ್, ವೆಂಕಟ ನಾರಾಯಣನ್ ಮತ್ತು ಭೀಮಾ ಮೇಟ್ರಿ ಉಪಸ್ಥಿತರಿದ್ದರು.

ನೀತಿ ಸಂಹಿತೆ ಪಾಲನೆ ಮಾಡುವಂತೆ ರಾಜಕೀಯ ಮುಖಂಡರು, ಸಾರ್ವಜನಿಕರಿಗೆ ಡಿಸಿ ಸಲಹೆ



ಮೈಸೂರು, ಮಾ.29(ಎಂಕೆ)– ರಾಜಕೀಯ ಪ್ರತಿನಿಧಿಗಳು, ಮುಖಂಡರು, ಸಾರ್ವಜನಿಕರು ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಪಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಬುಧವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ಅವರು, ಚುನಾವಣಾ ಮಾದರಿ ನೀತಿ ಸಂಹಿತೆಯು ಮೇ.15 ರವರೆಗೆ ಜಾರಿಯಲ್ಲಿರುತ್ತದೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾರದರ್ಶಕವಾಗಿ ಚುನಾವಣೆ ನಡೆಸಲು ಸಹಕಾರ ನೀಡಬೇಕು. ಯಾವುದೇ ಕಾರ್ಯಕ್ರಮಗಳ ಆಯೋಜನೆಗೆ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ನಾಮಪತ್ರ ಸಲ್ಲಿಕೆ ಸೇರಿದಂತೆ ಇನ್ನಿತರೆ ಗೊಂದಲಗಳಿದ್ದಲ್ಲಿ ಆಯಾ ಕ್ಷೇತ್ರದ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಂದ ಸೂಕ್ತ ಮಾಹಿತಿ ಪಡೆದುಕೊಳ್ಳಬೇಕು. ಯಾವುದೇ ಅಹಿತರ ಘಟನೆಗಳಿಗೆ ಅವಕಾಶ ಮಾಡಿಕೊಡಬಾರದು ಎಂದು ಸೂಚಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಪಂ ಸಿಇಓ ಗಾಯಿತ್ರಿ, ಎಸ್‌ಪಿ ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಮ್, ಕಾಂಗ್ರೆಸ್ ಮುಖಂಡರಾದ ಕೆ.ಸಿ.ಶೌಕತ್ ಪಾಷಾ, ಉತ್ತನಹಳ್ಳಿ ಶಿವಣ್ಣ, ಜೆಡಿಎಸ್ ಮುಖಂಡರಾದ ಎಸ್.ನರಸಿಂಹಸ್ವಾಮಿ, ಪಾಲ್ಕನ್ ಬೋರೇಗೌಡ, ಬಿಜೆಪಿ ಮುಖಂಡರಾದ ಗೋಕುಲ್ ಗೋವರ್ಧನ್, ಹೆಚ್.ಪಿ.ಚೇತನ್, ಕಿರಣ್ ಜೈ ರಾಮ್‌ಗೌಡ ಸೇರಿದಂತೆ ವಿವಿಧ ಪಕ್ಷಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು .

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ ಗುರುವಾರ 30 ಮಾರ್ಚ್ 2023

ವಿಧಾನಸಭೆ ಚುನಾವಣೆ: ಕೊಡಗು ಜಿಲ್ಲಾಡಳಿತ ಸಜ್ಜು

• ಮಾದರಿ ನೀತಿ ಸಂಹಿತೆ ಜಾರಿ • 41 ಸೆಕ್ಟರ್ ಅಧಿಕಾರಿ, 14 ಫ್ಲೈಯಿಂಗ್ ಸ್ಕ್ವಾಡ್, 42 ಸ್ಟಾಟಿಕ್ ಸರ್ವೆಲೆನ್ಸ್ ತಂಡ ರಚನೆ



ಮಡಿಕೇರಿ, ಮಾ.29– ಭಾರತ ಚುನಾವಣಾ ಆಯೋಗವು ವಿಧಾನಸಭಾ ಸಾರ್ವತ್ರಿಕ ಚುನಾವಣೆ ದಿನಾಂಕ ಘೋಷಣೆ ಮಾಡಿದ್ದು, ಆ ನಿಟ್ಟಿನಲ್ಲಿ ಮಾರ್ಚ್, 29 ರಿಂದಲೇ ಮಾದರಿ ನೀತಿ ಸಂಹಿತೆ ಜಾರಿಗೊಂಡಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಅವರು, ವಿಧಾನಸಭಾ ಚುನಾವಣೆಯು ಮೇ 10 ರಂದು ಮತದಾನ ನಡೆಯಲಿದೆ. ಮೇ 13 ರಂದು ಮತ ಎಣಿಕೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಏಪ್ರಿಲ್ 13 ರಂದು ಚುನಾವಣಾ ಅಧಿಸೂಚನೆ ಹೊರಡಿಸಲಾಗುತ್ತದೆ. ನಾಮಪತ್ರ ಸಲ್ಲಿಸಲು ಏ.20 ಕೊನೆಯ ದಿನವಾಗಿದೆ. ಏ.21 ರಂದು ನಾಮಪತ್ರ ಪರಿಶೀಲನಾ ಕಾರ್ಯ ನಡೆಯಲಿದೆ. ಏ.24 ರಂದು ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾಹಿತಿ ನೀಡಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ವಿವಿಧ ತಂಡಗಳನ್ನು ನೇಮಕ ಮಾಡಲಾಗಿದೆ. ಎಂಸಿಸಿ ಇಬ್ಬರು ನೋಡಲ್ ಅಧಿಕಾರಿಗಳು, 41 ಸೆಕ್ಟರ್ ಅಧಿಕಾರಿಗಳು, 14 ಫ್ಲೈಯಿಂಗ್ ಸ್ಕ್ವಾಡ್, 42 ಸ್ಟಾಟಿಕ್ ಸರ್ವೆಲೆನ್ಸ್ ತಂಡ ರಚಿಸಲಾಗಿದೆ ಎಂದು ಡಾ.ಬಿ.ಸಿ.ಸತೀಶ ಅವರು ವಿವರಿಸಿದರು.

ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ 40 ಲಕ್ಷ ರೂ. ವರೆಗೆ ಖರ್ಚು ಮಾಡಬಹುದಾಗಿದೆ. ಈ ಹಿನ್ನೆಲೆ ಅಭ್ಯರ್ಥಿಗಳ ವೆಚ್ಚದ ಮೇಲೆ ನಿಗಾ ವಹಿಸಲು ವಿವಿಧ ವೆಚ್ಚ ತಂಡಗಳನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕೊಡಗು ಜಿಲ್ಲೆಯ ಎರಡು ವಿಧಾನ ಸಭಾ ಕ್ಷೇತ್ರಕ್ಕೆ ತಲಾ ಒಬ್ಬರಂತೆ ಇಬ್ಬರು ಸಹಾಯಕ ವೆಚ್ಚ ವೀಕ್ಷಕರು, ಇಬ್ಬರು ಲೆಕ್ಕ ತಂಡದವರು, ನಾಲ್ಕು ಮಂದಿ ವೀಡಿಯೋ ಸರ್ವೆಲೆನ್ಸ್ ತಂಡ, ಹಾಗೆಯೇ ಇಬ್ಬರು ವಿಡಿಯೋ ವೀವಿಂಗ್ ತಂಡವನ್ನು ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಅವರು ವಿವರಿಸಿದರು.

ಮಾದರಿ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಒಬ್ಬ ವ್ಯಕ್ತಿ 50 ಸಾವಿರ ಮೊತ್ತ ತೆಗೆದುಕೊಂಡು ತೆರಳಬಹುದು. ಆದರೆ ಪೂರಕ ದಾಖಲೆ ಇಟ್ಟುಕೊಂಡಿರಬೇಕು. ತಪ್ಪಿದ್ದಲ್ಲಿ ತಪಾಸಣಾ ಅವಧಿಯಲ್ಲಿ ಮುಟ್ಟುಗೋಲು ಹಾಕಲಾಗುತ್ತದೆ ಎಚ್ಚರಿಸಿದರು.

50 ಸಾವಿರಕ್ಕಿಂತ ಹೆಚ್ಚು ಮೊತ್ತವನ್ನು ದಾಖಲೆಯೊಂದಿಗೆ ಇಟ್ಟುಕೊಂಡು ತೆರಳಿದ ಸಂದರ್ಭ ತಪಾಸಣಾ ಅವಧಿಯಲ್ಲಿ ಅನುಮಾನಾಸ್ಪದವಾಗಿ ಕಂಡು ಬಂದಲ್ಲಿ ಮೊತ್ತವನ್ನು ಮುಟ್ಟುಗೋಲು ಹಾಕಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಹೇಳಿದರು.

ವಾಹನಗಳಲ್ಲಿ 10 ಲಕ್ಷಕ್ಕಿಂತ ಹೆಚ್ಚು ನಗದು ಇರುವುದು ತಪಾಸಣಾ ಅವಧಿಯಲ್ಲಿ ಕಂಡುಬಂದಲ್ಲಿ ಈ ಮೊತ್ತವನ್ನು ಆದಾಯ ತೆರಿಗೆ ಇಲಾಖೆ ವಶಕ್ಕೆ ನೀಡಲಾಗುವುದು. ವಾಹನಗಳಲ್ಲಿ ಅನುಮಾನಾಸ್ಪದ ಸಾಮಗ್ರಿಗಳಾದ ಗೃಹ ಉಪಯೋಗಿ ವಸ್ತುಗಳು, ಮದ್ಯ, ಮಾದಕ ದ್ರವ್ಯಗಳು ಮತ್ತು ಆಯುಧಗಳನ್ನು ಸಾಗಿಸುವುದು ತಪಾಸಣಾ ಅವಧಿಯಲ್ಲಿ ಕಂಡುಬಂದಲ್ಲಿ ಈ ವಸ್ತುಗಳನ್ನು ಮುಟ್ಟುಗೋಲು ಮಾಡಲಾಗುವುದು ಎಂದು ಡಾ.ಬಿ.ಸಿ.ಸತೀಶ ನುಡಿದರು.

ಜಿಲ್ಲೆಯಲ್ಲಿ ಒಟ್ಟು 542 ಮತಗಟ್ಟೆಗಳಿದ್ದು, ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ 269 ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 273 ಮತಗಟ್ಟೆಗಳು ಇವೆ ಎಂದು ಜಿಲ್ಲಾಧಿಕಾರಿ ಅವರು ಹೇಳಿದರು.

ಕೊಡಗು ಜಿಲ್ಲೆಯಲ್ಲಿ ಒಟ್ಟು 4,52,642 ಮತದಾರರಿದ್ದು, 4,51,216 ಸಾಮಾನ್ಯ ಮತದಾರರು ಮತ್ತು 1,426 ಸೇವಾ ಮತದಾರರು ಇದ್ದಾರೆ ಎಂದು ಜಿಲ್ಲಾಧಿಕಾರಿ ವಿವರಿಸಿದರು. ಮಡಿಕೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2,30,359 ಮತದಾರರು ಇದ್ದಾರೆ. ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 2,22,283 ಮಂದಿ ಮತದಾರರಿದ್ದಾರೆ ಎಂದರು.

ಮಡಿಕೇರಿ ಮತ್ತು ವಿರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದ್ದು, ಮಡಿಕೇರಿ ವಿಧಾನ ಸಭಾ ಕ್ಷೇತ್ರಕ್ಕೆ ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಸಹಾಯಕ ಚುನಾವಣಾಧಿಕಾರಿಯಾಗಿ ತಹಶೀಲ್ದಾರ್‌ರಾದ ಕಿರಣ್ ಜಿ.ಗೌರಯ್ಯ (ಮಡಿಕೇರಿ), ಎಸ್.ಎನ್.ನರಗುಂದ (ಸೋಮವಾರಪೇಟೆ), ಟಿ.ಎಂ.ಪ್ರಕಾಶ್ (ಕುಶಾಲನಗರ), ಅವರು ಕಾರ್ಯ ನಿರ್ವಹಿಸಲಿದ್ದಾರೆ ಎಂದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶಬಾನಾ ಎಂ.ಶೇಖ್ ಅವರು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ. ಸಹಾಯಕ ಚುನಾವಣಾಧಿಕಾರಿಯಾಗಿ ಕಿರಣ್ ಜಿ.ಗೌರಯ್ಯ (ಮಡಿಕೇರಿ), ಎಚ್.ಎನ್.ರಾಮಚಂದ್ರ (ವಿರಾಜಪೇಟೆ), ಎಸ್.ಎನ್.ಪ್ರಶಾಂತ್ (ಪೊನ್ನಂಪೇಟೆ) ಕಾರ್ಯನಿರ್ವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಅವರು ಹೇಳಿದರು.

ಮತದಾರರ ಸಹಾಯವಾಣಿ

ಚುನಾವಣೆಯ ಅಕ್ರಮಗಳ ಬಗ್ಗೆ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿಯಾಗಿರುವ ಬಗ್ಗೆ, ಮತಗಟ್ಟೆ ಬಗ್ಗೆ ಮಾಹಿತಿ ಪಡೆಯಲು ಹಾಗೂ ಇತರೆ ಚುನಾವಣಾ ವಿಷಯಗಳಿಗೆ ಸಂಬಂಧಿಸಿದಂತೆ ದೂರು ಸಲ್ಲಿಸಲು/ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ಟೋಲ್ ಫ್ರೀ ಸಂಖ್ಯೆ 1950 ಕರೆ ಮಾಡಬಹುದಾಗಿದೆ. ವೋಟರ್ ಸಹಾಯವಾಣಿಯು 24x7 ಕಾರ್ಯನಿರ್ವಹಿಸುವುದು. (ಹೊರ ಜಿಲ್ಲೆಯಿಂದ ಕರೆ ಮಾಡುವವರು 08272–1950ಗೆ ಕರೆ ಮಾಡುವುದು) ಎಂದರು.

ವಿವಿಧ ಕಾರ್ಯಕ್ರಮಗಳಿಗೆ ಅನುಮತಿ ನೀಡುವ ಬಗ್ಗೆ, ನಿಶ್ಚಿತಾರ್ಥ, ಮದುವೆ, ನಾಮಕರಣ ಮತ್ತಿತರ ಖಾಸಗಿ ಸಮಾರಂಭಗಳಿಗೆ ಯಾವುದೇ ನಿರ್ಬಂಧ ಇಲ್ಲ, ಆದರೆ ಈ ಸಮಾರಂಭಗಳು ರಾಜಕೀಯ ಪ್ರೇರಿತವಾಗಿರಬಾರದು ಮತ್ತು ಯಾವುದೇ ಪಕ್ಷದ ಪ್ರಚಾರಕ್ಕೆ ವೇದಿಕೆಯಾಗಿರಬಾರದು. ಮೆರವಣಿಗೆ, ವಾರ್ಷಿಕೋತ್ಸವ, ಜಾತ್ರೆ, ಸಾಮೂಹಿಕ ವಿವಾಹ ಮತ್ತಿತರ ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಲು ಸಂಬಂಧಿಸಿದ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳ ಅನುಮತಿ ಕಡ್ಡಾಯವಾಗಿದೆ. ಚುನಾವಣಾಧಿಕಾರಿಗಳು ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು 24 ಗಂಟೆಯೊಳಗೆ ಅನುಮತಿ ನೀಡಲಿದ್ದಾರೆ ಎಂದರು.

ಬಡವರು ಬಡವರಾಗಿಯೇ ಮುಂದುವರಿದಿದ್ದಾರೆ

ಎ.ಎಸ್. ಪೊನ್ನಣ್ಣ ವಿಷಾದ



ಗೋಣಿಕೊಪ್ಪಲು, ಮಾ.29– ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ನನ್ನನ್ನು ಆಯ್ಕೆ ಮಾಡಿದ ನಂತರ ಹಿರಿಯರು ಮನೆಗೆ ಬಂದು ಗುರುಕಾರೋಣರ ಮುಂದೆ ತನ್ನನ್ನು ಆಶೀರ್ವದಿಸುತ್ತಿರುವುದು ವಿಶೇಷ ಅನುಭವ. ಇದೀಗ ಚುನಾವಣೆ ಎದುರಿಸುತ್ತಿರುವುದರಿಂದ ಗ್ರಾಮ ಗ್ರಾಮಗಳಲ್ಲಿ ಅಪರಿಚಿತ ಮತದಾರರೊಂದಿಗೆ ಬಾಂಧವ್ಯ ವೃದ್ಧಿಗೆ ಕಾರಣವಾಗಿದೆ.

ಕಳೆದ 20 ವರ್ಷದ ರಾಜಕಾರಣ ಅವಲೋಕಿಸಿದರೆ ಶ್ರೀಮಂತರು ಶ್ರೀಮಂತರಾಗಿಯೇ ಮುಂದುವರಿದರೆ, ಬಡವರ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದ್ದು, ಬಡವರಾಗಿಯೇ ಮುಂದುವರಿದಿದ್ದಾರೆ ಎಂದು ಹೈಕೋರ್ಟ್ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ವಿಷಾದಿಸಿದರು. ಬೆಳ್ಳೂರು ನಿವಾಸದಲ್ಲಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯಾಗಿ ಘೋಷಣೆಯಾದ ನಂತರ ಕೋಣಗೇರಿ, ಹುದಿಕೇರಿ, ಬಾಳೆಲೆ, ಬಿ.ಶೆಟ್ಟಿಗೇರಿ, ಟಿ.ಶೆಟ್ಟಿಗೇರಿ, ಹೈಸೊಡ್ಲೂರು, ಕಾನೂರು, ಬಾಳೆಲೆ ಅಭಿಮಾನಿ ಬಳಗದಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕೊಡಗು ಜಿಲ್ಲೆಯಲ್ಲಿ ಜಲಪ್ರಳಯ ಹಾಗೂ ಕೊರೊನಾ ಸಂದರ್ಭ ಜನಪ್ರತಿನಿಧಿಗಳು ಮನೆಯಲ್ಲಿ ಬಚ್ಚಿಟ್ಟುಕೊಂಡ ಕಾರಣ ನಾನು ವೈಯಕ್ತಿಕವಾಗಿ ಕಿಟ್ ಇತ್ಯಾದಿ ವಿತರಿಸಿದ್ದೆ.ಆದರೆ, ಸಮುದಾಯ ಅಭಿವೃದ್ಧಿ ಮಾಡಲು ವೈಯಕ್ತಿಕವಾಗಿ ಸಾಧ್ಯವಿಲ್ಲ.ಈ ನಿಟ್ಟಿನಲ್ಲಿ ಜನರ ಆಶೀರ್ವಾದದೊಂದಿಗೆ ಚುನಾವಣೆಗೆ ಸ್ಪರ್ಧೆ ಮಾಡುತ್ತಿದ್ದೇನೆ. ಸಂವಿಧಾನದಲ್ಲಿ ರಾಜ್ಯಾಂಗವು ಸಂಪನ್ಮೂಲವನ್ನು ಜನತೆಗೆ ಸಮಾನವಾಗಿ ಹಂಚಬೇಕು. ಆದರೆ, ಕಾರ್ಯಾಂಗದ ನೀತಿ ರೂಪಿಸುವವರಿಗೆ ಕೊಡಗಿನ ಬಡತನ ಕಣ್ಣಿಗೆ ಕಾಣುತ್ತಿಲ್ಲ. ಕಳೆದ 20 ವರ್ಷದಲ್ಲಿ ಕೊಡಗು ಅಭಿವೃದ್ಧಿ ಕಂಡಿಲ್ಲ. ರಸ್ತೆ, ವಿದ್ಯುತ್ ಹಾಗೂ ಕುಡಿಯುವ ನೀರಿನ ಸಮಸ್ಯೆ ಶಾಶ್ವತ ಪರಿಹಾರವಾಗಿಲ್ಲ. ಈ ನಿಟ್ಟಿನಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದೇನೆ ಎಂದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಹುದಿಕೇರಿಯ ನೂರೇರ ಮನೋಹರ್, ಹಿರಿಯರಾದ ಚೆಕ್ಕೇರ ಸೋಮಯ್ಯ, ಚೆಕ್ಕೇರ ಕಾಳಯ್ಯ, ಹುದಿಕೇರಿ ವಿಎಸ್‌ಎಸ್ ಎನ್ ಬ್ಯಾಂಕ್ ನಿರ್ದೇಶಕ ಬೊಳ್ಳಿಮಾಡ ಧನು ಮುಂತಾದವರು ಮಾತನಾಡಿದರು. ವೇದಿಕೆಯಲ್ಲಿ ರಾಜ್ಯ ವಕ್ತಾರ ಸಂಕೇತ್ ಪೂವಯ್ಯ, ಪಿ.ಕೆ.ಪೊನ್ನಪ್ಪ, ಹುದಿಕೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ಸೂರಜ್, ಚೆಕ್ಕೇರ ವಾಸು ಕುಟ್ಟಪ್ಪ, ಯುವ ಕಾಂಗ್ರೆಸ್‌ನ ಅಂಕಿತ್ ಪೊನ್ನಣ್ಣ, ವಿ.ಎಲ್.ಲೋಕೇಶ್, ಕೊಲ್ಲೀರ ಬೋಪಣ್ಣ ಮುಂತಾದವರು ಉಪಸ್ಥಿತರಿದ್ದರು. ಎ.ಜೆ.ಬಾಬು ನಿರೂಪಿಸಿದರು.

ವಿ.ಪೇಟೆ ಗ್ರಾಮಾಂತರ ಠಾಣೆ ಪೇದೆ ಡಿ. ರಾಜಾಗೆ ಮುಖ್ಯಮಂತ್ರಿಗಳ ಪದಕ



ವಿರಾಜಪೇಟೆ, ಮಾ.29– ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿ ಡಿ.ರಾಜಾ ಅವರಿಗೆ 2022 ರ ಸಾಲಿನ ಮುಖ್ಯಮಂತ್ರಿ ಪದಕ ಲಭಿಸಿದೆ. ರಾಜ್ಯದಲ್ಲಿ ಉತ್ತಮ ಕರ್ತವ್ಯ ನಿರ್ವಹಿಸಿದ ಪೊಲೀಸರಿಗೆ ಪ್ರತಿಷ್ಠಿತ ಮುಖ್ಯಮಂತ್ರಿ ಪೊಲೀಸ್ ಪದಕ ನೀಡಲಾಗುತ್ತಿದ್ದು ಈ ಬಾರಿ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ಡಿ.ರಾಜಾ ಅವರಿಗೆ ವಿಶೇಷ ಕರ್ತವ್ಯ ನಿಮಿತ್ತ ಈ ಪ್ರಶಸ್ತಿ ಸಂದಿದೆ.

ಮಧುರೈ ಮೂಲದ ದೊರೈ ಪಾಂಡಿಯನ್ ಮತ್ತು ಪಂಚವರ್ಣಂ ಅವರ ಮಗ ಡಿ.ರಾಜಾ ಅವರು ಪಾಲಿಬೆಟ್ಟದ ನಿವಾಸಿಯಾಗಿದ್ದು, 2009 ರಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡರು. ಸಿದ್ದಾಪುರ ಹಾಗೂ ಪೊನ್ನಂಪೇಟೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸಿ ಪ್ರಸ್ತುತ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದು, ಪ್ರಸ್ತುತ ವಿಶೇಷ ಘಟಕದಲ್ಲಿ ಗುಪ್ತ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಗಾಂಜಾ ಮಾರುತ್ತಿದ್ದ ಅಸ್ಸಾಂ ಮೂಲದ ಮೂವರ ಬಂಧನ



ಸಿದ್ದಾಪುರ, ಮಾ.29– ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಅಸ್ಸಾಂ ಮೂಲದ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ನಾಪೋಕ್ಲು ಪೊಲೀಸರು ಯಶಸ್ವಿಯಾಗಿದ್ದಾರೆ.

ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಕೈಕಾಡು ಗ್ರಾಮದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಅಸ್ಸಾಂ ಮೂಲದ ಸೈಪುಲ್ ಇಸ್ಲಾಂ (27), ಅನಾರ್ ಹುಸೈನ್ (37), ಜಹೀರ್ ಅಲಿ (28) ಎಂಬ ಆರೋಪಿಗಳನ್ನು ಬಂಧಿಸಿ, ಅವರಿಂದ ಅಂದಾಜು ಸುಮಾರು 3.50 ಲಕ್ಷ ರೂ ವೆಚ್ಚದ 2.150 ಕೆಜಿ ಗಾಂಜಾ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕರಾದ ರಾಮರಾಜನ್ ಮತ್ತು ಹೆಚ್ಚುವರಿ ಪೊಲೀಸ್ ಉಪ ಅಧೀಕ್ಷಾದ ಸುಂದರ್‌ರಾಜ್ ನಿರ್ದೇಶನದಂತೆ ಡಿವೈಎಸ್‌ಪಿ ಜಗದೀಶ್, ವೃತ್ತ ನಿರೀಕ್ಷಕ ಶೇಖರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್, ಸಿಬ್ಬಂದಿಗಳಾದ ಕೆ.ಎಂ. ಅಬ್ದುಲ್ ಶಮೀಲ್, ಶಿವಪ್ರಸಾದ್, ಹರ್ಷ, ಪ್ರಸನ್ನ, ಮಧುಸೂದನ್,ಎಚ್.ಸಿ.ಕಾಳೆಯಪ್ಪ, ಪಂಚಲಿಂಗಪ್ಪ ಸತ್ತಿಗೇರಿ, ಮಹದೇವ ನಾಯಕ, ನವೀನ್, ಶರತ್, ಮಹೇಶ್, ರಾಮಕೃಷ್ಣ, ರವಿಕುಮಾರ್, ಗಿರೀಶ್, ವೆಂಕಟೇಶ್, ಲವಕುಮಾರ್, ಚಾಲಕ ಷರೀಫ್ ಪಾಲ್ಗೊಂಡಿದ್ದರು.

ವಿಧಾನಸಭಾ ಸಾರ್ವತ್ರಿಕ ಚುನಾವಣೆ: ನೀತಿ ಸಂಹಿತೆ ಉಲ್ಲಂಘನೆ ವಿರುದ್ಧ ಕ್ರಮ

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್



ಚಾಮರಾಜನಗರ, ಮಾ.29– ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ದಿನಾಂಕ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು, ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಪ್ರಜಾ ಪ್ರಾತಿನಿಧ್ಯ ಕಾಯ್ದೆ ಅನ್ವಯ ಕ್ರಮ ಜರುಗಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲ ಕ್ರಮ ವಹಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಚುನಾವಣಾ ಮಾದರಿ ನೀತಿ ಸಂಹಿತೆ ಪಾಲನೆಗಾಗಿ ಪ್ರತೀ ವಿಧಾನಸಭಾ ಕ್ಷೇತ್ರಗಳ 10 ರಿಂದ 12 ಮತಗಟ್ಟೆಗಳಿಗೆ ಒಬ್ಬರಂತೆ ಒಟ್ಟು 97 ಸೆಕ್ಟರ್ ಅಧಿಕಾರಿಗಳು ಹಾಗೂ ಚುನಾವಣಾ ಅಕ್ರಮ ದೂರುಗಳಿಗೆ ಸಂಬಂಧಿಸಿದಂತೆ ಕಾರ್ಯೋನ್ಮುಖರಾಗಲು 12 ಫ್ಲೈಯಿಂಗ್ ಸ್ಕ್ವಾಡ್ ತಂಡಗಳನ್ನು ನೇಮಿಸಲಾಗಿದೆ. ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ಮೇಲೆ ನಿಗಾ ಇಡಲು ವಿಧಾನಸಭಾ ಕ್ಷೇತ್ರವಾರು ಮಾದರಿ ನೀತಿ ಸಂಹಿತೆ ತಂಡ ನೇಮಕ ಮಾಡಲಾಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಮಾದರಿ ನೀತಿ ಸಂಹಿತೆಯ ಜಿಲ್ಲಾ ನೋಡಲ್ ಅಧಿಕಾರಿಗಳಾಗಿದ್ದಾರೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 982 ಮತಗಟ್ಟೆಗಳನ್ನು ತೆರೆಯಲಾಗಿದೆ. ಹನೂರು ವಿಧಾನಸಭಾ ಕ್ಷೇತ್ರದಲ್ಲಿ 253, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ 241, ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 239, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 249 ಮತಗಟ್ಟೆಗಳಿವೆ. ನಗರ ಪ್ರದೇಶದಲ್ಲಿ 287, ಗ್ರಾಮಾಂತರ ಪ್ರದೇಶದಲ್ಲಿ 695 ಮತಗಟ್ಟೆಗಳು ಸ್ಥಾಪಿಸಲಾಗಿದೆ.

ಜಿಲ್ಲೆಯಲ್ಲಿ 422963 ಪುರುಷರು, 431226 ಮಹಿಳೆಯರು, 68 ಇತರರು ಸೇರಿದಂತೆ ಒಟ್ಟು 854257 ಮತದಾರರಿದ್ದಾರೆ. ಹನೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 110797 ಪುರುಷರು, 108387 ಮಹಿಳೆಯರು, 16 ಇತರರು ಸೇರಿದಂತೆ ಒಟ್ಟು 219200 ಮತದಾರರಿದ್ದಾರೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 106235 ಪುರುಷರು, 108909 ಮಹಿಳೆಯರು, 18 ಇತರರು ಸೇರಿದಂತೆ ಒಟ್ಟು 215162 ಮತದಾರರಿದ್ದಾರೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 101744 ಪುರುಷರು, 106012 ಮಹಿಳೆಯರು, 15 ಇತರರು ಸೇರಿದಂತೆ ಒಟ್ಟು 207771 ಮತದಾರರಿದ್ದಾರೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 104187 ಪುರುಷರು, 107918 ಮಹಿಳೆಯರು, 19 ಇತರರು ಸೇರಿದಂತೆ ಒಟ್ಟು 212124 ಮತದಾರರಿದ್ದಾರೆ. ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟಾರೆ 195 ಸೇವಾ ಮತದಾರರು ಇದ್ದಾರೆ ಎಂದು ಜಿಲ್ಲಾಧಿಕಾರಿಯವರು ಮಾಹಿತಿ ನೀಡಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ವಿಕಲಚೇತನ ಮತದಾರರು ಹಾಗೂ 80 ವರ್ಷ ಮೇಲ್ಪಟ್ಟ ವಯೋಮಾನದ ಹಾಸಿಗೆ ಹಿಡಿದಿರುವ ಮತ ಚಲಾಯಿಸಲು ಶಕ್ತರಲ್ಲದ ಹಿರಿಯ ನಾಗರಿಕರು ಅಂಚೆ ಮೂಲಕ ಮತ ಚಲಾಯಿಸಲು ಅವರಿಗೆ ಅಂಚೆ ಮತ ಪತ್ರ ನೀಡಲು ವ್ಯವಸ್ಥೆ ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಒಟ್ಟು 11965 ವಿಕಲಚೇತನ ಮತದಾರರಿದ್ದಾರೆ. ಒಟ್ಟು 23300 ಮಂದಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕ ಮತದಾರರಿದ್ದಾರೆ.

ಸಾರ್ವಜನಿಕರಿಂದ ದೂರವಾಣಿ ಮತ್ತು ಆನ್‌ಲೈನ್ ಮೂಲಕ ಸ್ವೀಕೃತವಾಗುವ ದೂರುಗಳನ್ನು ಇತ್ಯರ್ಥಪಡಿಸಲು ಜಿಲ್ಲಾ ಕೇಂದ್ರದಲ್ಲಿ 24x7 ಅವಧಿಯಲ್ಲಿ ಕರ್ತವ್ಯ ನಿರ್ವಹಿಸಲು ಜಿಲ್ಲಾ ಸಂಪರ್ಕ ಕೇಂದ್ರ ತೆರೆಯಲಾಗಿದೆ. ಸಾರ್ವಜನಿಕರು ಚುನಾವಣೆಗೆ ಸಂಬಂಧಿಸಿದ ಮಾಹಿತಿ ಪಡೆಯಲು ಹಾಗೂ ದೂರು ಸಲ್ಲಿಸಲು ಟೋಲ್ ಫ್ರೀ ಸಂಖ್ಯೆ 1950ಗೆ ಕರೆ ಮಾಡಬಹುದಾಗಿದೆ. ಜಿಲ್ಲೆಯಲ್ಲಿ ಮುಕ್ತ, ನ್ಯಾಯ ಸಮ್ಮತ, ಪಾರದರ್ಶಕ ಚುನಾವಣೆಗೆ ಎಲ್ಲರೂ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಎಸ್. ಪೂವಿತಾ ಅವರು ಮಾತನಾಡಿ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ಕುರಿತು ನಿಗಾ ವಹಿಸಲು ವಿಧಾನಸಭಾ ಕ್ಷೇತ್ರವಾರು ಮಾದರಿ ನೀತಿ ಸಂಹಿತೆ ತಂಡ ಇರಲಿದೆ. ಜಿಲ್ಲಾ ಕೇಂದ್ರದಲ್ಲಿ ಎಂಸಿಎಂಸಿ ತಂಡ, ವೀಡಿಯೋ ಸರ್ವಲೆನ್ಸ್, ವೀಡಿಯೋ ವೀವಿಂಗ್ ತಂಡಗಳು ಕಾರ್ಯ ನಿರ್ವಹಿಸಲಿವೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ ಅವರು ಮಾತನಾಡಿ, ಅಂತರ್ ರಾಜ್ಯ ಹಾಗೂ ಅಂತರ ಜಿಲ್ಲೆಗಳಿಗೆ ಸಂಚರಿಸುವ ವಾಹನಗಳ ಮೇಲೆ ನಿಗಾ ಇಡಲು ಜಿಲ್ಲಾ ವ್ಯಾಪ್ತಿಯಲ್ಲಿ 11 ಅಂತರರಾಜ್ಯ ಹಾಗೂ 8 ಅಂತರ ಜಿಲ್ಲಾ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದ್ದು ಪೊಲೀಸ್, ಕಂದಾಯ ಇನ್ನಿತರೆ ಇಲಾಖೆಗಳ ಅಧಿಕಾರಿಗಳ ತಂಡ ನಿಯೋಜಿಸಲಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ ಅವರು ಸುದ್ದಿಗೋಷ್ಠಿಯಲ್ಲಿ ಇದ್ದರು.

ಗುಂಡ್ಲುಪೇಟೆಯಲ್ಲಿ ಸರ್ಕಾರಿ ಫ್ಲೆಕ್ಸ್‌ಗಳ ತೆರವು



ಗುಂಡ್ಲುಪೇಟೆ, ಮಾ.29– ವಿಧಾನಸಭೆಗೆ ಚುನಾವಣೆ ದಿನಾಂಕ ನಿಗದಿಯಾಗಿ ನೀತಿ ಸಂಹಿತೆ ಜಾರಿಗೆ ಬಂದ ಕೂಡಲೇ ತಾಲೂಕು ಆಡಳಿತದ ವತಿಯಿಂದ ಸರ್ಕಾರದ ವಿವಿಧ ಸಾಧನೆ ಹಾಗೂ ಯೋಜನೆಗಳನ್ನು ಬಿಂಬಿಸುವ ಫ್ಲೆಕ್ಸ್‌ಗಳನ್ನು ತೆರವುಗೊಳಿಸುವ ಕಾರ್ಯ ನಡೆಸಲಾಯಿತು.

ಬುಧವಾರ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಅಧಿಕಾರಿಗಳು ಕಾರ್ಯ ಪ್ರವೃತ್ತರಾದರು. ಪ್ರಧಾನಮಂತ್ರಿ, ಮುಖ್ಯಮಂತ್ರಿ, ವಿವಿಧ ಇಲಾಖೆಯ ಸಚಿವರು ಸೇರಿದಂತೆ ಜನಪ್ರತಿನಿಧಿಗಳ ಭಾವಚಿತ್ರಗಳಿರುವ ಎಲ್ಲಾ ನಾಮಫಲಕಗಳನ್ನು ತೆರವುಗೊಳಿಸಲಾಯಿತು. ಪಟ್ಟಣದ ವ್ಯಾಪ್ತಿಯಲ್ಲಿ ತಾಲೂಕು ಕಚೇರಿ, ಪುರಸಭೆ, ತಾಲೂಕು ಪಂಚಾಯಿತಿ, ವಿವಿಧ ಸರ್ಕಾರಿ ಇಲಾಖೆಗಳ ಎದುರು ಬೃಹತ್ ಫಲಕಗಳಿಗೆ ಅಂಟಿಸಿದ್ದ ಫ್ಲೆಕ್ಸ್‌ಗಳನ್ನು ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ, ಆರೋಗ್ಯಾಧಿಕಾರಿ ಗೋಪಿ ನೇತೃತ್ವದಲ್ಲಿ ಪೌರಕಾರ್ಮಿಕರು ತೆರವುಗೊಳಿಸಿದರೆ ತಾಲೂಕಿನ ಗ್ರಾಮಾಂತರ ಪ್ರದೇಶಗಳ ಗ್ರಾಮಪಂಚಾಯಿತಿಗಳ ಎದುರು ಹಾಗೂ ವ್ಯಾಪ್ತಿಯಲ್ಲಿ ಅಳವಡಿಸಿದ್ದ ಫಲಕಗಳನ್ನು ಪೊಲೀಸ್ ಬಿಗಿ ಬಂದೋಬಸ್ತ್‌ನಲ್ಲಿ ಪಿಡಿಓಗಳು ತೆರವುಗೊಳಿಸಿದರು.

ಮಲ್ಲಿಗಮ್ಮ ನಿಧನ



ಗುಂಡ್ಲುಪೇಟೆ: ತಾಲೂಕಿನ ತೆರಕಣಾಂಬಿ ಹೋಬಳಿಯ ಬೆರಟಹಳ್ಳಿ ಗ್ರಾಮದ ದಿವಂಗತ ಗೌಡಿಕೆ ಸುಬ್ಬಣ್ಣನವರ ಧರ್ಮಪತ್ನಿ ಮಲ್ಲಿಗಮ್ಮ (74) ಅವರು ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಇಬ್ಬರು ಪುತ್ರರಾದ ಶಿಕ್ಷಕ ಶಾಂತಮಲ್ಲಪ್ಪ ಮತ್ತು ವಿರೂಪಾಕ್ಷ ಮತ್ತು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಗುರುವಾರ ಮಧ್ಯಾಹ್ನ 2 ಗಂಟೆಗೆ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಮಲ್ಲಿಗಮ್ಮನವರ ನಿಧನಕ್ಕೆ ಪಡಗೂರು ಅಡವಿ ಮಠಾಧ್ಯಕ್ಷರಾದ ಶಿವಲಿಂಗೇಂದ್ರ ಸ್ವಾಮೀಜಿ, ಶಾಸಕ ಸಿ.ಎಸ್.ನಿರಂಜನಕುಮಾರ್, ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್, ಪತ್ರಕರ್ತ ಲಕ್ಕೂರು ಚಂದ್ರು ಸೇರಿದಂತೆ ವಿವಿಧ ಮಠಾಧೀಶರು ಹಾಗೂ ರಾಜಕೀಯ ಮುಖಂಡರು ತೀವ್ರ ಸಂತಾಪ ಸೂಚಿಸಿದ್ದಾರೆ.

ಪಾನ್‌ಕಾರ್ಡ್‌ಗೆ ಆಧಾರ್ ಜೋಡಣೆಗೆ ಸಾವಿರ ರೂ. ದಂಡ ಖಂಡಿಸಿ ಪೊರಕೆ ಚಳವಳಿ

ಕೇಂದ್ರ ಸರ್ಕಾರ, ಆದಾಯ ತೆರಿಗೆ ಇಲಾಖೆ ವಿರುದ್ಧ ಆಕ್ರೋಶ



ಚಾಮರಾಜನಗರ, ಮಾ.29– ಕೇಂದ್ರ ಸರ್ಕಾರ ಮತ್ತು ಆದಾಯ ತೆರಿಗೆ ಇಲಾಖೆ ಪಾನ್‌ಕಾರ್ಡ್‌ಗೆ ಆಧಾರ್ ಜೋಡಣೆ ಮಾಡಲು 1 ಸಾವಿರ ರೂ ದಂಡ ವಿಧಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪೊರಕೆ ಚಳವಳಿ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಕೈ ಪೊರಕೆ ಹಿಡಿದು, ತಮಟೆ ಹೊಡೆಯುತ್ತಾ ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಾಷ್ಟ್ರೀಯ ಹೆದ್ದಾರಿ ತಡೆದು ಕೇಂದ್ರ ಸರ್ಕಾರ, ಆದಾಯ ತೆರಿಗೆ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಚಾ.ರಂ.ಶ್ರೀನಿವಾಸ ಗೌಡ ಮಾತನಾಡಿ, ಕೇಂದ್ರ ಸರ್ಕಾರ ಮತ್ತು ಆದಾಯ ತೆರಿಗೆ ಇಲಾಖೆ ಪಾನ್ ಕಾರ್ಡ್‌ಗೆ ಆಧಾರ್ ಜೋಡಣೆ ಮಾಡಲು 1 ಸಾವಿರ ರೂ ದಂಡ ಹಾಕುತ್ತಿದೆ. ಇದು ಅತ್ಯಂತ ಖಂಡನೀಯವಾದದ್ದು ಎಂದರು.

ದೇಶದಲ್ಲಿ ಬಡಜನರಿದ್ದು, ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕಾರ್ಮಿಕರು ಇದ್ದಾರೆ. ಇವರು ಎಲ್ಲಿಂದ ಹಣ ತಂದು ಕಟ್ಟಬೇಕು? ಆಹಾರ ಪದಾರ್ಥಗಳು, ಗ್ಯಾಸ್ ಸಿಲಿಂಡರ್, ಪೆಟ್ರೋಲ್ ಬೆಲೆ ಹೆಚ್ಚಳ, ಇದೀಗ ಪಾನ್‌ಕಾರ್ಡ್‌ಗೆ ಆಧಾರ್ ಜೋಡಣೆ ಮಾಡಲು ಜನಸಾಮಾನ್ಯರಿಗೆ 1 ಸಾವಿರ ದಂಡು ಹಾಕುವುದು ಸರಿಯಲ್ಲ. ಇಂತಹ ಜನ ವಿರೋಧಿ ನೀತಿಯನ್ನು ಕೂಡಲೇ ಕೈ ಬಿಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ, ದೇಶಾದ್ಯಂತ ಜನಾಂದೋಲನ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಚಾ.ವೆಂ.ರಾಜ್‌ಗೋಪಾಲ್, ನಿಜಧ್ವನಿ ಗೋವಿಂದರಾಜು, ಕುಂಡಕ್ಕೆರೆ ಚಾ.ಸಿ. ಸೋಮನಾಯಕ, ಚಾ.ರಾ.ಕುಮಾರ್, ಚಾ.ಹ.ಶಿವರಾಜ್, ಲಿಂಗರಾಜು, ಚಾ.ಹ.ರಾಮು, ಮೂರ್ತಿ, ಪಣ್ಯದಹುಂಡಿ ರಾಜು, ಚಾ.ಸಿ.ಸಿದ್ದರಾಜು, ಧನಂಜಯ್, ಶಿವಶಂಕರನಾಯಕ, ತಾಂಡವಮೂರ್ತಿ, ನಂಜುಂಡಸ್ವಾಮಿ, ಕೃಷ್ಣಯ್ಯ ಇತರರು ಭಾಗವಹಿಸಿದ್ದರು.

ನಿಂತಿದ್ದ ಲಾರಿಗೆ ಕಾರು ಡಿಕ್ಕಿ: ವಕೀಲನಿಗೆ ಗಂಭೀರ ಗಾಯ



ಬೇಗೂರು, ಮಾ.29– ರಾಷ್ಟ್ರೀಯ ಹೆದ್ದಾರಿಯ ತಗ್ಗಲ್ಲೂರು ಗೇಟ್ ಬಳಿ ರಸ್ತೆಬದಿ ನಿಂತಿದ್ದ ಲಾರಿಗೆ ಹಿಂಬದಿಯಿಂದ ಮಾರುತಿ ಆಲ್ಟೊ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರು ಚಾಲನೆ ಮಾಡುತ್ತಿದ್ದ ವಕೀಲ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬುಧವಾರ ಸಂಜೆ ಸಂಭವಿಸಿದೆ.

ಗುಂಡ್ಲುಪೇಟೆ ತಾಲೂಕಿನ ಶಿವಪುರ ಗ್ರಾಮದ ನಿವಾಸಿ ವಕೀಲ ಮಂಜು ಅಪಘಾತದಲ್ಲಿ ಗಾಯಗೊಂಡವರಾಗಿದ್ದು, ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತದ ವಿಷಯ ತಿಳಿಯುತ್ತಿದ್ದಂತೆಯೇ ಪೊಲೀಸರು ಸ್ಥಳಕ್ಕೆ ತೆರಳಿ ಗಾಯಾಳುವನ್ನು ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಿಸಿದ್ದಾರೆ.

ವಿಧಾನಸಭಾ ಚುನಾವಣೆ: ಶಸ್ತ್ರಾಸ್ತ್ರ ಠೇವಣಿಗೆ ಜಿಲ್ಲಾಧಿಕಾರಿ ಆದೇಶ

ಚಾಮರಾಜನಗರ, ಮಾ.29– ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಅಧಿಕೃತವಾಗಿ ಶಸ್ತ್ರಾಸ್ತ್ರ (ಬಂದೂಕು) ಪರವಾನಗಿ ಹೊಂದಿರುವ ಪರವಾನಗಿದಾರರನ್ನು ಗುರುತಿಸಿ ಸದರಿಯವರಿಗೆ ನೋಟಿಸ್ ಜಾರಿ ಮಾಡಿ ಪರವಾನಗಿ ಹೊಂದಿರುವ ಆಯುಧಗಳನ್ನು (ಬಂದೂಕು) ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗುವವರೆಗೂ ಸಂಬಂಧಪಟ್ಟ ಪೊಲೀಸ್ ಠಾಣೆಗಳ ವಶಕ್ಕೆ ಕೂಡಲೇ ಪಡೆಯುವಂತೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಆದೇಶಿಸಿದ್ದಾರೆ.

ವಿಧಾನಸಭಾ ಸಾರ್ವತ್ರಿಕ ಚುನಾವಣೆ ಘೋಷಣೆಯಾಗಿದ್ದು ಮಾರ್ಚ್ 29ರಿಂದ ಮೇ 15ರವರೆಗೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಚುನಾವಣೆ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರು ಪರವಾನಗಿ ಪಡೆದು ಹೊಂದಿರುವ ಶಸ್ತ್ರಾಸ್ತ್ರಗಳನ್ನು (ಬಂದೂಕು) ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಠೇವಣಿ ಮಾಡುವ ಸಂಬಂಧ ಸ್ಕ್ರೀನಿಂಗ್ ಕಮಿಟಿ ರಚಿಸಲಾಗಿದೆ. ಈ ಕಮಿಟಿ ಅಧಿಕೃತವಾಗಿ ಶಸ್ತ್ರಾಸ್ತ್ರ (ಬಂದೂಕು) ಪರವಾನಗಿ ಹೊಂದಿರುವ ಪರವಾನಗಿದಾರರನ್ನು ಗುರುತಿಸಿ ಸದರಿಯವರಿಗೆ ನೋಟಿಸ್ ಜಾರಿ ಮಾಡಿ ಪರವಾನಗಿ ಹೊಂದಿರುವ ಆಯುಧಗಳನ್ನು (ಬಂದೂಕು) ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗುವವರೆಗೂ ಸಂಬಂಧಪಟ್ಟ ಪೊಲೀಸ್ ಠಾಣಾಗಳ ವಶಕ್ಕೆ ಕೂಡಲೇ ಪಡೆಯುವಂತೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ನಾಳೆ ಹನೂರಿನಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಸಮಾವೇಶ

ಚಾಮರಾಜನಗರ, ಮಾ. 29– ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ವತಿಯಿಂದ ಮಾ. 31ರಂದು ಹನೂರಿನಲ್ಲಿ ಹಿಂದುಳಿದ ವರ್ಗಗಳ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಮೋರ್ಚಾದ ಜಿಲ್ಲಾಧ್ಯಕ್ಷ ನಟರಾಜೇಗೌಡ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 11 ಕ್ಕೆ ಹನೂರಿನ ಜಿ.ವಿ.ಗೌಡ ಕಾಲೇಜು ಪಕ್ಕದಲ್ಲಿ ಸಮಾವೇಶ ನಡೆಯಲಿದೆ. ಸಮಾವೇಶದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ನೆ.ಲ.ನರೇಂದ್ರಬಾಬು, ರಾಜ್ಯ ಸಹ ಜಿಲ್ಲಾ ಉಸ್ತುವಾರಿ ಅಣ್ಣಾಮಲೈ, ಸಂಸದ ಮೋಹನ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ವಿಧಾನಸಭಾ ಚುನಾವಣೆ ಹಿನ್ನೆಲೆ: ಮೈಸೂರಲ್ಲಿ ಮತ್ತೆ ಐವರು ರೌಡಿಶೀಟರ್‌ಗಳು ಗಡಿಪಾರು

ಮೈಸೂರು, ಮಾ.29–ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಐವರು ರೌಡಿಶೀಟರ್‌ಗಳು ಹಾಗೂ ಕ್ರಿಮಿನಲ್ ಹಿನ್ನೆಲೆ ಉಳ್ಳವರನ್ನು ಗಡಿಪಾರು ಮಾಡಿ ಮೈಸೂರು ನಗರದ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳೂ ಆದ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಆದೇಶ ಹೊರಡಿಸಿದ್ದಾರೆ.

ಮೈಸೂರಿನ ಜೆ.ಪಿ.ನಗರ ನಿವಾಸಿ ಯಶವಂತ್ ಅಲಿಯಾಸ್ ಯಶು ಅಲಿಯಾಸ್ ಮಿಕ್ಕಿ, ಬೆಲವತ್ತ ಒಂದನೇ ಹಂತದ ಸುಬಾನ್, ದಿವಾನ್ಸ್ ರಸ್ತೆ ಮೂರನೇ ಮೇನ್‌ನ ಕೃಷ್ಣ ಎನ್. ಅಲಿಯಾಸ್ ಕಿಟ್ಟಿ ಅಲಿಯಾಸ್ ಜೀವನ್‌ಗೌಡ, ರಾಜೀವ್ ನಗರದ ಸಯ್ಯದ್ ಅಯೂಬ್ ಅಲಿಯಾಸ್ ಬಡ್ಡ ಮತ್ತು ಮಹಮ್ಮದ್ ಸೇಠ್ ಬ್ಲಾಕ್‌ನ ತೌಸಿಫ್ ಖಾನ್ ಗಡಿ ಪಾರಾದವರು.

ಜೆ.ಪಿ.ನಗರ ನಿವಾಸಿ ಯಶವಂತ್ ಅಲಿಯಾಸ್ ಯಶು ಅಲಿಯಾಸ್ ಮಿಕ್ಕಿ ವಿರುದ್ಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿದೆ. ಈತನ ವಿರುದ್ಧ ಮೂರು ಪ್ರಕರಣಗಳು ದಾಖಲಾಗಿ ವಿಚಾರಣೆ ಹಂತದಲ್ಲಿದೆ. ಈತ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸಿ ಕಾನೂನು–ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ಪ್ರವೃತ್ತಿಯುಳ್ಳವನಾದ್ದರಿಂದ ಈತನನ್ನು ನಾಲ್ಕು ತಿಂಗಳ ಅವಧಿಗೆ ಶಿವಮೊಗ್ಗ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ.

ಬೆಲವತ್ತ ನಿವಾಸಿ ಸುಬಾನ್ ವಿರುದ್ಧ ನರಸಿಂಹರಾಜ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿದೆ. ನರಸಿಂಹರಾಜ ಮತ್ತು



ಮಂಡಿ ಠಾಣೆಗಳಲ್ಲಿ ಈತನ ವಿರುದ್ಧ 8 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದರೂ ಕೂಡ ಕಾನೂನಿನ ಭಯವಿಲ್ಲದೆ ಸತತವಾಗಿ ಈತ ಅಕ್ರಮ ಕೃತ್ಯಗಳನ್ನು ಮುಂದುವರೆಸುತ್ತಿರುವುದರಿಂದ ನಾಲ್ಕು ತಿಂಗಳ ಅವಧಿಗೆ ಈತನನ್ನು ಚಿಕ್ಕಬಳ್ಳಾಪುರ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ.

ದಿವಾನ್ಸ್ ರಸ್ತೆ ನಿವಾಸಿ ಕೃಷ್ಣ ಎನ್. ಅಲಿಯಾಸ್ ಕಿಟ್ಟಿ ಅಲಿಯಾಸ್ ಜೀವನ್‌ಗೌಡ ವಿರುದ್ಧ ಮೈಸೂರಿನ ವಿವಿಧ ಠಾಣೆಗಳಲ್ಲಿ ಸುಮಾರು 7 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದರೂ ಕೂಡ ಈತ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುವ ರೀತಿಯಲ್ಲಿ ತನ್ನ ಅಕ್ರಮ ಕೃತ್ಯಗಳನ್ನು ಮುಂದುವರೆಸುತ್ತಿರುವುದರಿಂದ ಈತನನ್ನು 5 ತಿಂಗಳ ಅವಧಿಗೆ ದಾವಣಗೆರೆ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ. ರಾಜೀವ್‌ನಗರ ಎರಡನೇ ಹಂತ ನಿವಾಸಿ ಸಯ್ಯದ್ ಅಯೂಬ್ ಅಲಿಯಾಸ್ ಬಡ್ಡ ವಿರುದ್ಧ ಮೈಸೂರು ನಗರ ವಿವಿಧ ಜಿಲ್ಲೆಗಳಲ್ಲಿ ಸುಮಾರು 14 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದರೂ ತನ್ನ ಅಕ್ರಮ ಕೃತ್ಯಗಳನ್ನು ಮುಂದುವರೆಸುತ್ತಿರುವುದರಿಂದ ಈತನನ್ನು 5 ತಿಂಗಳ ಅವಧಿಗೆ ಚಿಕ್ಕಮಗಳೂರು ಜಿಲ್ಲೆಗೆ ಗಡಿಪಾರು ಮಾಡಲಾಗಿದೆ.

ಮಹಮ್ಮದ್ ಸೇಠ್ ಬ್ಲಾಕ್ ನಿವಾಸಿ ತೌಸಿಫ್ ಖಾನ್ ಅಲಿಯಾಸ್ ಡಾನ್ ವಿರುದ್ಧ ಮೈಸೂರಿನ ವಿವಿಧ ಠಾಣೆಗಳಲ್ಲಿ 8 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದರೂ ಕೂಡ ಈತ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸಿ ಶಾಂತಿ ಮತ್ತು ನೆಮ್ಮದಿಗೆ ಭಂಗ ಉಂಟು ಮಾಡುವ ಪ್ರವೃತ್ತಿ ಉಳ್ಳವನಾದ್ದರಿಂದ ಈತನನ್ನು 5 ತಿಂಗಳ ಅವಧಿಗೆ ಚಿಕ್ಕಬಳ್ಳಾಪುರ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ.

ಇನ್ನೂ ಮುಂದೆ ಮೈಸೂರು ನಗರದಲ್ಲಿ ಕಾನೂನು–ಸುವ್ಯವಸ್ಥೆಯನ್ನು ಹಾಳುಗೆಡವಿ ಸಾರ್ವಜನಿಕರಲ್ಲಿ ಭಯದ ವಾತಾವರಣವನ್ನು ಉಂಟು ಮಾಡುವಂತಹ ಮಾಹಿತಿ ತಿಳಿದು ಬಂದಲ್ಲಿ ಅಂತಹ ರೌಡಿಗಳನ್ನೂ ಕೂಡ ಗಡಿಪಾರು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಿರುವುದಾಗಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಜೋಸ್ ಆಲುಕ್ಕಾಸ್ ಪ್ಯಾನ್ ಇಂಡಿಯಾ ಬ್ರಾಂಡ್ ಅಂಬಾಸಿಡರ್ ಆಗಿ ನಟ ಆರ್.ಮಾಧವನ್



ಮುಂಬೈ, ಮಾ. 29– ದೇಶದ ಮುಂಚೂಣಿ ಆಭರಣ ಸಂಸ್ಥೆಯಾಗಿ ಬೆಳೆದಿರುವ ಜೋಸ್ ಆಲುಕ್ಕಾಸ್‌ನ ಪ್ಯಾನ್ ಇಂಡಿಯಾ ಬ್ರಾಂಡ್ ಅಂಬಾಸಿಡರ್ ಆಗಿ ದಕ್ಷಿಣ ಭಾರತದ ಪ್ರಸಿದ್ಧ ನಟ ಆರ್.ಮಾಧವನ್ ಈ ಸಂಸ್ಥೆಯ ಜತೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ದಕ್ಷಿಣದ ಜನಪ್ರಿಯ ನಟಿ ಕೀರ್ತಿ ಸುರೇಶ್ ಅವರು ಈ ಪ್ರಮುಖ ಆಭರಣ ಸಮೂಹದ ಬ್ರಾಂಡ್ ಅಂಬಾಸಿಡರ್ ಆಗಿ ಮುಂದುವರಿಯಲಿದ್ದಾರೆ. ಇತ್ತೀಚೆಗೆ ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಈ ಇಬ್ಬರೂ ಸಿನಿಮಾ ಕಲಾವಿದರು ಒಪ್ಪಂದಕ್ಕೆ ಜೋಸ್ ಆಲುಕ್ಕಾಸ್ ಜತೆ ಸಹಿ ಹಾಕಿದ್ದಾರೆ. ಭಾರತದಾದ್ಯಂತ ನಮ್ಮ ಆಭರಣ ಸಮೂಹದ ಬ್ರಾಂಡ್ ಫಿಲಾಸಫಿಯನ್ನು ಪಸರಿಸುವ ಉದ್ದೇಶದಿಂದ ಮಾಧವನ್ ಅವರನ್ನು ಪ್ಯಾನ್ ಇಂಡಿಯಾ ಬ್ರಾಂಡ್ ಅಂಬಾಸಿಡರ್ ಆಗಿ ಆಯ್ಕೆ ಮಾಡಲಾಗಿದೆ ಎಂದು ಜೋಸ್ ಆಲುಕ್ಕಾಸ್ ಮೂಲಗಳು ತಿಳಿಸಿವೆ.

ಜೋಸ್ ಆಲುಕ್ಕಾಸ್ ಭಾರತದಾದ್ಯಂತ ದೊಡ್ಡ ಮಟ್ಟದಲ್ಲಿ ವಿಸ್ತರಣೆ ಯೋಜನೆಗಳನ್ನು ಹೊಂದಿದೆ. ದಕ್ಷಿಣ ಭಾರತದ ನಟ ಶ್ರೀಮತಿ ಕೀರ್ತಿ ಸುರೇಶ್ ಅವರು ಜೋಸ್ ಆಲುಕ್ಕಾಸ್‌ನ ಚಿನ್ನ ಮತ್ತು ವಜ್ರದ ಆಭರಣಗಳ ಬ್ರಾಂಡ್‌ಗಳನ್ನು ಪ್ರತಿನಿಧಿಸುವುದನ್ನು ಮುಂದುವರಿಸಲಿದ್ದಾರೆ ಎಂದು ಸಮೂಹದ ಅಧ್ಯಕ್ಷ ಜೋಸ್ ಅಲುಕ್ಕಾ ಹೇಳಿದರು.

ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೋಸ್ ಆಲುಕ್ಕಾಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಅಲುಕ್ಕಾ, ಪೌಲ್ ಜೆ ಅಲುಕ್ಕಾ ಮತ್ತು ಜಾನ್ ಅಲುಕ್ಕಾ ಅವರು ಈ ಒಪ್ಪಂದ ಪತ್ರವನ್ನು ಕಲಾವಿದರಿಬ್ಬರಿಗೆ ಹಸ್ತಾಂತರಿಸಿದರು.



ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾಜಿ ಅಧ್ಯಕ್ಷ ದಿ. ಶ್ರೀ ಆರ್.ವಾಸುದೇವಮೂರ್ತಿ ಅವರ 95ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪೂಜಾ ಭಾಗವತ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಪಿ.ಸರೋಜಮ್ಮ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್. ತಿಮ್ಮೇಗೌಡ, ಅಧ್ಯಾಪಕ ಹಾಗೂ ಅಧ್ಯಾಪಕೇತರರು ಪಾಲ್ಗೊಂಡಿದ್ದರು.



ಉತ್ತರಪ್ರದೇಶದ ವಾರಣಾಸಿಯ ಶ್ರೀ ಕಾಶಿ ಮಹಾಪೀಠದ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ಪ್ರಪ್ರಥಮ ಬಾರಿಗೆ ಮೈಸೂರಿಗೆ ಆಗಮಿಸಿ, ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ನಂತರ ಸದ್ಭಕ್ತರ ಮನೆಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮನೆಗೆ ಭೇಟಿ ನೀಡಿ, ಆಶೀರ್ವದಿಸಿದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ ಮಹದೇವಪ್ಪ, ಬಿಜೆಪಿ ಮುಖಂಡ ಕೇಬಲ್ ಮಹೇಶ್, ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಜನರಲ್ ಕೆ.ಎಸ್.ತಿಮ್ಮಯ್ಯ ಜನ್ಮದಿನಾಚರಣೆ



ಮೈಸೂರು, ಮಾ. 29– ಮೈಸೂರು ಕೊಡವ ಸಮಾಜ, ಕೊಡವ ಸಮಾಜ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಸಂಯುಕ್ತ ಆಶ್ರಯದಲ್ಲಿ ಮಾ.31 ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಕೊಡವ ಸಮಾಜದಲ್ಲಿ ಜನರಲ್ ಕೆ.ಎಸ್.ತಿಮ್ಮಯ್ಯ ಜನ್ಮದಿನ ಆಚರಿಸಲು ತೀರ್ಮಾನಿಸಲಾಗಿದೆ. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಎಂ.ಶಶಿ ಪೊನ್ನಪ್ಪ, ಕೊಡವ ಸಮಾಜ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಡ ಡಿ.ಮುತ್ತಪ್ಪ ಮತ್ತು ಶ್ರೀ ಕಾವೇರಿ ಕೊಡಗು ಮಹಿಳಾ ಸಮಾಜದ ಅಧ್ಯಕ್ಷೆ ಪೊಂಜಂಡ ಲೌಲಿ ಅಪ್ಪಯ್ಯ ಪ್ರಕಟಣೆಯಲ್ಲಿ ಕೋರಿದ್ದಾರೆ.



ಮೈಸೂರಿನ ಲಯನ್ಸ್ ಕ್ಲಬ್ ಆಫ್ ಮೈಸೂರು ಕ್ಲಾಸಿಕ್ ವತಿಯಿಂದ ಗೋಕುಲಂ ಮುಖ್ಯ ರಸ್ತೆಯಲ್ಲಿರುವ ಗಣಪತಿ ದೇವಸ್ಥಾನದ ಹತ್ತಿರ ರಸ್ತೆಬದಿ ವ್ಯಾಪಾರಸ್ಥರಿಗೆ ಉಚಿತವಾಗಿ ಕೊಡೆಗಳನ್ನು ವಿತರಿಸಲಾಯಿತು. ಚಿತ್ರದಲ್ಲಿ 317/ಎ ಜಿಲ್ಲಾ ರಾಜ್ಯಪಾಲರಾದ ಲಯನ್ ಶ್ರೀ ವಿದ್ಯಾ, ಅಧ್ಯಕ್ಷ ಲಯನ್ ಪ್ರಕಾಶ್, ಕಾರ್ಯದರ್ಶಿ ಲಯನ್ ಲೋಕೇಶ್, ಖಜಾಂಚಿ ಲಯನ್ ರಮೇಶ್, ಪ್ರಾಂತೀಯ ಅಧ್ಯಕ್ಷ ಲಯನ್ ಶಿವಪ್ಪ, ವಲಯ ಅಧ್ಯಕ್ಷ ಲಯನ್ ಮಂಜುನಾಥ್, ಮಾಜಿ ಅಧ್ಯಕ್ಷ ಲಯನ್ ಧರ್ಮರಾಜ್–ಯೋಗ, ಲಯನ್ ರವೀಂದ್ರನಾಥ್, ಲಯನ್ ವಿಶ್ವನಾಥ್, ಲಯನ್ ಡಿ.ರಾಮಚಂದ್ರ, ಲಯನ್ ಗಂಗಾಧರಪ್ಪ ಶ್ರೀಶೈಲ ಹಾಗೂ ಮುಂತಾದವರನ್ನು ಕಾಣಬಹುದು.

ಉಚಿತ ಆಧ್ಯಾತ್ಮಿಕ ಬೇಸಿಗೆ ಶಿಬಿರ

ಮೈಸೂರು, ಮಾ. 29–ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟಿ ಮೂವ್‌ಮೆಂಟ್ ಸಂಸ್ಥೆಯು 10 ರಿಂದ 17 ವರ್ಷ ವಯಸ್ಸಿನ (5ರಿಂದ 10ನೇ ತರಗತಿ) ಮಕ್ಕಳಿಗಾಗಿ ಏಪ್ರಿಲ್ 10 ರಿಂದ 30 ರವರೆಗೆ 21 ದಿನಗಳ ಆಧ್ಯಾತ್ಮಿಕ ಬೇಸಿಗೆ ಶಿಬಿರವನ್ನು ಆಯೋಜಿಸುತ್ತಿದೆ. ಈ ತರಗತಿಗಳನ್ನು ವಿದ್ಯಾರಣ್ಯಪುರಂ, ಮೈಸೂರು ಕೇಂದ್ರದಲ್ಲಿ ನಡೆಸಲಾಗುತ್ತದೆ. ಇದೇ ಮೊದಲ ಬಾರಿಗೆ ಚಿಕ್ಕ ಮಕ್ಕಳಿಗಾಗಿ ಈ ರೀತಿಯ ಆಧ್ಯಾತ್ಮಿಕ ಕಾರ್ಯಕ್ರಮ ಆಯೋಜಿಸಿದೆ. ಆಸಕ್ತರು ಈ ದೂ:9880565118, 8867145054 ಸಂಪರ್ಕಿಸಬಹುದು. ಏ. 5 ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ.



ಮೈಸೂರು ವಿಶ್ವವಿದ್ಯಾನಿಲಯ ನೂತನ ಕುಲಪತಿ ಪ್ರೊ ಎನ್.ಕೆ. ಲೋಕನಾಥ್ ಅವರನ್ನು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆಯ ವತಿಯಿಂದ ಅಭಿನಂದಿಸಲಾಯಿತು. ವೇದಿಕೆ ಅಧ್ಯಕ್ಷ ಜಿ. ಶಿವಶಂಕರ್, ಉಪಾಧ್ಯಕ್ಷ ಕೆ.ವಿವೇಕ್‌ಗೌಡ, ಪ್ರಧಾನ ಕಾರ್ಯದರ್ಶಿ ಪ್ರಸನ್ನಕುಮಾರ್ ಚಿಕ್ಕಳ್ಳಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಾದ ಕುಮಾರಸ್ವಾಮಿ ವಿರಕ್ತಮಠ, ವಿ.ನಿವೇದಿತಾ, ಗಿರಿದರ್ಶನ್, ಸಂಪತ್, ಸಾಗರ್ ಬಸವರಾಜು, ಎಂ.ಪಿ. ಮಾನಸ, ಪ್ರೇಮಾ, ಐಶ್ವರ್ಯ, ಕೆ.ಕಾವ್ಯ, ಚಲುವರಾಜು ಉಪಸ್ಥಿತರಿದ್ದರು.

ಹಿರಿಯ ನಟ ಶರತ್‌ಬಾಬು ಆರೋಗ್ಯ ಸ್ಥಿತಿ ಗಂಭೀರ; ಆಸ್ಪತ್ರೆಗೆ ದಾಖಲು



ಚೆನ್ನೈ, ಮಾ.29– ಬಹುಭಾಷಾ ನಟ ಶರತ್ ಬಾಬು ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಅನಾರೋಗ್ಯ ಹಿನ್ನೆಲೆಯಲ್ಲಿ ಚೆನ್ನೈನ ಖಾಸಗಿ ಆಸ್ಪತ್ರೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. 70 ವರ್ಷದ ಶರತ್ ಬಾಬು ಅವರು ಕನ್ನಡ ಸೇರಿದಂತೆ ಹಲವಾರು ಭಾಷೆಯಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ.

ಇನ್ನು ಈ ಕುರಿತು ತೆಲುಗು ನಟಿ ಕರಾಟೆ ಕಲ್ಯಾಣಿ ಅವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿಯನ್ನು ಶೇರ್ ಮಾಡಿಕೊಂಡಿದ್ದಾರೆ. ಜೊತೆಗೆ ನನ್ನ ನೆಚ್ಚಿನ ಹೀರೋ, ಬೇಗ ಗುಣಮುಖರಾಗಲಿ ಎಂದು ಬರೆದುಕೊಂಡಿದ್ದಾರೆ. ಸದ್ಯ ಹಿರಿಯ ನಟ ಶರತ್ ಬಾಬು ಅವರ ಆರೋಗ್ಯದ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಶರತ್ ಬಾಬು ಅನಾರೋಗ್ಯ ಸುದ್ದಿ ಕೇಳಿದ ಕೂಡಲೇ ಅಭಿಮಾನಿಗಳು ಬೇಗ ಗುಣಮುಖರಾಗಿ ಎಂದು ಪ್ರಾರ್ಥಿಸುತ್ತಿದ್ದಾರೆ.

ಹಲವು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದಾರೆ. ಕನ್ನಡ, ತೆಲುಗು, ತಮಿಳು, ಮಲಯಾಳಂ ಸೇರಿದಂತೆ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟ ಶರತ್ ಬಾಬು ಅವರು ಅಭಿನಯಿಸಿದ್ದಾರೆ.

ಜಾನಪದ, ಸಂಗೀತ, ಸಂಸ್ಕೃತ ವಿವಿಗಳ ಕಡೆಗಣನೆ

ಗಂಗೂಬಾಯಿ ಹಾನಗಲ್ ಸಂಗೀತ ವಿವಿ ಕುಲಪತಿ ಪ್ರೊ.ಸುರೇಶ್ ವಿ.ಬೆಟ್ಟಕೋಟೆ ವಿಷಾದ

ಮೈಸೂರು, ಮಾ.29(ಎಸ್‌ಪಿಎನ್)– ಜಾನಪದ, ಸಂಗೀತ ಹಾಗೂ ಸಂಸ್ಕೃತ ವಿವಿಗಳು ಅನುದಾನವಿಲ್ಲದೆ ಅಭಿವೃದ್ಧಿಯಿಂದ ವಂಚಿತವಾಗುತ್ತಿವೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಪ್ರದರ್ಶಕ ಕಲೆ ಮತ್ತು ಸಂಗೀತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸುರೇಶ್ ವಿ. ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಮತ್ತು ಬೆಂಗಳೂರು ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ 'ಗ್ರಂಥ ಸಂಪಾದನಶಾಸ್ತ್ರದ ಪರಿಚಯ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು.

ಪ್ರಾಚೀನ ಗ್ರಂಥಗಳನ್ನು ಓದುವ ಹವ್ಯಾಸ ಇಂದಿನ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತಿದೆ. ಇದರಿಂದ ಹಿಂದಿನ ಭೌಗೋಳಿಕ ಅಂಶಗಳ ತಿಳಿದುಕೊಳ್ಳುವುದರಾದರೂ ಹೇಗೆ ಎಂದು ಪ್ರಶ್ನಿಸಿದ ಕುಲಪತಿಗಳು, ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಕೌಟಿಲ್ಯ ಅರ್ಥಶಾಸ್ತ್ರ ಜಗತ್ತಿಗೆ ಪರಿಚಯವಾಯಿತು. ಇಂದಿಗೂ ಕೌಟಿಲ್ಯನ ಅರ್ಥಶಾಸ್ತ್ರದ ಮೂಲಕವೇ ನಮ್ಮ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ನೋಡುವ ಪ್ರವೃತ್ತಿ ಇದೆ ಎಂದು ಅಭಿಪ್ರಾಯಪಟ್ಟರು.



ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಂಗ್ರಹವಾಗಿರುವ ಅಮೂಲ್ಯ ಪುಸ್ತಕಗಳು, ಎಲ್ಲಾ ಗ್ರಂಥಾಲಯ, ಸಂಶೋಧಕರು, ಸಂಶೋಧನಾ ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುವಂತಾಗಬೇಕು. ಇದರಿಂದ ಮುಚ್ಚಿಟ್ಟಿರುವ ಅನೇಕ ಸತ್ಯ ಸಂಗತಿಗಳು ಹೊರಜಗತ್ತಿಗೆ ಪರಿಚಯವಾಗುತ್ತವೆ. ಈ ನಿಟ್ಟಿನಲ್ಲಿ ಇಂದಿರಾ ರಾಷ್ಟ್ರೀಯ ಕಲಾ ಕೇಂದ್ರ ಮತ್ತು ಪ್ರಾಚ್ಯವಿದ್ಯಾ ಸಂಶೋಧನಾಲಯ ಒಡಂಬಡಿಕೆ ಮಾಡಿಕೊಂಡಿರುವುದು ಶ್ಲಾಘನೀಯ ಎಂದರು.

ಹಳೆಯ ಕಾಲದ ಲಿಪಿಗಳು, ಶಾಸನಗಳು ಮತ್ತಷ್ಟು ಸಂಶೋಧನೆಯಾಗಬೇಕು. ಇದಕ್ಕೆ ಸಾಕಷ್ಟು ಅನುದಾನಬೇಕಾಗುತ್ತದೆ. ಸಂಪನ್ಮೂಲ ಕೊರತೆಯಾದರೆ, ಹಳೆಯ ಗ್ರಂಥಗಳ ಸಂರಕ್ಷಣೆ, ಸಂಶೋಧನೆ ಕುಂಠಿತವಾಗುತ್ತದೆ ಎಂದ ಅವರು, ಪ್ರಸ್ತುತ ಕಾಲಘಟ್ಟದಲ್ಲಿ ಪ್ರತಿಯೊಬ್ಬರು ಶರವೇಗದ ಜೀವನಕ್ಕೆ ಮಾರು ಹೋಗುತ್ತಿದ್ದಾರೆ. ಈ ಜೀವನ ಶೈಲಿಗೆ ಮಾರುಹೋಗುವವರ ಬದುಕು, ಅಷ್ಟೇ ವೇಗದಲ್ಲಿ ಮಾಯವಾಗುತ್ತದೆ ಎಂದು ತಿಳಿಸಿದರು.

ಪ್ರಾಚೀನ ಕಲೆ, ಸಾಹಿತ್ಯ, ಗ್ರಂಥ ಮಾಲಿಕೆಗಳನ್ನು ಉಳಿಸಿಕೊಳ್ಳಲು ಸರ್ಕಾರ ಜಾನಪದ, ಸಂಗೀತ, ಸಂಸ್ಕೃತ ವಿವಿಗಳನ್ನು ಸ್ಥಾಪಿಸಿವೆ. ಇದಕ್ಕೆ ಸರ್ಕಾರವೇ ಸಹಾಯ ಧನ ನೀಡಿ, ಅಭಿವೃದ್ಧಿಪಡಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ–2020(ಎನ್‌ಇಪಿ) ಜಾರಿಗೊಳಿಸುವ ಸಂದರ್ಭದಲ್ಲಿ ಈ ವಿವಿಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುವುದು ಎಂದು ಸರ್ಕಾರ ಹೇಳಿತ್ತು. ಆ ಹೇಳಿಕೆ ಇಲ್ಲಿಯವರೆಗೂ ಕಾರ್ಯಗತವಾಗಿಲ್ಲ ಎಂದು ಬೇಸರ ಹೊರ ಹಾಕಿದರು.

ನಂತರ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿವೃತ್ತ ವಿದ್ವಾಂಸ ಡಾ.ಎಸ್.ಜಗನ್ನಾಥ ಅವರು 'ಗ್ರಂಥ ಸಂಪಾದನಶಾಸ್ತ್ರ' ವಿಷಯ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ, ಉಪನಿರ್ದೇಶಕ ಡಾ.ಸಿ.ಪಾರ್ವತಿ, ಐಜಿಎನ್‌ಸಿಎ ಸಂಯೋಜನಾ ಸಹಾಯಕಿ ಆರ್.ಸ್ವಪ್ನಾ, ಬೆಂಗಳೂರಿನ ಇಗ್ನೋ ಪ್ರಾದೇಶಿಕ ನಿರ್ದೇಶಕ ಡಿ.ಮಹೇಂದ್ರ ಉಪಸ್ಥಿತರಿದ್ದರು.

ಜೆಪಿಗೆ ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡಲು ಮನವಿ

ಮೈಸೂರು,ಮಾ.29(ಪಿಎಂ)– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ಅನ್ನು ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ (ಜೆಪಿ) ಅವರಿಗೆ ನೀಡಬೇಕೆಂದು ಬಿಜೆಪಿ ವರಿಷ್ಠರಲ್ಲಿ ಅವರ ಬೆಂಬಲಿಗರು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೆಂಬಲಿಗ ಡಿ.ಮಹೇಶ್ ನಾಯಕ್, ಎಸ್.ಜಯಪ್ರಕಾಶ್ ಅವರು ಹಲವು ಚುನಾವಣೆಗಳಲ್ಲಿ ಪಕ್ಷದ ವರಿಷ್ಠರ ಮಾತಿಗೆ ಬೆಲೆ ನೀಡಿ ಸ್ಪರ್ಧೆಗಿಳಿದಿಲ್ಲ. ಅವರು ಕಳೆದ ಮೂರು ದಶಕದಿಂದಲೂ ಅವಕಾಶ ವಂಚಿತರಾಗುತ್ತಿದ್ದಾರೆ. ಹೀಗಾಗಿ ಈ ಬಾರಿ ಟಿಕೆಟ್ ನೀಡಬೇಕೆಂದು ಕೋರಿದರು.

ಚಾಮರಾಜ ಕ್ಷೇತ್ರದ 19 ವಾರ್ಡ್‌ಗಳಲ್ಲಿಯೂ ಮತದಾರರ ಸಭೆ ನಡೆಸಿ ಜೆಪಿಯವರನ್ನು ಬೆಂಬಲಿಸಲು ತೀರ್ಮಾನಿಸಿದ್ದೇವೆ ಎಂದರು. ಬೆಂಬಲಿಗರಾದ ರಘು, ಧನಲಕ್ಷ್ಮೀ, ಲತಾ, ಮಂಜುಳಾ ಮತ್ತಿತರರು ಗೋಷ್ಠಿಯಲ್ಲಿದ್ದರು.

ಗ್ಯಾರಂಟಿ ಕಾರ್ಡ್, ಚಲಿಸುವ ಸರ್ಕಾರ ಅಡಿ ಮತದಾರರ ಮಾಹಿತಿ ಕಲೆ ಹಾಕಲು ಬ್ರೇಕ್

ಮೈಸೂರು, ಮಾ.29(ಎಂಕೆ)– ರಾಜ್ಯ ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದು, ರಾಜಕೀಯ ಪಕ್ಷಗಳು ಮತದಾರರನ್ನು ಸೆಳೆಯಲು ರೂಪಿಸಿದ್ದ ಉಚಿತ ಯೋಜನೆಗಳ ಪ್ರಚಾರಕ್ಕೆ ಕಡಿವಾಣ ಬಿದ್ದಂತಾಗಿದೆ.

ಕಾಂಗ್ರೆಸ್‌ನ ಗೃಹಜ್ಯೋತಿ, ಗೃಹಲಕ್ಷ್ಮಿ, ಉಚಿತ 10 ಕೆಜಿ ಅಕ್ಕಿ ಹಾಗೂ ಯುವನಿಧಿ ಗ್ಯಾರಂಟಿ ಯೋಜನೆಗಳ ಮಾಹಿತಿಯುಳ್ಳ ಕಾರ್ಡ್‌ಗಳನ್ನು ಮನೆ ಮನೆಗೆ ಹಂಚುವ ಮೂಲಕ ಮತದಾರರ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಸೇರಿ ಇನ್ನಿತರೆ ಮಾಹಿತಿ ಸಂಗ್ರಹಿಸುವ ಪ್ರಕ್ರಿಯೆಗೆ ಕಡಿವಾಣ ಬಿದ್ದಿದೆ. ಹಾಗೆಯೇ ಕೆ.ಆರ್. ಕ್ಷೇತ್ರದಲ್ಲಿ 'ಚಲಿಸುವ ಸರ್ಕಾರ' (ಸರ್ಕಾರದ ಕಾರ್ಯಕ್ರಮಗಳ ಮಾಹಿತಿಯುಳ್ಳ ವಾಹನ) ಕಾರ್ಯಕ್ರಮದ ಮೂಲಕ ಬಿಜೆಪಿ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳ ಮಾಹಿತಿ ನೀಡುವುದರ ಜೊತೆಗೆ ಮತದಾರರ ಮಾಹಿತಿಯನ್ನು ಪಡೆಯುವ ಕಾರ್ಯಕ್ರಮಕ್ಕೂ ಚುನಾವಣಾ ನೀತಿ ಸಂಹಿತೆ ಕಡಿವಾಣ ಹಾಕಿದೆ.





ಅನುಮತಿ ಕಡ್ಡಾಯ: ಚುನಾವಣಾ ನೀತಿ ಸಂಹಿತೆ ಅವಧಿಯಲ್ಲಿ ರಾಜಕೀಯ ಪಕ್ಷಗಳು ತಮ್ಮ ತಮ್ಮ ಉಚಿತ ಯೋಜನೆಗಳ ಮಾಹಿತಿಯುಳ್ಳ ಕಾರ್ಡ್‌ಗಳು, ಕರಪತ್ರಗಳು, ಬ್ಯಾನರ್, ಜಾಹಿರಾತು ಸೇರಿದಂತೆ ಎಲ್ಲಾ ಪ್ರಚಾರ ಸಾಮಗ್ರಿಗಳ ಬಳಕೆಗೆ ಕಡ್ಡಾಯವಾಗಿ ಸಂಬಂಧಪಟ್ಟ ಚುನಾವಣಾಧಿಕಾರಿಗಳಿಂದ ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಬೇಕು. ಅದರಲ್ಲೂ ಮತದಾರರ ಮಾಹಿತಿ ಸಂಗ್ರಹಿಸುವುದು, ಹಣ ಸೇರಿದಂತೆ ಇನ್ನಿತರೆ ವಸ್ತುಗಳನ್ನು ಹಂಚುವುದು ನೀತಿ ಸಂಹಿತೆಯ ಉಲ್ಲಂಘನೆಯಾಗುತ್ತದೆ. ಅನುಮತಿ ಪಡೆಯದೆ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದವರ ವಿರುದ್ಧ 'ಪ್ರಜಾ ಪ್ರತಿನಿಧಿ ಕಾಯ್ದೆ–1951(ಜನತಾ ಪ್ರಾತಿನಿಧ್ಯ ಅಧಿನಿಯಮ–1951)' ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆ ಸೇರಿದಂತೆ ವಿವಿಧ ಐಪಿಸಿ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲು ಅವಕಾಶವಿರುತ್ತದೆ ಎಂದು ಚುನಾವಣಾ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಇಪಿಎಫ್‌ಓದಿಂದ ನೇರ ನೇಮಕಾತಿ

ಮೈಸೂರು, ಮಾ.29–ಇಪಿಎಫ್‌ಓ, 2674 ಸೋಷಿಯಲ್ ಸೆಕ್ಯೂರಿಟಿ ಅಸಿಸ್ಟೆಂಟ್ ಹಾಗೂ 185 ಸ್ಟೆನೋಗ್ರಾಫರ್ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುತ್ತಿದೆ. ಆನ್‌ಲೈನ್‌ನಲ್ಲಿ ಏಪ್ರಿಲ್ 26ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್ ಅರ್ಜಿಗಳು ವೆಬ್‌ಸೈಟ್: www.epfindia.gov.in (miscellaneous>> Recruitments) ಮತ್ತು (http:||recruitment.nta. nic.in)ಲಭ್ಯವಿದೆ.

ಬೆಳದಿಂಗಳ ಸಂಗೀತ



ಮೈಸೂರು, ಮಾ. 29– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಮಠದಲ್ಲಿ ಏ. 6 ರಂದು ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–253ರ ಅಂಗವಾಗಿ ಪಂಡಿತ್ ಎಂ. ವೆಂಕಟೇಶ್ ಕುಮಾರ್ ಅವರಿಂದ ಗಾಯನವನ್ನು ಏರ್ಪಡಿಸಲಾಗಿದೆ.

ಇಂದಿನಿಂದ ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ರಾಮನವಮಿ ಪರಂಪರೆ ಸಂಗೀತೋತ್ಸವ

ಮೈಸೂರು, ಮಾ. 29– ಮೈಸೂರಿನ ಗಾನವಿಶಾರದ ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ ಮಾರ್ಚ್ 30 ರಂದು ಆರಂಭವಾಗಲಿದೆ. 11 ದಿನಗಳ ಈ ಉತ್ಸವವನ್ನು ಮಾರ್ಚ್ 30 ರಂದು ಸಂಜೆ 5.30ಕ್ಕೆ ಸಂಸ್ಥೆಯ ಅಧ್ಯಕ್ಷ ಆರ್. ಗುರು ಉದ್ಘಾಟಿಸುವರು. ಉದ್ಘಾಟನಾ ಸಂಗೀತಗೋಷ್ಠಿಯಲ್ಲಿ ವಿದ್ವಾನ್ **ಹರೀಶ್ ಪಾಂಡವ್** ಸ್ಯಾಕ್ಸೋಫೋನ್ ವಾದನವಿದೆ. ಮೃದಂಗದಲ್ಲಿ **ವಿದ್ವಾನ್ ಸುನೀಲ್ ಸುಬ್ರಹ್ಮಣ್ಯ** ಮತ್ತು ಘಟಂನಲ್ಲಿ **ವಿದ್ವಾನ್ ಶರತ್ ಕೌಶಿಕ್** ಅವರಿಗೆ ಸಾಥ್ ನೀಡಲಿದ್ದಾರೆ.

■ **ಮಾ.31:** ವಿದುಷಿ **ಐಶ್ವರ್ಯ ವಿದ್ಯಾ ರಘುನಾಥ್** ಅವರಿಂದ ಶಾಸ್ತ್ರೀಯ ಗಾಯನ. ವಯಲಿನ್‌ನಲ್ಲಿ **ವಿದುಷಿ ಅದಿತಿ ಕೃಷ್ಣಪ್ರಕಾಶ್**, ಮೃದಂಗದಲ್ಲಿ **ವಿದ್ವಾನ್ ಬಿ.ಎಸ್.ಪ್ರಶಾಂತ್** ಮತ್ತು ಘಟಂನಲ್ಲಿ **ವಿದ್ವಾನ್ ಎಸ್.ಮಂಜುನಾಥ್**.

■ **ಏ.1:** **ವಿದುಷಿ ಇಳ ಸಂಗೀತ ದಿಲೀಪ್** ಮತ್ತು **ವಿದ್ವಾನ್ ದಿಲೀಪ್ ಕೆಜೆ** ಅವರು ದ್ವಂದ್ವ ವಯಲಿನ್ ವಾದನ. ಮೃದಂಗದಲ್ಲಿ **ವಿದ್ವಾನ್ ಚಲುವರಾಜು**, ಘಟಂನಲ್ಲಿ ವಿದ್ವಾನ್ **ಎನ್.ಗುರುಮೂರ್ತಿ** ಮತ್ತು ಖಂಜರಿಯಲ್ಲಿ **ವಿದ್ವಾನ್ ಸುನಾದ್ ಅನೂರ್**.

■ **ಏ.2:** ಬೆಳಿಗ್ಗೆ 10 ಗಂಟೆಗೆ ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜ ಸ್ವಾಮಿಗಳ ಆರಾಧನೆ ರಾಮಮಂದಿರದ ಆವರಣದಲ್ಲಿ ನಡೆಯಲಿದೆ. ಹಿರಿಯ ಸಂಗೀತಗಾರರು ಮತ್ತು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಸಂತ ತ್ಯಾಗರಾಜರ ಪಂಚರತ್ನ ಕೀರ್ತನೆಗಳನ್ನು ಹಾಡುವುದರೊಂದಿಗೆ ಗೌರವ ಸಲ್ಲಿಸುವರು. ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ ಚೆನ್ನೈನ **ವಿದುಷಿ ಗಾಯತ್ರಿ ವೆಂಕಟ್ ರಾಘವನ್** ಅವರಿಂದ ಗಾಯನ. ವಯಲಿನ್‌ನಲ್ಲಿ **ವಿದ್ವಾನ್ ಮೈಸೂರು ಶ್ರೀಕಾಂತ್**, ಮೃದಂಗದಲ್ಲಿ **ವಿದ್ವಾನ್ ಬಿ.ಸಿ. ಮಂಜುನಾಥ್** ಮತ್ತು ಘಟಂನಲ್ಲಿ **ವಿದ್ವಾನ್ ಶ್ರೀನಿಧಿ**.

■ **ಏ.3:** ಚೆನ್ನೈನ **ವಿದ್ವಾನ್ ಸಂದೀಪ್ ನಾರಾಯಣ್** ಅವರು ಶಾಸ್ತ್ರೀಯ ಗಾಯನ ಕಛೇರಿ. ವಯಲಿನ್‌ನಲ್ಲಿ **ವಿದ್ವಾನ್ ಮಧುರ್ ಶ್ರೀನಿಧಿ**, ಮೃದಂಗದಲ್ಲಿ ತುಮಕೂರು ವಿದ್ವಾನ್ **ರವಿಶಂಕರ್**, ಘಟಂನಲ್ಲಿ **ವಿದ್ವಾನ್ ಶಮಿತ್ ಎಸ್.ಗೌಡ**.



■ **ಏ.4:** ಚೆನ್ನೈನ **ವಿದುಷಿ ಹಿರಣ್ಮಯಿ ಶ್ರೀನಿಧಿ** ಅವರು ಕರ್ನಾಟಕ ಶಾಸ್ತ್ರೀಯ ಗಾಯನ. ವಯಲಿನ್‌ನಲ್ಲಿ **ವಿದ್ವಾನ್ ಕೇಶವ್ ಮೋಹನ್ ಕುಮಾರ್**, ಮೃದಂಗದಲ್ಲಿ **ವಿದ್ವಾನ್ ಎ.ರಾದೇಶ್** ಮತ್ತು ಮೋರ್ಚಿಂಗ್‌ನಲ್ಲಿ **ವಿದುಷಿ ಭಾಗ್ಯಲಕ್ಷ್ಮೀ ಕೃಷ್ಣ**.

■ **ಏ.5:** **ವಿದ್ವಾನ್ ಡಾ.ವಿದ್ಯಾಭೂಷಣ** ಅವರ ಕರ್ನಾಟಕ ಶಾಸ್ತ್ರೀಯ ಗಾಯನ. ವಯಲಿನ್‌ನಲ್ಲಿ **ವಿದ್ವಾನ್ ಸುಮಂತ್ ಮಂಜುನಾಥ್**, ಮೃದಂಗದಲ್ಲಿ **ವಿದ್ವಾನ್ ಹೆಚ್ ಎಲ್. ಶಿವಶಂಕರಸ್ವಾಮಿ**, ಘಟಂನಲ್ಲಿ **ವಿದ್ವಾನ್ ರಘುನಂದನರಾವ್** ಮತ್ತು ತಬಲದಲ್ಲಿ **ವಿದ್ವಾನ್ ನಾಗರಾಜ್ ಎಂ.**



ಹರೀಶ್ ಪಾಂಡವ್ ಐಶ್ವರ್ಯ ದಿಲಿಪ್ ಮತ್ತು ಇಲಾ ಸಂಗೀತ ಗಾಯತ್ರಿ ಸಂದೀಪ್ ಹಿರಣ್ಮಯಿ



ವಿದ್ಯಾಭೂಷಣ ಸಮೀರರಾವ್ ಮಾನಸಿ ಪಟ್ಟಾಭಿರಾಮ್ ಎಂ.ನಾಗರಾಜ್ ಮತ್ತು ಡಾ. ಎಂ.ಮಂಜುನಾಥ್

■ **ಏ.6:** **ಪಂಡಿತ್ ಸಮೀರ್‌ರಾವ್** ಅವರು ಹಿಂದೂಸ್ತಾನಿ ಬಾನ್ಸುರಿ ವಾದನ. ತಬಲಾದಲ್ಲಿ **ಪಂಡಿತ್ ಆದರ್ಶ ಶಣೈ**.

■ **ಏ.7:** **ವಿದುಷಿ ಮಾನ್ಸಿ ಪ್ರಸಾದ್** ಕರ್ನಾಟಕ ಶಾಸ್ತ್ರೀಯ ಗಾಯನ. ವಯಲಿನ್‌ನಲ್ಲಿ **ವಿದುಷಿ ಅದಿತಿ ಕೃಷ್ಣ ಪ್ರಕಾಶ್**, ಮೃದಂಗದಲ್ಲಿ **ವಿದ್ವಾನ್ ಜಿ.ಎಸ್. ರಾಮಾನುಜಂ** ಮತ್ತು ಘಟಂನಲ್ಲಿ **ವಿದ್ವಾನ್ ವಿ.ಎಸ್.ರಮೇಶ್**.

■ **ಏ.8:** **ವಿದ್ವಾನ್ ಪಟ್ಟಾಭಿರಾಮ್ ಪಂಡಿತ್** ಅವರು ಗಾಯನ. ವಯಲಿನ್‌ನಲ್ಲಿ **ವಿದ್ವಾನ್ ಮಧುರ್ ಶ್ರೀನಿಧಿ**, ಮೃದಂಗದಲ್ಲಿ **ವಿದ್ವಾನ್ ಎಚ್.ಎಸ್. ಸುಧೀಂದ್ರ** ಮತ್ತು ಘಟಂನಲ್ಲಿ **ವಿದ್ವಾನ್ ರಘುನಂದನ್‌ರಾವ್**.

■ **ಏ.9:** ಶ್ರೀರಾಮ ಪಟ್ಟಾಭಿಷೇಕ ಉತ್ಸವನ್ನು ಬೆಳಿಗ್ಗೆ 11 ಗಂಟೆಗೆ ನಡೆಸಲಾಗುವುದು. ನಂತರ ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ನಡೆಯುವುದು.

■ **ಏ.9:** ಸಂಜೆ ಅಂತಿಮವಾಗಿ ಖ್ಯಾತ ಮೈಸೂರು ಸಹೋದರರಾದ **ವಿದ್ವಾನ್ ಮೈಸೂರು ಎಂ ನಾಗರಾಜ್** ಮತ್ತು **ಡಾ. ಮೈಸೂರು ಎಂ.ಮಂಜುನಾಥ್** ಅವರಿಂದ ದ್ವಂದ್ವ ವಯಲಿನ್ ವಾದನ. ಮೃದಂಗದಲ್ಲಿ **ವಿದ್ವಾನ್ ಶ್ರೀ ಮುಷ್ಣಂ ರಾಜಾರಾವ್** ಮತ್ತು ಘಟಂನಲ್ಲಿ **ವಿದ್ವಾನ್ ಗಿರಿಧರ ಉಡುಪ**. ಎಲ್ಲಾ ಸಂಗೀತ ಕಛೇರಿಗಳು ಸಂಜೆ 6.15ಕ್ಕೆ ಆರಂಭವಾಗಲಿವೆ ಇವುಗಳಿಗೆ ಪ್ರವೇಶ ಉಚಿತ.

ಜನ ಕೊಟ್ಟ ಅಧಿಕಾರವನ್ನು ಜನಸೇವೆಗಾಗಿ ಬಳಸಿದ್ದೇನೆ

ಶಾಸಕ ಎಂ.ಅಶ್ವಿನ್‌ಕುಮಾರ್



ತಿ.ನರಸೀಪುರ, ಮಾ.29– ಕಳೆದ 5 ವರ್ಷಗಳಲ್ಲಿ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿ, ಪಕ್ಷ ಸಂಘಟನೆಗೆ ನಿಷ್ಠೆಯಿಂದ ದುಡಿದಿದ್ದೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಶ್ರೀಆದಿಚುಂಚನಗಿರಿ ರಜತೋತ್ಸವ ಭವನದಲ್ಲಿ ಬುಧವಾರ ಜೆಡಿಎಸ್ ನೂತನ ರಾಜ್ಯ ಉಪಾಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಪ್ರಧಾನ ಕಾರ್ಯದರ್ಶಿ ವೈ.ಎಸ್.ರಾಮಸ್ವಾಮಿ, ಕಾರ್ಯದರ್ಶಿ ಆರ್.ಬಸವರಾಜು, ವಕ್ತಾರರಾದ ಎಂ.ಶಿವಪ್ರಸಾದ್ ಹಾಗೂ ತಾಯೂರು ಪ್ರಕಾಶ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಜನ ಕೊಟ್ಟ ಅಧಿಕಾರವನ್ನು ಜನಸೇವೆಗಾಗಿ ಬಳಸಿದ್ದೇನೆ ಎಂದರು.

ನನ್ನ ಜನಪರ ಅಭಿವೃದ್ಧಿ ಕಾರ್ಯಗಳನ್ನು ಪಕ್ಷದ ಮುಖಂಡರು, ಕಾರ್ಯಕರ್ತರು ಕ್ಷೇತ್ರದ ಪ್ರತಿಯೊಬ್ಬರಿಗೂ ತಿಳಿಸಬೇಕು. ಅದಕ್ಕಾಗಿ ವಿಶೇಷ ಪ್ರಚಾರದ ಅಗತ್ಯವಿಲ್ಲ. ಜೆಡಿಎಸ್‌ನ ಚುನಾವಣೆ ಪ್ರಣಾಳಿಕೆಯಾಗಿರುವ ಪಂಚರತ್ನ ಯೋಜನೆ ಸಾಮಾನ್ಯ ಜನರು ಬದುಕನ್ನು ಕಟ್ಟಿಕೊಳ್ಳಲು ಸ್ವಂತ ಸೂರು, ವಿದ್ಯಾಭ್ಯಾಸ ಹಾಗೂ ಉದ್ಯೋಗ ಕಲ್ಪಿಸುವ ಸಂವಿಧಾನದ ಆಶಯಗಳನ್ನು ಹೊಂದಿದೆ. ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು, ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡಲು ಕಾರ್ಯಕರ್ತರು ಚುನಾವಣೆಯನ್ನು ಸಮರ್ಥವಾಗಿ ಎದುರಿಸಬೇಕು. ಕ್ಷೇತ್ರದ ಜನರು ನನಗೆ ಮತ್ತೊಂದು ಅವಕಾಶ ಕೊಡುವಂತೆ ಮನವಿ ಮಾಡಿದರು.

ಜೆಡಿಎಸ್ ರಾಜ್ಯ ಘಟಕದ ನೂತನ ಉಪಾಧ್ಯಕ್ಷ ಎಸ್.ಎನ್.ಸಿದ್ದಾರ್ಥ ಮಾತನಾಡಿ, ಶಾಸಕ ಅಶ್ವಿನ್ ಕುಮಾರ್ ತಮ್ಮ ಅಧಿಕಾರವಧಿಯಲ್ಲಿ 700 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಈ ಹಿಂದೆ ಶಾಸಕರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪನವರು ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಆದರೂ ನರಸೀಪುರ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದೇನೆ ಎಂದು ಪುಕ್ಕಟೆ ಪ್ರಚಾರ ಪಡೆಯುತ್ತಿದ್ದಾರೆ. ಕಾಂಗ್ರೆಸ್ ಅವಧಿಯಲ್ಲಿ ಬಾಕಿ ಉಳಿದಿದ್ದ ಹಲವು ಕಾಮಗಾರಿಗಳು ಈಗ ಪೂರ್ಣಗೊಂಡಿವೆ. ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ ಎಂದು ಭವಿಷ್ಯ ನುಡಿದರು.

ಹಿರಿಯ ಮುಖಂಡ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಜೆಡಿಎಸ್ ಗೆಲುವಿಗೆ ಕಾರ್ಯಕರ್ತರೇ ಸಾರಥಿಯಾಗಬೇಕು. ಶಾಸಕ ಅಶ್ವಿನ್ ಕುಮಾರ್ ಸಾಮಾನ್ಯ ಜನರ ಕೈಗೆ ಸಿಗುವ ಮೂಲಕ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾರೆ. ಜೆಡಿಎಸ್ ಅಧಿಕಾರಕ್ಕೆ ಬಂದು ಕುಮಾರಸ್ವಾಮಿ ಮುಖ್ಯಮಂತ್ರಿಯಾದರೇ ಅಶ್ವಿನ್ ಕುಮಾರ್ ಸಚಿವರಾಗಿ ಕ್ಷೇತ್ರವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ, ಮರಿಸ್ವಾಮಿ, ಗ್ರಾಪಂ ಅಧ್ಯಕ್ಷ ಸಿದ್ದರಾಮೇಗೌಡನಪುರ ರವಿ, ಸದಸ್ಯರಾದ ಕೆ.ಎನ್.ಅಶೋಕ್, ರಾಜೇಶ್, ಟಿ.ಬೆಟ್ಟಹಳ್ಳಿ ನಂಜಮ್ಮಣಿ, ಮಾಜಿ ಅಧ್ಯಕ್ಷರಾದ ಮಹದೇವಯ್ಯ, ಬಿ.ಎಂ.ಶಿವಕುಮಾರ್, ಮಾಜಿ ಉಪಾಧ್ಯಕ್ಷ ಮಣಿಕಂಠ, ಮುಖಂಡರಾದ ಎಂ.ಕುಮಾರ್, ಎಂ.ಆರ್.ಶಿವಮೂರ್ತಿ, ಎಂ.ಕೆ.ಸಿದ್ದರಾಜು, ಎಲ್.ಉಮಾಪತಿ, ರಾಮಶೆಟ್ಟಿ, ಸತೀಶ್ ಕುಮಾರ್, ಗಣೇಶ್, ಕನ್ನಹಳ್ಳಿ ಮಹದೇವ, ಧರ್ಮರತ್ನ ಕುಮಾರ, ರಾಜಣ್ಣ, ಮರಿಸ್ವಾಮಿ, ಶಂಬುದೇವನಪುರ ರಮೇಶ, ತಿರುಮಕೂಡಲು ಜಯರಾಮು, ದ್ವಾರಕೀಶ್ ಇನ್ನಿತರರಿದ್ದರು.

ಬಿಜೆಪಿ ತೊರೆದು ಕೈ ಹಿಡಿದ ಓಬಿಸಿ ಮೋರ್ಚಾ ಪದಾಧಿಕಾರಿಗಳು



ನಂಜನಗೂಡು, ಮಾ.29– ನಗರದ ಪ್ರವಾಸಿ ಮಂದಿರದಲ್ಲಿ ಬಿಜೆಪಿ ಓಬಿಸಿ ಮೋರ್ಚಾ ಪದಾಧಿಕಾರಿಗಳು ಬಿಜೆಪಿ ತೊರೆದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ನಂಜನಗೂಡು ತಾಲೂಕು ಓಬಿಸಿ ಮೋರ್ಚಾ ಅಧ್ಯಕ್ಷ ನಾಗರಾಜು, ಉಪಾಧ್ಯಕ್ಷ ಶಿವಣ್ಣ, ನಂಜುಂಡಶೆಟ್ಟಿ, ಪ್ರಧಾನ ಕಾರ್ಯದರ್ಶಿ ನಾಗಶೆಟ್ಟಿ, ಶಿವು, ಅಂಕನಾಯಕ, ಮಹದೇವಸ್ವಾಮಿ, ಮಹೇಶ್, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಬಸವರಾಜು, ನಾರಾಯಣ್, ಬಸವರಾಜು, ರವಿಪ್ರಸಾದ್, ಮಲ್ಕುಂಡಿ ಗ್ರಾಮಸ್ಥರು ಮತ್ತು ಬಿಜೆಪಿ ಮುಖಂಡರು, ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದ ಬಾವುಟ ನೀಡಿ ಶಾಲು ಹಾಕುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ಕಾಂಗ್ರೆಸ್ ತತ್ವ ಸಿದ್ಧಾಂತ ಒಪ್ಪಿ ಹಾಗೂ ಧ್ರುವನಾರಾಯಣ ಸುಪುತ್ರ ದರ್ಶನ್‌ರನ್ನು ಬೆಂಬಲಿಸಲು ಬಿಜೆಪಿಯ 50ಕ್ಕೂ ಹೆಚ್ಚಿನ ಜನರು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡಿದ್ದಾರೆ. ಎಲ್ಲರಿಗೂ ಕಾಂಗ್ರೆಸ್ ಪಕ್ಷ ಸ್ವಾಗತ ಬಯಸುತ್ತದೆ ಎಂದರು.

ಕುಂತನಹಳ್ಳಿಯಲ್ಲಿ ಡೈರಿ ಮೇಲಂತಸ್ತಿನ ಕಟ್ಟಡ ಉದ್ಘಾಟನೆ



ತಿ.ನರಸೀಪುರ, ಮಾ.29– ಸಾಂಪ್ರದಾಯಿಕ ಕೃಷಿ ಪದ್ಧತಿ ನಂಬಿ ಸಾಲ ಮಾಡುವ ಬದಲು ರೈತರು ಹೈನುಗಾರಿಕೆ ಮತ್ತು ರೇಷ್ಮೆ ಕೃಷಿಯಲ್ಲಿ ತೊಡಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ಕುಂತನಹಳ್ಳಿಯಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಮೇಲಂತಸ್ತಿನ ಸಭಾಂಗಣದ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ಮನೆಯಲ್ಲೂ ಒಂದೊಂದು ಹಸು ಸಾಕುವ ಮೂಲಕ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದು ಹಾಲನ್ನು ಹಾಕಿ ಹಣ ಸಂಪಾದಿಸಲು ಮುಂದಾಗಬೇಕು ಎಂದು ತಿಳಿಸಿದರು.

ಮೈಮುಲ್ ಮಾಜಿ ನಿರ್ದೇಶಕ ಓಂಪ್ರಕಾಶ್ ಮಾತನಾಡಿ, ಗ್ರಾಮದಲ್ಲಿ ಹಾಲು ಉತ್ಪಾದನೆಗಿಂತ ಇತರೆ ಲಾಭದಾಯಕ ಕಸುಬಿನ ಮೇಲೆ ಜನರು ಗಮನ ಹರಿಸುತ್ತಿದ್ದಾರೆ. ಆದರೆ ಹೈನುಗಾರಿಕೆಯನ್ನೂ ಉಪ ಕಸುಬಾಗಿ ಮಾಡಿಕೊಂಡಲ್ಲಿ ಮತ್ತಷ್ಟು ಲಾಭ ಗಳಿಸಲು ಸಾಧ್ಯ. ಈ ನಿಟ್ಟಿನಲ್ಲಿ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡಬೇಕು. ಡೈರಿಯಲ್ಲಿ ಪ್ರತಿದಿನ 200 ಲೀಟರ್ ಮಾತ್ರ ಹಾಲು ಉತ್ಪಾದನೆಯಾಗುತ್ತಿದ್ದು, ಹಾಲು ಉತ್ಪಾದನೆ ಮತ್ತಷ್ಟು ಹೆಚ್ಚಾದಲ್ಲಿ ಸಹಕಾರ ಸಂಘ ಯಶಸ್ಸು ಗಳಿಸಲು ಸಾಧ್ಯ ಎಂದರು.

ಕುಂತನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸತ್ಯೇಂದ್ರ, ಉಪಾಧ್ಯಕ್ಷೆ ಸುಶೀಲಮ್ಮ, ವಿಸ್ತರಣಾಧಿಕಾರಿ ಆರ್.ಪ್ರಮೋದ್, ಗ್ರಾಪಂ ಅಧ್ಯಕ್ಷ ಕೆ.ಬಿ.ಜಯರಾಮೇಗೌಡ, ಕಾರ್ಯಕಾರಿ ಮಂಡಳಿ ಸದಸ್ಯರಾದ ಎಸ್.ರವಿ, ಈರೇಗೌಡ, ಶ್ರೀನಿವಾಸ, ಸುಶೀಲಮ್ಮ, ಮರಿಶೆಟ್ಟಿ ಪುಟ್ಟಸ್ವಾಮಿ ಶೆಟ್ಟಿ, ರಾಮಯ್ಯ, ಸಿಇಓ ಕೆಂಪಾಚಾರಿ ಸೇರಿದಂತೆ ಇತರರಿದ್ದರು.

ಕೆ.ಆರ್.ನಗರದಲ್ಲಿ ವೀರಶೈವ ಲಿಂಗಾಯತ ಮುಖಂಡರ ಸಭೆ



> ಪಟ್ಟಣದಲ್ಲಿ ನಿರ್ಮಿಸುತ್ತಿರುವ ಬಸವ ಭವನ ಕಾಮಗಾರಿಗಾಗಿ ಸಿದ್ದರಾಮಯ್ಯ ಅಧಿಕಾರವಧಿಯಲ್ಲಿ 50 ಲಕ್ಷ ರೂ. ಮಂಜೂರು ಮಾಡಿಸಲಾಗಿತ್ತು. ಮುಂಬರುವ ಚುನಾವಣೆಯಲ್ಲಿ ತಮ್ಮ ಆಶೀರ್ವಾದದಿಂದ ನಾನು ಶಾಸಕನಾದ ಬಳಿಕ ಭವನದ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟಿಸಲು ಶ್ರಮಿಸುತ್ತೇನೆ.
> –ಡಿ.ರವಿಶಂಕರ್, ಕಾಂಗ್ರೆಸ್ ಮುಖಂಡ.

ಕೆ.ಆರ್.ನಗರ, ಮಾ.29– ಸ್ಥಳೀಯ ಸಂಸ್ಥೆಗಳಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಜೆಡಿಎಸ್‌ಗಿಂತ ಹೆಚ್ಚಿನ ಅಧಿಕಾರ ನೀಡಿರುವ ಕಾಂಗ್ರೆಸ್ ಪಕ್ಷವನ್ನು ಮುಂಬರುವ ಚುನಾವಣೆಯಲ್ಲಿ ಬೆಂಬಲಿಸುವಂತೆ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಸಮುದಾಯಕ್ಕೆ ಮನವಿ ಮಾಡಿದರು.

ಪಟ್ಟಣದ ಶಿವಾನುಭವ ಕಲ್ಯಾಣ ಮಂಟಪದಲ್ಲಿ ನಡೆದ ಕಾಂಗ್ರೆಸ್ ಬೆಂಬಲಿತ ವೀರಶೈವ ಲಿಂಗಾಯತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು ಕಳೆದ 3 ಚುನಾವಣೆಗಳಲ್ಲೂ ಸಮಾಜದ ಬೆಂಬಲದಿಂದ ಚುನಾಯಿತರಾದ ಸಾ.ರಾ.ಮಹೇಶ್ ಲಿಂಗಾಯತರ ಅಭಿವೃದ್ಧಿ ಮಾಡುತ್ತೇನೆ ಎಂದು ನೀಡುತ್ತಿರುವ ಸುಳ್ಳು ಭರವಸೆಗೆ ಮಾನ್ಯತೆ ನೀಡಬಾರದು ಎಂದರು.

ಪಟ್ಟಣದ ತೋಪಮ್ಮನವರ ದೇವಾಲಯದ ಬಳಿ ಜ್ಞಾನಜ್ಯೋತಿ ಟ್ರಸ್ಟ್‌ಗೆ ಸುತ್ತೂರು ಶ್ರೀಗಳ ಸೂಚನೆ ಮೇರೆಗೆ ಬಿ.ಎಸ್.ಯಡಿಯೂರಪ್ಪ ಮಾರ್ಗದರ್ಶನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 15 ಗುಂಟೆ ನಿವೇಶನ ಮಂಜೂರು ಮಾಡಿದ್ದಾರೆ. ಇದನ್ನು ಶಾಸಕರು ತಮ್ಮ ಸಾಧನೆ ಎಂದು ಬಿಂಬಿಸುವುದರಲ್ಲಿ ಅರ್ಥವಿಲ್ಲ ಎಂದು ತಿಳಿಸಿದರು.

ಬಿ.ಎಸ್.ಯಡಿಯೂರಪ್ಪನವರಿಗೆ ಜೆಡಿಎಸ್ ವಚನಭ್ರಷ್ಟ ಮಾಡಿದ ನಂತರ ರಾಜ್ಯದ 223 ಕ್ಷೇತ್ರಗಳಲ್ಲೂ ಸಮಾಜ ಜೆಡಿಎಸ್ ಪಕ್ಷವನ್ನು ತಿರಸ್ಕರಿಸಿದರೂ, ನಂತರ ನಡೆದ 2 ಚುನಾವಣೆಯಲ್ಲೂ ಕೆ.ಆರ್.ನಗರ ಕ್ಷೇತ್ರದ ಸಮಾಜದ ಬಂಧುಗಳು ಶಾಸಕ ಸಾ.ರಾ.ಮಹೇಶ್ ಮೇಲೆ ನಂಬಿಕೆ ಇಟ್ಟು ಬೆಂಬಲ ನೀಡಿದ್ದೀರಿ. ಆದರೆ ಶಾಸಕರು ಸಮಾಜ ನಿರೀಕ್ಷೆ ಮಾಡಿದಂತೆ ಕೆಲಸ ಮಾಡುವಲ್ಲಿ ವಿಫಲಗೊಂಡಿದ್ದಾರೆ ಎಂದು ದೂರಿದರು.

ಕಳೆದ ಜಿಪಂ ಚುನಾವಣೆ ವೇಳೆ ನಾನು ಜೆಡಿಎಸ್ ಅಭ್ಯರ್ಥಿಯಾಗಿದ್ದು ಸರಿಯಲ್ಲ. ಆ ವೇಳೆ ಡಿ.ರವಿಶಂಕರ್ ತಾಳ್ಮೆಯಿಂದ ಇರುವಂತೆ ಹೇಳಿದರೂ ಕೇಳದ ನಾನು ಶಾಸಕ ಸಾ.ರಾ.ಮಹೇಶ್ ಮನೆಗೆ ಬಂದು ಪಕ್ಷಕ್ಕೆ ಆಹ್ವಾನಿಸಿದರು ಎಂಬ ಕಾರಣಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿ ತಪ್ಪು ಮಾಡಿದೆ. ಅಲ್ಲದೇ ಶಾಸಕರಿಂದ ಅವಮಾನಕ್ಕೊಳಗಾಗಿ ಕಪ್ಪಡಿ ಕ್ಷೇತ್ರಕ್ಕೆ ಹೋಗಿ ಸತ್ಯ ಮಾಡಬೇಕಾಗಿ ಬಂತು ಎಂದರು. ಕಾಂಗ್ರೆಸ್ ಎಲ್ಲಾ ಸಮುದಾಯದ ಪರವಾಗಿದ್ದು, ಸಮಾಜಕ್ಕೆ ಅಧಿಕಾರ ಮತ್ತು ಗೌರವ ನೀಡುತ್ತಾ ಬಂದಿದೆ. ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮತ್ತು ಪಕ್ಷದ ಅಭ್ಯರ್ಥಿ ಡಿ.ರವಿಶಂಕರ್ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳುವ ವ್ಯಕ್ತಿಗಳಾಗಿದ್ದಾರೆ. ಜತೆಗೆ ಜನಸಾಮಾನ್ಯರಿಗೆ ಸಿಗುವ ಶಾಸಕರಾಗಲಿದ್ದಾರೆ. ಆದ್ದರಿಂದ ಈ ಬಾರಿ ರವಿಶಂಕರ್‌ಗೆ ಬೆಂಬಲ ನೀಡಬೇಕು ಎಂದು ಕೋರಿದರು.

ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ರವಿಶಂಕರ್ ಪತ್ನಿ ಸುನೀತಾ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ವೀರಶೈವ ಮಹಾಸಭಾ ಅಧ್ಯಕ್ಷ ಕೆಂಪರಾಜು, ಯುವ ಘಟಕದ ಅಧ್ಯಕ್ಷ ಎಲ್.ಪಿ.ರವಿಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಬಿ.ನಟರಾಜು ಮಾತನಾಡಿದರು. ಈ ವೇಳೆ ಸೌತನಹಳ್ಳಿ, ಹಾಡ್ಯ, ಮಾಯಿಗೌಡನಹಳ್ಳಿ, ಭೇರ್ಯ, ಲಾಲನಹಳ್ಳಿ, ಲಾಳಂದೇವನಹಳ್ಳಿ, ವಡ್ಡರಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ಮುಖಂಡರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ವೀರಶೈವ ಲಿಂಗಾಯತ ಸಮುದಾಯದ ಮುಖಂಡರಾದ ವೀರಭದ್ರಪ್ಪ, ಎನ್.ಸಿ.ಪ್ರಸಾದ್, ಎಲ್.ಆರ್.ಮಹದೇವಪ್ಪ, ರಾಜು, ಶೇಖರ್, ಮಹದೇವ್, ಸಾಹುಕಾರ್ ರವಿಯಪ್ಪ, ಮಹದೇವ್, ಮಂಜುನಾಥ್, ಕೆ.ಟಿ.ಸುರೇಶ್, ಪಾಲಾಕ್ಷ, ಗಡ್ಡಮಹೇಶ್, ಉಮೇಶ್, ಸೋಮೇಶ್, ಸಿ.ವಿ.ಗುಡಿಜಗದೀಶ್, ಬೋಜರಾಜು, ಸಣ್ಣಪ್ಪ, ಚನ್ನಬಸಪ್ಪ, ಶಿವಕುಮಾರ್, ಚನ್ನವೀರಪ್ಪ, ನಟರಾಜು, ಪುಟ್ಟರಾಜು, ನಂದೀಶ್ ಸೇರಿದಂತೆ ಇತರರಿದ್ದರು.

ಮೀಸಲಾತಿ ಹೆಚ್ಚಳ: ಮಾದಿಗ ಸಮುದಾಯ ಸಂಭ್ರಮಾಚರಣೆ



ನಂಜನಗೂಡು, ಮಾ.29– ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಮಾದಿಗ ಸಮುದಾಯದ ಒಳ ಮೀಸಲಾತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಹೆಚ್ಚಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ.ಎಂ.ಶಿವಣ್ಣ ನೇತೃತ್ವದಲ್ಲಿ ಮಾದಿಗ ಸಮುದಾಯದ ಮುಖಂಡರು ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ, ರಾಜ್ಯದಲ್ಲಿ 101 ಜಾತಿಗಳಿದ್ದು ಎಡಗೈ ಸಮಾಜಕ್ಕೆ ಹೆಚ್ಚಿನ ಮೀಸಲಾತಿ ಜಾರಿಗೊಳಿಸುವ ಮೂಲಕ ಮುಖ್ಯಮಂತ್ರಿ ಬೊಮ್ಮಾಯಿ ತಮ್ಮ ದಿಟ್ಟ ನಿಲುವು ಪ್ರದರ್ಶಿಸಿದ್ದು, ಅವರನ್ನು ನಮ್ಮ ಸಮಾಜ ಅಭಿನಂದಿಸುತ್ತದೆ ಎಂದರು. ಕಳೆದ 30 ವರ್ಷಗಳಿಂದ ಸಮಾಜ ಒಳ ಮೀಸಲಾತಿಗಾಗಿ ಹೋರಾಟ ಮಾಡುತ್ತಿತ್ತು. 2004ರಲ್ಲಿ ಸರ್ಕಾರ ಸದಾಶಿವ ಆಯೋಗ ರಚನೆ ಮಾಡಿತು. ಆದರೆ ವರದಿ ಜಾರಿಗೊಳಿಸಿರಲಿಲ್ಲ. ಬಿಜೆಪಿ ವರಿಷ್ಠರು ಸದಾಶಿವ ಆಯೋಗದ ವರದಿ ಬದಲು ಒಳ ಮೀಸಲಾತಿ ನೀಡಲು ತೀರ್ಮಾನಿಸಿ ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಜಾರಿಗೊಳಿಸಿರುವುದು ಸಂತಸದ ವಿಚಾರ. ಒಳಮೀಸಲಾತಿಯಿಂದ ಸಮುದಾಯಕ್ಕೆ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅನುಕೂಲವಾಗಲಿದೆ ಎಂದರು.

ಈ ವೇಳೆ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಮಧುರಾಜ್, ನಗರಸಭಾ ಸದಸ್ಯರಾದ ವಿಜಯಲಕ್ಷ್ಮಿ, ಮಂಗಳಮ್ಮ, ದೇವು, ಮಹದೇವಪ್ರಸಾದ್, ಮುಖಂಡರಾದ ಮಹದೇವು, ಮಾಜಿ ಪುರಸಭಾ ಉಪಾಧ್ಯಕ್ಷ ದೇವರಾಜು, ರಾಜೇಶ್, ಶ್ರೀನಿವಾಸ್, ಪ್ರಸನ್ನ ಚಕ್ರವರ್ತಿ, ಕೃಷ್ಣಪ್ಪ, ನಂಜಪ್ಪ, ಆನಂದ್, ಪ್ರತಿಧ್ವನಿ ತ್ರಿನೇಶ್, ರೇವಣ್ಣ, ಚಂದ್ರು, ಸಿದ್ದರಾಜು ಸೇರಿದಂತೆ ಇನ್ನಿತರರಿದ್ದರು.

ತಂದೆ ಹಾದಿಯಲ್ಲೇ ಸಾಗುವೆ: ದರ್ಶನ್



ಮಲ್ಕುಂಡಿ, ಮಾ.29– ನನ್ನ ತಂದೆ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಹಾದಿಯಲ್ಲೇ ಸಾಗುವ ಮೂಲಕ ಕ್ಷೇತ್ರದ ಜನತೆಯ ಕಷ್ಟ ಸುಖಗಳಿಗೆ ಭಾಗಿಯಾಗುತ್ತೇನೆ ಎಂದು ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಮಲ್ಕುಂಡಿ, ಹುರ, ಸಿದ್ದೇಗೌಡನಹುಂಡಿ ಗ್ರಾಮಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ನನ್ನ ತಂದೆಯವರ ಅಕಾಲಿಕ ಮರಣದಿಂದ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ನನ್ನ ತಂದೆ ನನಗೆ ಯಾವತ್ತೂ ರಾಜಕೀಯ ಪಾಠ ಹೇಳಿಕೊಟ್ಟಿರಲಿಲ್ಲ. ಆದರೆ ಕ್ಷೇತ್ರದ ಜನರ ಒತ್ತಾಯದ ಮೇರೆಗೆ ನನಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದೆ. ನನ್ನ ತಂದೆ ಕ್ಷೇತ್ರದ ಜನರ ಅಪಾರ ಪ್ರೀತಿ, ವಿಶ್ವಾಸ ಗಳಿಸಿದ್ದಾರೆ. ಕ್ಷೇತ್ರದಲ್ಲಿ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳು ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ನನಗೆ ಆಶೀರ್ವಾದ ಮಾಡುವಂತೆ ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ಪುಟ್ಟಬುದ್ಧಿ, ಶಿವಣ್ಣ, ಚೆನ್ನಕೇಶವಮೂರ್ತಿ, ಶಿವಪ್ಪದೇವರು, ಶಿವಕುಮಾರ್, ಸತೀಶ್, ಮಹೇಶ್, ಮಣಿಕಂಠ, ರಾಜು, ನಾಗೇಶ್, ಅಭಿಶೇಕ್, ಪಾಪ, ಮಂಜು ಸೇರಿದಂತೆ ಇತರರಿದ್ದರು.



ತಿ.ನರಸೀಪುರ ತಾಲೂಕಿನ ತಲಕಾಡಿನ ಶ್ರೀಹಸ್ತಿಕೇರಿ ಮಠದಲ್ಲಿ ಲೋಕ ಕಲ್ಯಾಣಾರ್ಥ ಸರ್ಪಶಾಂತಿ ನವನಾಗ ಕವಚಮಂಡಲ ಶಾಂತಿ ಪೂಜೆ ನಡೆಯಿತು. ದೈವಜ್ಞರಾದ ಹೊನ್ನಪ್ಪಾಜಿ, ಮಠಾಧ್ಯಕ್ಷ ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ, ನವ ಕರ್ನಾಟಕ ನಿರ್ಮಾಣ ಸೇನೆ ರಾಜ್ಯಾಧ್ಯಕ್ಷ ಎಸ್.ಯತಿರಾಜ್ ನಾಯ್ಡು ಇತರರಿದ್ದರು.


ಇಂದು ರಾಮನವಮಿ ವಿಶೇಷ ಪೂಜೆ



ಚುಂಚನಕಟ್ಟೆ, ಮಾ.29– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ಮಾ.30 ರಂದು ರಾಮನವಮಿ ಪ್ರಯುಕ್ತ ಪುರಾಣ ಪ್ರಸಿದ್ಧ ಕೋದಂಡರಾಮ ದೇವಾಲಯದಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿದೆ. ಗ್ರಾಮದ ಬೀದಿಗಳಲ್ಲಿ ಉತ್ಸವ ಮೂರ್ತಿ ಮೆರವಣಿಗೆ ಸಾಗಲಿದೆ ಹಾಗೂ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ದೇವಾಲಯದ ಸಿಇಓ ರಘು ತಿಳಿಸಿದ್ದಾರೆ.

ಅಂಬೇಡ್ಕರ್ ಸೋಲಿಸಿದ ಕಾಂಗ್ರೆಸ್ ನಿಜವಾದ ದಲಿತ ವಿರೋಧಿ

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ



ಹೆಚ್.ಡಿ.ಕೋಟೆ, ಮಾ.29– ಬಿಜೆಪಿಯನ್ನು ದಲಿತ ಮತ್ತು ಅಂಬೇಡ್ಕರ್ ವಿರೋಧಿ ಪಕ್ಷ ಎಂದು ಹೇಳುತ್ತಾರೆಯೇ ಹೊರತು ಸಾಬೀತು ಮಾಡಲು ಸಾಧ್ಯವಾಗಿಲ್ಲ. ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸೋಲಿಸಿದ ಕಾಂಗ್ರೆಸ್ ಪಕ್ಷ ನಿಜವಾದ ದಲಿತ ವಿರೋಧಿಯಾಗಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಎಸ್‌ಸಿ ಮೋರ್ಚಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಲು ಕಾಂಗ್ರೆಸ್ ಸರ್ಕಾರ ಬಿಟ್ಟಿರಲಿಲ್ಲ. ಸಂವಿಧಾನವನ್ನು ಸಮರ್ಪಕವಾಗಿ ಜಾರಿ ಮಾಡಿ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದ್ದು ಬಿಜೆಪಿ ಪಕ್ಷ. ಡಬಲ್ ಇಂಜಿನ್ ಸರ್ಕಾರ ಜನರಿಗೆ ಏನೂ ಮಾಡಿಲ್ಲ ಎಂದು ಕಾಂಗ್ರೆಸ್ ಪಕ್ಷ ಹೇಳುತ್ತಾ ಬಂದಿದೆ. ಆದರೆ ಜನರನ್ನು ಲೂಟಿ ಮಾಡಿದ್ದು ಕಾಂಗ್ರೆಸ್ ಪಕ್ಷ. 60 ವರ್ಷಗಳ ಕಾಲ ಜನರ ಮೂಗಿಗೆ ತುಪ್ಪ ಸವರಿ, ಕಿವಿಯಲ್ಲಿ ಹೂ ಇಟ್ಟಿದ್ದೀರಾ. ಕಾಂಗ್ರೆಸ್ ಸಂಪೂರ್ಣ ಕೆಸರಿನಲ್ಲಿರುವ ಪಕ್ಷ. ನಾವು ಅನೇಕ ಜನಪರ ಕಾರ್ಯಕ್ರಮ ಕೊಟ್ಟಿದ್ದೇವೆ ಎಂದರು.

ಬಿಜೆಪಿ ಸರ್ಕಾರ ಜಾರಿಗೊಳಿಸಿರುವ ಜನಪರ ಕಾರ್ಯಗಳು ನಮ್ಮ ಕಣ್ಣಮುಂದಿವೆ ಎಂದ ಅವರು, ನಮ್ಮ ಪಕ್ಷ ಮೀಸಲಾತಿ ಹೆಚ್ಚಿಸಿ ದಲಿತರಿಗೆ ಅನುಕೂಲ ಮಾಡಿಕೊಟ್ಟಿದೆ. ದಲಿತರ ದೇವರನ್ನು ಸೋಲಿಸಿದ್ದು ಕಾಂಗ್ರೆಸ್ ಪಕ್ಷ. ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ್ ಹಾಗೂ ಮುನಿಯಪ್ಪ ಅವರನ್ನು ಸೋಲಿಸಿದ್ದು ಕಾಂಗ್ರೆಸ್‌ನ ಸಿದ್ದರಾಮಯ್ಯ. ಹಾಗಾಗಿ ಯಾವುದೇ ಕಾರಣಕ್ಕೂ ಕಾಂಗ್ರೆಸ್‌ಗೆ ಮತ ನೀಡಬೇಡಿ ಎಂದು ಮನವಿ ಮಾಡಿದರು.

ತಾಲೂಕು ಚುನಾವಣಾ ಪ್ರಭಾರಿ ಅಶ್ವಥ್ ನಾರಾಯಣ ಮಾತನಾಡಿ, ಅಸ್ಪೃಶ್ಯತೆ ಹೋಗಲಾಡಿಸಲು ಅಂಬೇಡ್ಕರ್ ಅವರು ತಮ್ಮ ಜೀವಿತಾವಧಿವರೆಗೆ ಹೋರಾಟ ಮಾಡಿದರು. ದಲಿತರಲ್ಲಿ ಸ್ವಾಭಿಮಾನ ತಂದವರು ಅಂಬೇಡ್ಕರ್. ಕಾಂಗ್ರೆಸ್ ಅಧಿಕಾರದಲ್ಲಿದ್ದ ಸಂದರ್ಭ ಮಲ ಹೊರುವ ಪದ್ಧತಿ ಇತ್ತು. ಅದನ್ನು ನಿರ್ಮೂಲನೆ ಮಾಡಿದ ಬಿ.ಬಸವಲಿಂಗಪ್ಪ ಅವರನ್ನು ಮಂತ್ರಿ ಮಂಡಲದಿಂದ ತೆಗೆದು ಹಾಕಿದ್ದು ಕಾಂಗ್ರೆಸ್ ಪಕ್ಷ. ಡಾ.ಬಿ.ಆರ್.ಅಂಬೇಡ್ಕರ್ ಅವರು ಕಾಂಗ್ರೆಸ್ ಉರಿಯುವ ಪಕ್ಷವೆಂದು ಈ ಹಿಂದೆಯೇ ಹೇಳಿದ್ದಾರೆ. ಹೀಗಾಗಿ ದಲಿತ ಸಮುದಾಯದವರು ಜಾಗೃತರಾಗಿ, ಅಂಬೇಡ್ಕರ್ ಅವರನ್ನು ಅನುಸರಿಸಬೇಕು. ಮೋದಿ ಅವರು ಪ್ರಧಾನಿಯಾದ ಬಳಿಕ ದಲಿತರಿಗೆ ಮೀಸಲಾತಿ ಹೆಚ್ಚಿಸಿದರು. ಹೀಗಾಗಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಡಿ ಎಂದು ಕರೆ ನೀಡಿದರು.

ಸಮಾವೇಶದಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಮೈ.ವಿ.ರವಿಶಂಕರ್, ಮಹಾದೇವಯ್ಯ, ಎಂ. ಅಪ್ಪಣ್ಣ, ಹೆಚ್.ವಿ.ಕೃಷ್ಣಸ್ವಾಮಿ, ಗುರುಸ್ವಾಮಿ, ಎಚ್.ಸಿ.ಲಕ್ಷ್ಮಣ್, ವೆಂಕಟಸ್ವಾಮಿ, ಮಲ್ಲಾಡಿ ನಾಗರಾಜು, ರಾಜು ಬಿಡಗಲು, ಉಡ ನಾಗರಾಜು, ಮಹಾದೇವಯ್ಯ, ಸೂರ್ಯನಾರಾಯಣ, ಅಶ್ವತ್ ನಾರಾಯಣ್, ನಂದೀಶ, ಗೋಪಾಲಸ್ವಾಮಿ, ಜವರಯ್ಯ, ಯೋಗೇಶ್, ಗಿರೀಶ್, ಸುನಂದರಾಜು, ಮೊತ್ತ ಬಸವರಾಜಪ್ಪ, ರಾಧಿಕಾ ಇದ್ದರು.

> ಚುನಾವಣೆಯಲ್ಲಿ ಮಹಿಳೆಯರ ಪಾತ್ರ ಶೇ.50 ರಷ್ಟಿದೆ. ಅದನ್ನು ಈ ಬಾರಿ ಬಿಜೆಪಿಗೆ ಮತ ಹಾಕುವ ಮೂಲಕ ಸಾಬೀತು ಮಾಡೋಣ. ಮೀಸಲಾತಿ ಹೆಚ್ಚಳ ಸೇರಿದಂತೆ ಎಸ್‌ಸಿ–ಎಸ್ಟಿ ಸಮುದಾಯ ನೆಮ್ಮದಿಯಾಗಿ ಜೀವನ ಮಾಡಲು ಅವಕಾಶ ಕಲ್ಪಿಸಿದ ಬಿಜೆಪಿಗೆ ಮತ ನೀಡಿ. ಪ್ರಧಾನಿ ಮೋದಿ ಅವರು ವಿಶ್ರಾಂತಿ ಇಲ್ಲದೇ ಕೆಲಸ ಮಾಡುವ ಮೂಲಕ ಇಡೀ ವಿಶ್ವವೇ ಭಾರತದತ್ತ ನೋಡುವಂತೆ ಮಾಡಿದ್ದಾರೆ. ಈ ಚುನಾವಣೆಯಲ್ಲಿ ಸಿದ್ದರಾಮಯ್ಯನವರು ಡಿ.ಕೆ.ಶಿವಕುಮಾರ್ ಸೋಲಿಸಬೇಕು ಎಂದು, ಡಿ.ಕೆ.ಶಿವಕುಮಾರ್ ಸಿದ್ದರಾಮಯ್ಯನವರನ್ನು ಸೋಲಿಸಲು ಹವಣಿಸುತ್ತಿದ್ದಾರೆ. ಹಾಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಹೋಗಲಾಡಿಸಲು ಕ್ಷೇತ್ರದಲ್ಲಿ ಬಿಜೆಪಿ ಶಾಸಕರನ್ನು ಆಯ್ಕೆ ಮಾಡಬೇಕು. ಅಪ್ಪ, ಮಕ್ಕಳ ಪಕ್ಷವಾಗಿರುವ ಜೆಡಿಎಸ್‌ನಿಂದ ರಾಜ್ಯದ ಅಭಿವೃದ್ಧಿ ಅಸಾಧ್ಯ. ರಾಜ್ಯ ಹಾಗೂ ಕ್ಷೇತ್ರದ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ.
> –ಮಂಗಳಾ ಸೋಮಶೇಖರ್, ಬಿಜೆಪಿ ಜಿಲ್ಲಾಧ್ಯಕ್ಷೆ.

ಮೇಕೆದಾಟು ಯೋಜನೆಗೆ ಮತ್ತೆ ತಮಿಳ್ನಾಡು ವಿರೋಧ



ಚೆನ್ನೈ: ಮೇಕೆದಾಟು ಜಲಾಶಯ ಯೋಜನೆಗೆ ವಿರೋಧಿಸುವುದನ್ನು ಮುಂದುವರಿಸುವುದಾಗಿ ಬುಧವಾರ ಪುನರುಚ್ಚರಿಸಿರುವ ತಮಿಳುನಾಡು ಸರ್ಕಾರ, ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟುವಿನಲ್ಲಿ ಕರ್ನಾಟಕ ಸರ್ಕಾರವು ಜಲಾಶಯ ನಿರ್ಮಿಸುವುದನ್ನು ತಡೆಯಲು ಕಾನೂನು ಕ್ರಮ ಸೇರಿದಂತೆ ಎಲ್ಲ ರೀತಿಯ ಅಗತ್ಯಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದೆ.

ಕಾವೇರಿ ನ್ಯಾಯಾಧೀಕರಣ ಮಂಡಳಿಯ ಅಂತಿಮ ಆದೇಶ ಹಾಗೂ ಸುಪ್ರೀಂ ಕೋರ್ಟಿನ ತೀರ್ಪನ್ನು ಉಲ್ಲಂಘಿಸಿ ಜಲಾಶಯ ನಿರ್ಮಾಣಕ್ಕೆ ಕರ್ನಾಟಕ ಮುಂದಾಗಿದೆ ಎಂದೂ ತಮಿಳುನಾಡು ಅಭಿಪ್ರಾಯಪಟ್ಟಿದೆ. ವಿಧಾನಸಭೆಯಲ್ಲಿ ಮಂಡಿಸಿದ ನೀತಿ ಟಿಪ್ಪಣಿಯಲ್ಲಿ ಜಲಸಂಪನ್ಮೂಲ ಇಲಾಖೆಯು, ಮೇಕೆದಾಟುವಿನಲ್ಲಿ 67.16 ಟಿಎಂಸಿ ಅಡಿ ಸಾಮರ್ಥ್ಯದ ಜಲಾಶಯ ನಿರ್ಮಿಸುವ ಪ್ರಸ್ತಾವನೆ ಕುರಿತು ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ತಮಿಳುನಾಡು ಸರ್ಕಾರವು ಕಾಲಕಾಲಕ್ಕೆ ತನ್ನ ತೀವ್ರ ಆಕ್ಷೇಪಣೆಗಳನ್ನು ತಿಳಿಸುತ್ತಾ ಬಂದಿದೆ ಎಂದು ತಿಳಿಸಿದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು (ಸಿಡಬ್ಲ್ಯುಎಂಎ) ಅಕ್ಟೋಬರ್ 29ರಂದು ನಡೆದ 17ನೇ ಸಭೆಯಲ್ಲಿ ಕರ್ನಾಟಕದ ಒತ್ತಾಯದ ಮೇರೆಗೆ ಅಜೆಂಡಾದಲ್ಲಿ ಸೇರಿಸಲಾದ ಮೇಕೆದಾಟು ಯೋಜನೆಯನ್ನು ಚರ್ಚಿಸುವ ನಿರ್ಧಾರವನ್ನು ಮುಂದೂಡಿದೆ. ಇದಕ್ಕೆ ತಮಿಳುನಾಡು ಸರ್ಕಾರದ ಒತ್ತಾಯವೇ ಕಾರಣ ಎಂದು ಜಲಸಂಪನ್ಮೂಲ ಸಚಿವ ದುರೈ ಮುರುಗನ್ ಪ್ರತಿಪಾದಿಸಿದ್ದಾರೆ.

ಕರ್ನಾಟಕವು ಈ ಯೋಜನೆಯನ್ನು ಮುಂದುವರಿಸದಂತೆ ತಮಿಳುನಾಡು ಸರ್ಕಾರವು ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ವಿವರವಾಗಿ ಮಾತನಾಡಿದ ಅವರು, ಈ ಕುರಿತು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಬರೆದ ಪತ್ರಗಳ ಬಗ್ಗೆಯೂ ಮಾಹಿತಿ ನೀಡಿದರು. ಈ ಕುರಿತ ನಿರ್ಣಯವು ತಮಿಳುನಾಡು ವಿಧಾನಸಭೆಯಲ್ಲಿ ಅಂಗೀಕಾರವಾಗಿದೆ. ಕಾವೇರಿ ನೀರು ಹಂಚಿಕೆಯಲ್ಲಿ ನ್ಯಾಯಾಧೀಕರಣದ ಆದೇಶಗಳನ್ನು ಜಾರಿಗೊಳಿಸಲು ಮಾತ್ರ ಏಜೆನ್ಸಿಯನ್ನು ರಚಿಸಲಾಗಿದೆ. ಆದರೆ, ಮೇಕೆದಾಟು ಯೋಜನೆಯನ್ನು ಸಿಡಬ್ಲ್ಯುಎಂಎ ಚರ್ಚೆಗೆ ತೆಗೆದುಕೊಂಡಿರುವುದು ಸುಪ್ರೀಂಕೋರ್ಟ್ ತೀರ್ಪಿನ ಉಲ್ಲಂಘನೆಯಾಗುತ್ತದೆ ಎಂದು ಮುರುಗನ್ ಹೇಳಿದ್ದಾರೆ.

ಬಳ್ಳಾರಿಗೆ 23 ವರ್ಷದ ತ್ರಿವೇಣಿ ನೂತನ ಮೇಯರ್

ರಾಜ್ಯದ ಅತಿ ಕಿರಿಯ ಮೇಯರ್ ಎಂಬ ಹೆಗ್ಗಳಿಕೆ



ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಕಾಂಗ್ರೆಸ್ ಪಕ್ಷದ ಡಿ.ತ್ರಿವೇಣಿ ಆಯ್ಕೆಯಾಗಿದ್ದು, ಉಪ ಮೇಯರ್ ಆಗಿ ಬಿ.ಜಾನಕಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇನ್ನು ತ್ರಿವೇಣಿ ರಾಜ್ಯದ ಅತಿ ಕಿರಿಯ ಮೇಯರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬಳ್ಳಾರಿ ಪಾಲಿಕೆಗೆ ಬುಧವಾರ ಚುನಾವಣೆ ನಡೆಯಿತು. ಮೇಯರ್ ಸ್ಥಾನ ಪರಿಶಿಷ್ಟ ಜಾತಿಗೆ, ಉಪಮೇಯರ್ ಸ್ಥಾನ ಎಸ್ಟಿ ಮಹಿಳೆಗೆ ಮೀಸಲಿತ್ತು. ಇನ್ನು ಪಾಲಿಕೆಯಲ್ಲಿ 39 ಸದಸ್ಯರಿದ್ದು, ಸಂಸದರು, ಶಾಸಕರ ಮತಗಳಿಂದ ಬಿಜೆಪಿ 16 ಮತಗಳನ್ನು ಹೊಂದಿದ್ದರೆ ಕಾಂಗ್ರೆಸ್ 28 ಮತಗಳನ್ನು ಹೊಂದಿತ್ತು. ಮೇಯರ್ ಸ್ಥಾನಕ್ಕೆ ಕಾಂಗ್ರೆಸ್‌ನಿಂದ 35ನೇ ವಾರ್ಡಿನ ಸದಸ್ಯ ವಿ.ಕುಬೇರ, 7ನೇ ವಾರ್ಡಿನ ಉಮದೇವಿ ಶಿವರಾಜ್ ಮತ್ತು ಡಿ.ತ್ರಿವೇಣಿ ಅವರು, ಬಿಜೆಪಿಯಿಂದ 16ನೇ ವಾರ್ಡಿನ ನಾಗರತ್ನ ನಾಮಪತ್ರ ಸಲ್ಲಿಸಿದ್ದರು. ಈ ಮಧ್ಯೆ ಕಾಂಗ್ರೆಸ್ ಪಕ್ಷದ ಕುಬೇರ ಮತ್ತು ಉಮಾದೇವಿ ನಾಮಪತ್ರ ಪಡೆದಿದ್ದು ಡಿ.ತ್ರಿವೇಣಿ ಮತ್ತು ನಾಗರತ್ನ ಅವರ ನಡುವೆ ಸ್ಪರ್ಧೆ ಏರ್ಪಟ್ಟಿತ್ತು. ಹಾಜರಿದ್ದ 44 ಸದಸ್ಯರ ಪೈಕಿ ತ್ರಿವೇಣಿ 28 ಮತಗಳನ್ನು ಪಡೆದರೆ ನಾಗರತ್ನ 16 ಮತಗಳನ್ನು ಪಡೆದಿದ್ದರು. ಮೇಯರ್ ಆಗಿ ತ್ರಿವೇಣಿ ಆಯ್ಕೆಯನ್ನು ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ ಘೋಷಣೆ ಮಾಡಿದರು.

ಪ್ರಮಾಣ ಪತ್ರ

ಕುಶಾಲಪ್ಪ ಪೂವಯ್ಯ ನಾಪಂಡ ಆದ ನಾನು, ನಂ.240, ನೇತಾಜಿ ನಗರ, ಪೋಲೀಸ್ ಲೇಔಟ್, ಮೈಸೂರು ಇಲ್ಲಿ ವಾಸವಿದ್ದು, ನನ್ನ ಮಗನ ಹೆಸರು ಆಧಾರ್ ಕಾರ್ಡ್‌ನಲ್ಲಿ (ಸಂಖ್ಯೆ: 261329058037) ಲಿಷನ್ ಬೋಪಣ್ಣ ನಾಪಂಡ ಎಂದು ನಮೂದಾಗಿದ್ದು, ಪಾಸ್ ಪೋರ್ಟ್‌ನಲ್ಲಿ (ಸಂಖ್ಯೆ W0963156) ಲಿಷನ್ ಬೋಪಣ್ಣ ಎಂದು ನಮೂದಾಗಿರುತ್ತದೆ. ಆದ್ದರಿಂದ ಪಾಸ್‌ಪೋರ್ಟ್‌ನಲ್ಲಿ ನನ್ನ ಮಗನ ಹೆಸರನ್ನು ಲಿಷನ್ ಬೋಪಣ್ಣ ನಾಪಂಡ ಎಂದು ತಿದ್ದುಪಡಿ ಮಾಡಿಸಲು ಈ ಪ್ರಮಾಣ ಪತ್ರವನ್ನು ನೋಟರಿ ಸಿ.ಎಂ.ಪ್ರಮತೇಶ ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.

ಸಹಿ/- ಕುಶಾಲಪ್ಪ ಪೂವಯ್ಯ ನಾಪಂಡ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೆ:ರಿದ್ಧಿ, ಸಿದ್ಧಿ, ಪಾಲುದಾರಿಕೆ ಸಂಸ್ಥೆ, ನಂಬರ್: 953, 1ನೇ ಅಂತಸ್ತು, ವಿಜಯನಗರ 4ನೇ ಹಂತ, 2ನೇ ಫೇಸ್, ದೇವರಾಜ ಮೊಹಲ್ಲಾ, ಮೈಸೂರು- 570032, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2ನೇ ಫೇಸ್, ಇಲ್ಲಿರುವ ಪೂರ್ವ-ಪಶ್ಚಿಮ: 18 ಮೀಟರ್, ಉತ್ತರ-ದಕ್ಷಿಣ: 12 ಮೀಟರ್, ಒಟ್ಟು ವಿಸ್ತೀರ್ಣ: 216 ಚದರ ಮೀಟರ್ ಅಳತೆಯ ನಿವೇಶನ ಸಂಖ್ಯೆ: 10292 ಇದಕ್ಕೆ ಚಕ್ಕುಬಂದಿ

ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ: 10273, ಉತ್ತರಕ್ಕೆ: ನಿವೇಶನ ಸಂಖ್ಯೆ:10293, ದಕ್ಷಿಣಕ್ಕೆ: ನಿವೇಶನ ಸಂಖ್ಯೆ: 10291

Sd/- M.N Prakash Kalappa, KAR-1996-2000, Advocate & legal Consultant, #67/7A, PRI Complex, # 263, 1st Floor, New Sayyaji Rao Road, Fort Mohalla, Mysuru-570004, Mob: 93431-12535, Email: mnparakashkalappa@gmail.com

ಮೈಸೂರು: 29.03.2023

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ: ಮೈನಪ್ರಾ/ವಿತ/ವಲಯ-2/2022-23 ದಿನಾಂಕ: 29.03.2023

ಪತ್ರಿಕಾ ಪ್ರಕಟಣೆ

ಶ್ರೀ ಎಂ.ಎಸ್.ಅನಂತಪದ್ಮನಾಭ, ಮನೆ ನಂ.134, ವಿಶ್ವಮಾನವ 'ಜ' ಅಡ್ಡರಸ್ತೆ, ಡಿ.ವಿ.ಸಿ ಬಡಾವಣೆ 'ಇ' ಬ್ಲಾಕ್ ಮತ್ತು 'ಎಫ್' ಬ್ಲಾಕ್, ರಾಮಕೃಷ್ಣ ನಗರ, ಮೈಸೂರು-570022 ಇವರಿಗೆ ವಿಭಾಗಾಧಿಕಾರಿಗಳ ಕಛೇರಿಯ ನೌಕರರ ಕ್ಷೇಮಾಭಿವೃದ್ಧಿ & ಸಾಂಸ್ಕೃತಿಕ ಸಂಘ (ರಿ) ವತಿಯಿಂದ ದಟ್ಟಗಳ್ಳಿ (ಡಿ.ವಿ.ಸಿ ಬ್ಲಾಕ್) ಬಡಾವಣೆಯಲ್ಲಿ ಅಳತೆ 9.00X12.00 ಮೀಟರ್ ನಿವೇಶನ ಸಂಖ್ಯೆ.134 ದಿನಾಂಕ: 16.11.1988 ರಂದು ಮಂಜೂರಾಗಿದ್ದು, ಗುತ್ತಿಗೆ ಸಹಿತ ಕ್ರಯದ ಒಪ್ಪಂದ ಪತ್ರವನ್ನು ದಸ್ತಾವೇಜು ಸಂಖ್ಯೆ 4640 ದಿನಾಂಕ: 16.12.1988 ರಂದು ನೋಂದಾಯಿಸಿರುತ್ತಾರೆ. ಸದರಿ ನಿ.ಸಂ. 134 ತಕರಾರಿರುವುದರಿಂದ ಸಂಘದಿಂದ (ದಟ್ಟಗಳ್ಳಿ ಸರ್ವೆ ನಂ. 42/1, 42/2, 43 ಮತ್ತು 36 ಇವುಗಳಲ್ಲಿ ಒಟ್ಟು 8.29 ಎಕರೆ) ದಿನಾಂಕ: 29.06.1990ರಂದು ನಿ.ಸಂ 141 ನ್ನು ಮಂಜೂರು ಮಾಡಲಾಗಿರುತ್ತದೆ ಹಾಗೂ ಸದರಿ ನಿವೇಶನ ಸ್ವಾಧೀನಪತ್ರ ನೀಡುವಂತೆ ಪ್ರಾಧಿಕಾರ ಅಧ್ಯಕ್ಷರಿಗೆ ಸಂಘವು ಪತ್ರ ಬರೆಯಲಾಗಿರುತ್ತದೆ.

ಮೂಲ ಮಂಜೂರಾತಿದಾರರಾದ ಶ್ರೀ.ಎಂ.ಎಸ್.ಅನಂತಪದ್ಮನಾಭ, ಮನೆ ನಂ.134, ವಿಶ್ವಮಾನವ 'ಜ' ಅಡ್ಡರಸ್ತೆ, ಡಿ.ವಿ.ಸಿ ಬಡಾವಣೆ 'ಇ' ಮತ್ತು 'ಎಫ್' ಬ್ಲಾಕ್, ರಾಮಕೃಷ್ಣ ನಗರ, ಮೈಸೂರು-570022 ರವರು ಇವರಿಗೆ ಬದಲಿಯಾಗಿ ನೀಡಿರುವ ನಿ.ಸಂ. 141 ರ ಕ್ರಯಪತ್ರ ಕೋರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ನಿವೇಶನದ ಕ್ರಯಪತ್ರ ಕೋರಿರುವ ಬಗ್ಗೆ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು. ನಿಗದಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ಸಹಿ/- ವಿಶೇಷ ತಹಸೀಲ್ದಾರ್, ವಲಯ ಕಛೇರಿ-2,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

PUBLIC NOTICE

Notice is hereby given that SRI.B.N.GOPAL, son of Sri.B.N.Nagapppa Shetty, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my Office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Site No.10 of the Layout formed by Sri.Siddalingeswara House Building Co-operative Society Limited in Survey No.38 of Nachanahalli Village, Kasaba Hobli, Mysore Taluk, site measuring East to West: 50 Feet and North to South: 80 Feet, totally measuring 4000 Square Feet and bounded on: East: Site No.11, West: Site No.09, North: Road and South: Site No.33 and 34.

Sd/- Dhirendra Kumar R. Mehta,Advocate ,
KEY-ANS LAW SOLUTIONS

Date: 29.03.2023, Place: Mysore

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ವಾ.ವಿ.ನೀ.ಸ ಮತ್ತು ಒ.ಚ. ಪೂರ್ವ ವಿಭಾಗ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ವಾವಿನೀಸ&ಒಚ(ಪೂರ್ವ)/ಟಿಎನ್-20/690/2022-23 ದಿನಾಂಕ : 28-03-2023

ಟೆಂಡರ್ ಅಧಿಸೂಚನೆ
ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 15ನೇ ಹಣಕಾಸು ಅನುದಾನದಡಿ 5 (ಐದು) ಸಂಖ್ಯೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ Kw-4ರ ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ:0821- 2414105 ರಿಂದ ಮಾಹಿತಿ ಪಡೆಯಬಹುದು. ನಿಗಧಿಪಡಿಸಿರುವ ಇ.ಎಂ.ಡಿ.ಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)
	2023-24ನೇ ಸಾಲಿನ 15ನೇ ಹಣಕಾಸು ಅನುದಾನ	
1	ಮೈಸೂರು ನಗರದ ವಾರ್ಡ್ ನಂ.50ರ ಕಾಮರವಾಡಿ ಬೆಸ್ತರಗೇರಿ, ಕುಂಬಾರಗೇರಿ, ಕುರುಬಗೇರಿ, ಗೊಲ್ಲರಗೇರಿ ಭಾಗದ ಡಿ.ಎಂ.ಎ 0203 ಪದೇಶಕ್ಕೆ ಮುಡಾ ಕಛೇರಿ ಪಕ್ಕದಲ್ಲಿ 10.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರವನ್ನು ನಿರ್ಮಿಸಿ, ರಾಮಸ್ವಾಮಿ ವೃತ್ತದ ಸಮೀಪ ಲಿಂಕಿಂಗ್ ಮಾಡುವ ಕಾಮಗಾರಿ	250.00
2	ಮೈಸೂರು ನಗರದ ಹೆಚ್.ಡಿ ಕೋಟೆ ರಸ್ತೆಯಿಂದ ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಮಾರ್ಗವಾಗಿ ರಿಂಗ್ ರಸ್ತೆಯವರೆಗೆ ತ್ಯಾಜ್ಯ ನೀರಿನ ನಿರ್ವಹಣೆಗಾಗಿ ಆರ್.ಸಿ.ಸಿ ಎನ್ ಪಿ-3 ಕೊಳವೆಮಾರ್ಗ ಅಳವಡಿಸಿ, ಯಂತ್ರಗುಂಡಿಗಳನ್ನು ನಿರ್ಮಿಸಿ, ತೆರೆದು ಹರಿಯುತ್ತಿರುವ ತ್ಯಾಜ್ಯ ನೀರನ್ನು ತಡೆಗಟ್ಟುವ ಕಾಮಗಾರಿ.	430.00
3	ಮೈಸೂರು ನಗರದ ಅಜೀಜ್ ಸೇಠ್ ರಸ್ತೆಯ ಉದಯಗಿರಿ ಪೋಲೀಸ್ ಸ್ಟೇಷನ್‌ನಿಂದ ಗೌಸಿಯಾನಗರದ ವರೆಗೂ ತ್ಯಾಜ್ಯ ನೀರಿನ ನಿರ್ವಹಣೆಗಾಗಿ ಮುಖ್ಯ ಕೊಳವೆಮಾರ್ಗ ಅಳವಡಿಸಿ, ಯಂತ್ರಗುಂಡಿಗಳನ್ನು ನಿರ್ಮಿಸುವ ಕಾಮಗಾರಿ.	250.00
4	ಮೈಸೂರು ನಗರದ ಜರ್ಮನ್ ಪ್ರೆಸ್ ನೀರು ಸರಬರಾಜು ಯಂತ್ರಾಗಾರದ ಆವರಣದಲ್ಲಿ 15 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಕಾಮಗಾರಿ	325.00
5	ಮೈಸೂರು ನಗರದ ಕುಂಬಾರಕೊಪ್ಪಲು, ಬೃಂದಾವನ ಬಡಾವಣೆಯಿಂದ ಯಾದವಗಿರಿ ಇಂಡಸ್ಟ್ರಿಯಲ್ ಏರಿಯಾ ವರೆಗೆ ತ್ಯಾಜ್ಯ ನೀರಿನ ನಿರ್ವಹಣೆಗಾಗಿ ಮುಖ್ಯ ಕೊಳವೆ ಮಾರ್ಗ ಅಳವಡಿಸಿ, ಯಂತ್ರ ಗುಂಡಿಗಳನ್ನು ನಿರ್ಮಿಸುವ ಕಾಮಗಾರಿ.	300.00
	ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ	1555.00

ಮೇಲಿನ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಕೆಳಕಂಡಂತಿವೆ.

1	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	29.03.2023	ಬೆಳಗ್ಗೆ 10.00 ಗಂಟೆ ನಂತರ
2	ಟೆಂಡರ್ ಬಗ್ಗೆ ವಿಚಾರಣೆ / ಸ್ಪಷ್ಟೀಕರಣ ಕೋರಲು ಕೊನೆಯ ದಿನಾಂಕ ಮತ್ತು ಕಾಲ	03.05.2023	ಸಂಜೆ 5.30 ಗಂಟೆ
3	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	03.05.2023	ಸಂಜೆ 5.30 ಗಂಟೆ
4	ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಕಾಲ	04.05.2023	ಸಂಜೆ 5.45 ಗಂಟೆ ನಂತರ

ಸಹಿ/- ಕಾರ್ಯಪಾಲಕ ಅಭಿಯಂತರು
ನೀಸ & ಒಚ ಪೂರ್ವ ವಿಭಾಗ, ಮೈನಪಾ, ಮೈಸೂರು

ಕರ್ನಾಟಕ ಸರ್ಕಾರ - ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು
ದೊಡ್ಡಜಾತ್ರಾ ಮಹೋತ್ಸವ-2023

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1945 ಕ್ಕೆ ಸಲ್ಲುವ ಶ್ರೀಶೋಭಕೃತ್‌ನಾಮ ಸಂವತ್ಸರದ 2023ನೇ ಸಾಲಿನ ಶ್ರೀ ಗೌತಮ ಪಂಚಮಹಾ ರಥೋತ್ಸವ ಮತ್ತು ತೆಪ್ಪೋತ್ಸವ ವಿವರ

ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು:

1. ದಿ: 30.03.2023 ಗುರುವಾರ	ಸಂಜೆ: 7.00 ಗಂಟೆಗೆ	"ಶ್ರೀ ಶ್ರೀಕಂಠಮುಡಿ ಉತ್ಸವ"
2. ದಿ: 02.04.2023 ಭಾನುವಾರ	ಬೆಳಿಗ್ಗೆ 06.00ರಿಂದ 06.40 ಗಂಟೆಯೊಳಗೆ	"ಶ್ರೀ ಮನ್ಮಹಾಗೌತಮ ರಥಾರೋಹಣ"
3. ದಿ: 04.04.2023 ಮಂಗಳವಾರ	ಸಂಜೆ: 7.00 ಗಂಟೆಗೆ	"ಕಪಿಲಾ ನದಿಯಲ್ಲಿ, ತೆಪ್ಪೋತ್ಸವ"

ಭಕ್ತ ಮಹಾಶಯರುಗಳಾದ ತಾವುಗಳು ಸಪರಿವಾರ ಸಮೇತ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಶ್ರೀ ಪಾರ್ವತಿ ಸಮೇತ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿದೆ.

ರಥೋತ್ಸವದ ಆಚಾರ್ಯತ್ವ ಶ್ರೀ ಜೆ.ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಸರ್ವರಿಗೂ ಆದರದ ಸುಸ್ವಾಗತ

ಸಹಿ/- ಜಗದೀಶ್ ಕುಮಾರ್.ಎಂ, ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು
ಸಹಿ/- ಕವಿತ ರಾಜಾರಾಂ ಕ.ಆ.ಸೆ. (ಆಯ್ಕೆ ಶ್ರೇಣಿ) ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಸಹಿ/- ಡಾ|| ರಾಜೇಂದ್ರ.ಕೆ.ವಿ.ಭಾ.ಆ.ಸೇ., ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಸಹಿ/- ಬಸವರಾಜೇಂದ್ರ. ಹೆಚ್ ಭಾ.ಆ.ಸೇ. ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು, ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು.

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2023ಕ್ಕೆ 43 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 44ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2023 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋಮ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

- **ಕೊಡಗು:** ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 08272223517, 9731469871
- **ಮಂಡ್ಯ:** ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325
- **ಶ್ರೀರಂಗಪಟ್ಟಣ:** ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9636893234
- **ಹುಣಸೂರು:** ಕೆ. ಕೃಷ್ಣ (ಕಿಟ್ಟಿ), EWS 204, KHB ಕಾಲೋನಿ, ಹುಣಸೂರು 9448720626
- **ಚಾಮರಾಜನಗರ:** ಸಿದ್ದಲಿಂಗಸ್ವಾಮಿ 9242266657
- **ಟಿ. ನರಸೀಪುರ:** ಕುಮಾರ್ 9986719590
- **ಗುಂಡ್ಲುಪೇಟೆ:** ಸೋಮಶೇಖರ್ 9845995426
- **ಕೆ.ಆರ್. ನಗರ:** ಕೆ.ಎ. ರಮೇಶ್ 9448021368
- **ಮಳವಳ್ಳಿ:** ಶಿವಕುಮಾರ್, ನಂ.47, 1ನೇ ಕ್ರಾಸ್ 9632407806
- **ಕೊಳ್ಳೇಗಾಲ:** ರಾಜು, ಮೈಸೂರು ಮಿತ್ರ ರಿಪೋರ್ಟರ್, ಕೊಳ್ಳೇಗಾಲ 9916621007
- **ಹಾಸನ:** ಆರ್.ಎನ್.ಸೋಮಶೇಖರ್ 9448401176
- **ಕುಶಾಲನಗರ:** ರಘು, ಮೈಸೂರು ಮಿತ್ರ ರಿಪೋರ್ಟರ್, ಕುಶಾಲನಗರ 9845698401
- **ಪಿರಿಯಾಪಟ್ಟಣ:** ವಿರೇಶ್, ಪಿರಿಯಾಪಟ್ಟಣ 8660057128
- **ಜಯಪುರ:** ಜಿಟಿಗಿರಿ, ಜಯಪುರ 9945479288
- **ವಿರಾಜಪೇಟೆ:** ಮಂಜುನಾಥ, ವಿರಾಜಪೇಟೆ 9900949353
- **ಕೆ.ಆರ್.ಪೇಟೆ:** (ಶ್ರೀನಿವಾಸ) 9449326847, 7022757436
- **ಹೆಚ್.ಡಿ.ಕೋಟೆ:** ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452
- **ಕೆ.ಎಂ.ದೊಡ್ಡಿ:** ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
- **ನಂಜನಗೂಡು:** ರಂಗಸ್ವಾಮಿ, ನಂ.4565, ಕಪಿಲ ಕಾಲೋನಿ, ನಂಜನಗೂಡು ಟೌನ್-571301 9901602226
- **ಹುಣಸೂರು:** ಹೆಚ್.ಆರ್. ಕೃಷ್ಣಕುಮಾರ್ 9060406093
- **ಕೊಳ್ಳೇಗಾಲ:** ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು